ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 3 ಸೋಮವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 48 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಡ್ಡಾಯ ಮತದಾನಕ್ಕೆ ಎನ್‌ಡಿಎ ಅಭ್ಯರ್ಥಿ ವಿವೇಕಾನಂದ ಮನವಿ

ಮೈಸೂರು, ಜೂ.2– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಜೆಡಿಎಸ್–ಬಿಜೆಪಿ ಮೈತ್ರಿಕೂಟ (ಎನ್‌ಡಿಎ)ದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಅವರು ಕಡ್ಡಾಯವಾಗಿ ಮತದಾನ ಮಾಡುವಂತೆ ಶಿಕ್ಷಕ ಮತದಾರರಲ್ಲಿ ಮನವಿ ಮಾಡಿದ್ದಾರೆ.

ಎಲ್ಲಾ ಚುನಾವಣೆಗಳಲ್ಲೂ ಪ್ರಮುಖ ಪಾತ್ರ ವಹಿಸುವ ಶಿಕ್ಷಕರು, ತಮ್ಮ ಪ್ರತಿನಿಧಿ ಆಯ್ಕೆ ಬಗ್ಗೆ ನಿರಾಸಕ್ತಿ ತೋರಬಾರದು. ತಮ್ಮ ಅತ್ಯಮೂಲ್ಯ ಮತವನ್ನು ಚಲಾಯಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸಬೇಕು. ಪ್ರಬುದ್ಧ ಮತದಾರರಾದ ತಾವು ಯಾವುದೇ ಅಪಪ್ರಚಾರ, ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು. ಯಾವುದೇ ರೀತಿಯ ಲಾಭವನ್ನೂ ನಿರೀಕ್ಷಿಸದೆ ಸೇವಾ ಮನೋಭಾವದೊಂದಿಗೆ ಪ್ರಾಮಾಣಿಕವಾಗಿ, ಶಿಕ್ಷಕರ ಪರವಾಗಿ ವಿಧಾನ ಪರಿಷತ್‌ನಲ್ಲಿ ಧ್ವನಿ ಎತ್ತುವ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಾಗಿರುವುದು ನಿಮ್ಮ ಕರ್ತವ್ಯವಾಗಿದೆ. ವಿಧಾನಪರಿಷತ್‌ನಲ್ಲಿ ಬದಲಾವಣೆ ಗಾಳಿ ಬೀಸಲು ಶಿಕ್ಷಕರು ಉದಾಹರಣೆಯಾಗಿರಬೇಕು. ಈ ನಿಟ್ಟಿನಲ್ಲಿ ಶಿಕ್ಷಕ ಮತ ಬಾಂಧವರು ತಪ್ಪದೇ ಮತ ಚಲಾಯಿಸಿ ಎಂದು ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ. ವಿವೇಕಾನಂದ ಮನವಿ ಮಾಡಿದ್ದಾರೆ.



ಮರಿತಿಬ್ಬೇಗೌಡರ ಪರ ಪ್ರಚಾರ



ಪದವಿ ಪೂರ್ವ ಕಾಲೇಜು ಬೋಧಕ ಹಾಗೂ ಬೋಧಕೇತರ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಹೆಚ್.ಡಿ.ಕೋಟೆ ಸೆಂಟ್ ಮೇರಿಸ್ ಕಾಲೇಜಿನಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮತಯಾಚಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಹೆಚ್.ಜಿ.ಸುರೇಶ್‌ಬಾಬು, ಉಪಾಧ್ಯಕ್ಷ ಹೆಚ್.ಡಿ.ಯೋಗೇಂದ್ರ, ಮುಖಂಡರಾದ ರಾಜೇಂದ್ರ, ನಿವೃತ್ತ ಉಪನ್ಯಾಸಕ ಹೆಚ್.ಎ.ಸರ್ವೇಶ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ವಾರ್ಷಿಕೋತ್ಸವ



ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ಜೀರ್ಣೋದ್ಧಾರ, ಸಂಪ್ರೋಕ್ಷಣೆಯ ಒಂದು ವರ್ಷದ ಅಂಗವಾಗಿ ಶ್ರೀ ವೇಣುಗೋಪಾಲಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ, ಮಹಾ ಮಂಗಳಾರತಿ ಪ್ರಸಾದ ವಿನಿಯೋಗ ನಡೆಯಿತು. ಈ ವೇಳೆ ಪ್ರಧಾನ ಅರ್ಚಕರಾದ ಟಿ.ಎನ್.ಅಭಿಜಿತ್, ಟಿ.ಎಸ್.ಅರುಣ್, ನಾಗಮಣಿ, ನಾಗರಾಜನ್, ಸ್ವಪ್ನ ಅಭಿಜಿತ್, ವೈಷ್ಣವಿ, ಹಿಟ್ಟುವಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.


ಪತ್ನಿಯಿಂದ ಮಾನಸಿಕ ಹಿಂಸೆ; ಪತ್ರ ಬರೆದಿಟ್ಟು ವ್ಯಕ್ತಿ ನಾಪತ್ತೆ



ಮನೋಜ್

ಮೈಸೂರು, ಜೂ.2– ಪತ್ನಿ ಮಾನಸಿಕ ಹಿಂಸೆ ನೀಡುತ್ತಿದ್ದಾಳೆ ಎಂದು ಪತ್ರ ಬರೆದಿಟ್ಟು ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಅಶೋಕಪುರಂ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಡಿ.ಮನೋಜ್‌ಕುಮಾರ್ (36) ಮೇ 30ರಂದು ಬೆಳಗ್ಗೆ ನನ್ನ ಹೆಂಡತಿ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದು, ಇದರಿಂದ ಮನನೊಂದು ನಾನು ಮನೆ ಬಿಟ್ಟು ಹೋಗುತ್ತಿದ್ದೇನೆ ಎಂದು ಪತ್ರ ಬರೆದಿಟ್ಟು, ಕೆಎ 09 ಹೆಚ್‌ಎಸ್ 8566 ಸಂಖ್ಯೆಯ ಹೋಂಡಾ ಆಕ್ಟಿವಾ ಸ್ಕೂಟರ್‌ನೊಂದಿಗೆ ನಾಪತ್ತೆಯಾಗಿದ್ದಾನೆ ಎಂದು ಈತನ ತಾಯಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಈತನ ಬಗ್ಗೆ ಸುಳಿವು ಸಿಕ್ಕಲ್ಲಿ ಅಶೋಕಪುರಂ ಠಾಣೆ ನಂ: 0821-2418321/339 ರೂಂಗೆ ಕರೆ ಮಾಡುವಂತೆ ಪೊಲೀಸರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

3.06.2024 ಸೋಮವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ
- **ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥೀಯ ಪೂರ್ವಾದಿ ಮಠ, ಮನ್ನಿತ್ಯಾಂ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ, ಶ್ರೀ ವ್ಯಾಸ ತೀರ್ಥ ವಿದ್ಯಾಪೀಠ:** ಶ್ರೀ ಮದ್ವಬ್ಬ ಸೂತ್ರ-ಶ್ರೀಮದನುವ್ಯಾಖ್ಯಾನ-ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀ ಪಾದರ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6 ಗಂಟೆಗೆ ಸಂಸ್ಥಾನ ಪೂಜೆ, ಬೆಳಗ್ಗೆ 9 ಗಂಟೆಗೆ ಶ್ರೀ ಮನ್ನ್ಯಾಯ ಸುಧಾ ಪರೀಕ್ಷೆ, ಸಂಜೆ 6 ಗಂಟೆಗೆ ದಾಸವಾಣಿ ವಿದ್ವಾನ್ ಸಮೀರಾಚಾರ್ಯ ಸೋಸಲೆ ಅವರಿಂದ, ಸ್ಥಳ: ಶ್ರೀ ವ್ಯಾಸ ತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15 ಗೀತಾರಾಧನ, 6.35. / 6.10 "ವಿಶ್ವ ವಿಖ್ಯಾತ ವಿಜ್ಞಾನಿಗಳು" ಬಾನುಲಿ ಸರಣಿ, ಲೇಖನ: ಶ್ರೀನಿವಾಸ ಪ್ರಸಾದ್ ಪ್ರಸ್ತುತಿ: ಎಸ್.ಲಕ್ಷ್ಮೀನಾರಾಯಣ, 6.40– "ನಾನು ನ.ರತ್ನ" ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ): 1.ಆಚಾರ್ಯ ವಿನೋಬಾ ಭಾವೆಯವರನ್ನು ಕುರಿತು ಮಾತನಾಡಿರುವವರು ಮೇಲುಕೋಟೆಯ ಅರೆಯಾರ್ ಸ್ವಾಮೀಜಿ 2.ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಸಾಹಿತಿ ಪ್ರೊ.ಎಂ.ಗೋಪಾಲಕೃಷ್ಣ ಅಡಿಗರಿಂದ ಸ್ವರಚಿತ ಕವನ ವಾಚನ 10.00 ಶಾಸ್ತ್ರೀಯ ಸಂಗೀತ: ಜಿ.ಎಸ್.ಕಮಲ ಮತ್ತು ಜಿ.ಎಸ್.ರಾಜಲಕ್ಷ್ಮೀ ಗಾಯನ11.00 ಮಿಶ್ರ ಮಾಧುರ್ಯ 12.30 ದೇವರನಾಮ–ಡಿ.ಪುರುಷೋತ್ತಮ 12.45 ನಮ್ಮ ಆರೋಗ್ಯ–ಪೂರಕ ಆಹಾರ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ. ಮಕ್ಕಳಿಗೆ ಪೂರಕ ಆಹಾರ' ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ ಮತ್ತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ನಾಗೇಂದ್ರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೆದ್ರೆ ಮಂಜುನಾಥ್ 1.20 ಭಾವಗೀತೆಗಳು–ವಿನುತ. ಬಿ.ಜಿ 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್ ಗುಡಿ ಜಿ.ಜೆ.ಆರ್.ಕೃಷ್ಣನ್ ಮತ್ತು ಲಾಲ್ ಗುಡಿ ವಿಜಯಲಕ್ಷ್ಮಿ ಯವರ ವಯೋಲಿನ್ 4.00 ಮಹಿಳೆಯರಿಗೆ "ನಾನು ನನ್ನ ಕಂಪನಿ" ವಿಷಯ: ಮೈಸೂರಿನ ಲಕ್ಷ್ಮೀ ಪುರದಲ್ಲಿರುವ ಸುವಾಸಿತ ಮೊಂಬತ್ತಿ ತಯಾರಿಕಾ ಘಟಕದ ಮಹಿಳೆಯರೊಂದಿಗೆ ಮಾತುಕತೆ. ಪ್ರಸ್ತುತಿ: ಕೆ.ಜಿ.ಮೀನಾ 4.45 ಹಿಂದಿ ಪಾಠ ಶಾಲಾ. ಡೀಲೆ 5.45 ನಾನುನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.55–ಕೃಷಿರಂಗ ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಮುಂಗಾರಿಗೆ ತೋಟಗಾರಿಕಾ ಇಲಾಖೆ ಅಭಿವೃದ್ಧಿ ಯೋಜನೆಗಳು. ಈ ಕುರಿತು ಮಂಡ್ಯ ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕ ಕೆ.ಎನ್.ರೂಪಶ್ರೀ ಅಮೋಂಗಿಗೆ ಸಂದರ್ಶನ ಸಂದರ್ಶಕರು: ಎನ್.ಕೇಶವ ಮೂರ್ತಿ 8.30 ಹಿಂದಿ ಚಿತ್ರಗೀತೆಗಳು, 10.00 ನಾಟಕ ಕೊಂಡೇ ನಾಳು ನಾಟಕೋಳಿ ನಂಜಮ್ಮ ರಚನೆ: ಡಾ.ಜಿ.ವಿ. ಮುರಳಿಕೃಷ್ಣ ನಿರ್ಮಾಣ: ಪ್ರಭುಸ್ವಾಮಿ ಮಳೀಮಠ್ 10.30 ಸವಿನೆನಪು

ಕೃಷಿ ಪರಿಕರ ಸರಬರಾಜುದಾರರು, ವಿತರಕರ ಸಭೆ

ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಆಗಬಾರದು: ಡಿಸಿ ಡಾ.ರಾಜೇಂದ್ರ

ಮೈಸೂರು, ಜೂ.2– ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಕೃಷಿ ಪರಿಕರ ಸರಬರಾಜುದಾರರು ಹಾಗೂ ವಿತರಕರ ಸಭೆ ನಡೆಯಿತು.

2024–25ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗೆ ಬೇಕಾಗುವ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕಗಳ ದಾಸ್ತಾನುಗಳ ಲಭ್ಯತೆಯಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಪರಿಶೀಲಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಎಲ್ಲಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೆ ಸೂಚಿಸಿದರು.

ರೈತರು ಇಚ್ಛಿಸುವ ರಸಗೊಬ್ಬರದ ಜೊತೆ ಲಿಂಕ್ ಮಾಡಿ ಮತ್ತೊಂದು ಗೊಬ್ಬರವನ್ನು ಮಾರಾಟಗಾರರು ವಿತರಿಸಬಾರದು ಹಾಗೂ ರಸಗೊಬ್ಬರಗಳನ್ನು ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿದಲ್ಲಿ ರಸಗೊಬ್ಬರ ನಿಯಂತ್ರಣ ಕಾಯಿದೆ ಆದೇಶದಂತೆ ಕ್ರಮಕೈಗೊಳ್ಳಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.



ಬೆಳೆ ವಿಮೆ ಯೋಜನೆಯ ಕರಪತ್ರ ಹಾಗೂ ಪೋಸ್ಟರ್‌ಗಳನ್ನು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಬಿಡುಗಡೆಗೊಳಿಸಿದರು.

ಜಿಲ್ಲೆಯಲ್ಲಿ ಎಲ್ಲಿಯೂ ಬಿತ್ತನೆ ಬೀಜಗಳು, ರಸಗೊಬ್ಬರಗಳು ಹಾಗೂ ಕೀಟನಾಶಕಗಳ ಕೊರತೆ ಉಂಟಾಗದಂತೆ ಸಮರ್ಪಕ ದಾಸ್ತಾನು ಮಾಡಬೇಕು. ಪ್ರಸ್ತುತ ವರ್ಷ ವಾಡಿಕೆಗಿಂತ ಹೆಚ್ಚಿನ ಮಳೆ ಬೀಳುವ ಸಂಭವವಿರುವುದರಿಂದ ಯಾವುದೇ ಪರಿಕರಗಳ ಲಭ್ಯತೆಯಲ್ಲಿ ವ್ಯತ್ಯಾಸವಾಗದಂತೆ ಅಧಿಕೃತ ಬಿಲ್ಲನ್ನು ರೈತರಿಗೆ ನೀಡುವಂತೆ ಕ್ರಮ ವಹಿಸಲು ಸೂಚಿಸಿದರು.

2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆ ವಿಮೆ ನೋಂದಾಯಿಸಿಕೊಳ್ಳಲು ಕ್ರಮವಹಿಸುವಂತೆ ಕೃಷಿ ಪರಿಕರ ಮಾರಾಟಗಾರರ ಸಂಘದವರು ಸಹಕರಿಸಬೇಕು ಹಾಗೂ ಕೃಷಿ ಪರಿಕರ ಮಾರಾಟ ಮಳಿಗೆಯಲ್ಲಿ ಬೆಳೆ ವಿಮೆಗೆ ಸಂಬಂಧಿಸಿದ ಪೋಸ್ಟರ್ ಪ್ರದರ್ಶಿಸಬೇಕು ಎಂದರು.

ರೈತರ ಪ್ರಸ್ತುತ ಸಮಸ್ಯೆಗಳ ಕುರಿತು ಕೃಷಿ ಪರಿಕರ ಮಾರಾಟಗಾರರ ಸಂಘದವರ ಮೂಲಕ ರೈತರಿಗೆ ತರಬೇತಿ ನೀಡಬೇಕು ಎಂದು ತಿಳಿಸಿದರು.

ಬೆಳೆ ವಿಮೆ ಯೋಜನೆಯ ಕರಪತ್ರ ಹಾಗೂ ಪೋಸ್ಟರ್‌ಗಳನ್ನು ಜಿಲ್ಲಾಧಿಕಾರಿಗಳು ಬಿಡುಗಡೆಗೊಳಿಸಲಾಯಿತು. ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್, ವಿವಿಧ ಕಂಪನಿಯ ರಸ ಗೊಬ್ಬರ ವಿತರಕರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕ ಮಾರಾಟಗಾರರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾಮಂಡಳಿ ಅಧಿಕಾರಿಗಳು, ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಹಾಗೂ ಕೃಷಿ ಇಲಾಖೆ ಇತರೆ ಅಧಿಕಾರಿಗಳು ಹಾಜರಿದ್ದರು.

> "ರಸಗೊಬ್ಬರ ಸಾಗಾಣಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಹೆಚ್ಚಿನ ದರವನ್ನು ಸಾಗಾಣಿಕೆದಾರರು ನಿಗದಿಪಡಿಸಲಾಗುತ್ತಿದ್ದು ಈ ಬಗ್ಗೆ ಡೀಸೆಲ್ ಹಾಗೂ ಇತರೆ ವೆಚ್ಚಗಳ ಏರಿಕೆಯಾಗದಿರುವುದರಿಂದ ಸಂಬಂಧಿಸಿದ ಲಾರಿ ಮಾಲೀಕರ ಸಂಘ ಹಾಗೂ ಲಾರಿ ಅಸೋಸಿಯೇಷನ್ ಪದಾಧಿಕಾರಿಗಳೊಡನೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಜಂಟಿ ಕೃಷಿ ನಿರ್ದೇಶಕರು ಸಭೆ ನಡೆಸಿ ರೈತರಿಗೆ ರಸಗೊಬ್ಬರ ಸರಬರಾಜಿನಲ್ಲಿ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ.
> **–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ**

ಮತ ಎಣಿಕೆ: ವಾಹನಗಳ ಸಂಚಾರ, ನಿಲುಗಡೆಗೆ ನಿರ್ಬಂಧ

ಮೈಸೂರು, ಜೂ.2– ಜೂ.4ರಂದು ಲೋಕಸಭಾ ಚುನಾವಣೆಯ ಮತ ಎಣಿಕೆ ಕಾರ್ಯವು ಮೈಸೂರು ನಗರದ ವಾಲ್ಮೀಕಿ ರಸ್ತೆಯಲ್ಲಿನ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನಡೆಯಲಿದ್ದು, ಮತ ಎಣಿಕೆ ದಿನದಂದು ಮತ ಎಣಿಕೆ ಸ್ಥಳದ ಸುತ್ತಲಿನ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಲಿದ್ದು, ಸಾರ್ವಜನಿಕರಿಗೆ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಮತ ಎಣಿಕೆ ಸ್ಥಳದ ಸುತ್ತಲಿನ ರಸ್ತೆಗಳಲ್ಲಿ ವಾಹನಗಳ ಸಂಚಾರ ಮತ್ತು ನಿಲುಗಡೆಯ ಮೇಲೆ ನಿರ್ಬಂಧ ವಿಧಿಸಿ, ಕೆಎಸ್ ಆರ್‌ಟಿಸಿ ಬಸ್‌ಗಳಿಗೆ ಬದಲಿ ಮಾರ್ಗ ಕಲ್ಪಿಸಿ ಆದೇಶ ಹೊರಡಿಸಲಾಗಿದೆ.

ಜೂ.4ರಂದು ಬೆಳಿಗ್ಗೆ 5 ಗಂಟೆಯಿಂದ ಸಂಜೆ 5ರವರೆಗೆ ಕೆಎಸ್‌ಆರ್‌ಟಿಸಿ ಬಸ್ಸುಗಳು ಸಂಚರಿಸಬೇಕಾದ ಮಾರ್ಗ: ಮೈಸೂರು ನಗರದ ಕಡೆಯಿಂದ ಹುಣಸೂರು ಕಡೆಗೆ ಸಂಚರಿಸುವ ಕೆಎಸ್ ಆರ್‌ಟಿಸಿ ಬಸ್ಸುಗಳು–ರಾಮಸ್ವಾಮಿ ವೃತ್ತ–ಮುಡಾ ಜಂಕ್ಷನ್–ಮೆಟ್ರೋಪೋಲ್ ವೃತ್ತ–ಎಡತಿರುವು–ಹುಣಸೂರು ರಸ್ತೆ–ಕಲಾಮಂದಿರ ಜಂಕ್ಷನ್– ಎಡ ತಿರುವು–ಕುಕ್ಕರಹಳ್ಳಿ ರೈಲ್ವೇ ಗೇಟ್ ಜಂಕ್ಷನ್–ಡಾ.ಪದ್ಮ ವೃತ್ತ–ವಿಎಂಡಿ ಜಂಕ್ಷನ್–ಬೋಗಾದಿ ರಸ್ತೆಯಲ್ಲಿ ಮುಂದುವರೆದು ಬೋಗಾದಿ ರಿಂಗ್ ರಸ್ತೆ ಮೂಲಕ ಹುಣಸೂರು ರಸ್ತೆ ತಲುಪುವುದು.

ಮಡಿಕೇರಿ, ಹುಣಸೂರು, ಹಾಸನ ಕಡೆಯಿಂದ ಮೈಸೂರು ನಗರಕ್ಕೆ ಬರುವ ಕೆಎಸ್‌ಆರ್‌ಟಿಸಿ ಬಸ್ಸು ಗಳು ಸೆಂಟ್ ಜೋಸೆಫ್ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಟೆಂಪಲ್ ರಸ್ತೆಯಲ್ಲಿ ಸಾಗಿ ವಿ.ವಿ.ಪುರದ ವೃತ್ತದಲ್ಲಿ ಬಲತಿರುವು ಪಡೆದು ಕೆಆರ್‌ಎಸ್ ರಸ್ತೆ–ದಾಸಪ್ಪ ವೃತ್ತ–ಮೆಟ್ರೋಪೋಲ್ ವೃತ್ತದ ಮೂಲಕ ಮುಂದೆ ಸಾಗುವುದು.

ವಾಹನಗಳ ಸಂಚಾರವನ್ನು ನಿರ್ಬಂಧಿಸಿರುವ ರಸ್ತೆಗಳು: ಕಲಾಮಂದಿರ ಜಂಕ್ಷನ್ನಿಂದ ಪಡುವಾರಹಳ್ಳಿ ಜಂಕ್ಷನ್‌ವರೆಗೆ ಹುಣಸೂರು ರಸ್ತೆಯ ಎರಡು ಕಡೆಗಳಲ್ಲಿ ಸಂಚರಿಸುವ ರಸ್ತೆ, ವಾಲ್ಮೀಕಿ ರಸ್ತೆ–ಕೆಆರ್‌ಎಸ್ ರಸ್ತೆ ಜಂಕ್ಷನ್‌ನಿಂದ ಹುಣಸೂರು ರಸ್ತೆ ವಾಲ್ಮೀಕಿ ರಸ್ತೆ ಜಂಕ್ಷನ್‌ವರೆಗಿನ ಹಾಗೂ ಮಾತೃ ಮಂಡಳಿ ವೃತ್ತದಿಂದ ವಾಲ್ಮೀಕಿ ರಸ್ತೆ ಲೀಲಾ ಚೆನ್ನಯ್ಯ ಜಂಕ್ಷನ್‌ವರೆಗೆ ಆದಿಪಂಪ ರಸ್ತೆಯಲ್ಲಿ ಸಂಚರಿಸುವ ಚುನಾವಣಾ ಅಗತ್ಯ ಕರ್ತವ್ಯ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಮಾಧ್ಯಮದವರು, ಚುನಾವಣಾ ಅಭ್ಯರ್ಥಿಗಳು ಮತ್ತು ಪಕ್ಷದ ಏಜೆಂಟರುಗಳ ವಾಹನಗಳು ಸಂಚರಿಸುವ ಮಾರ್ಗ & ಪಾರ್ಕಿಂಗ್ ಸ್ಥಳ: ದಾಸಪ್ಪ ವೃತ್ತದ ಮೂಲಕ ಆಗಮಿಸುವವರು; ದಾಸಪ್ಪ ವೃತ್ತ–ವಿವೇಕಾನಂದ ಪ್ರತಿಮೆ ಜಂಕ್ಷನ್–ರಾಮ ಮಂದಿರ ಜಂಕ್ಷನ್–ಎಡ ತಿರುವು–ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪ ಜಂಕ್ಷನ್–ಬಲ ತಿರುವು–ಆದಿ ಪಂಪ ರಸ್ತೆ–ನಾರಾಯಣಸ್ವಾಮಿ ಬ್ಲಾಕ್–ಎಡ ತಿರುವು ಪಡುವಾರಹಳ್ಳಿ ಮಹದೇಶ್ವರ ದೇವ ಸ್ಥಾನದ ಹಿಂಭಾಗದ ಮೈದಾನದಲ್ಲಿ ಕಾರುಗಳನ್ನು ಪಾರ್ಕಿಂಗ್ ಮಾಡುವುದು. ದ್ವಿಚಕ್ರ ವಾಹನ ಸವಾರರು ಪಡುವಾರಹಳ್ಳಿ ಜೋಡಿ ಮಾರಮ್ಮ ದೇವ ಸ್ಥಾನದ ಮುಂಭಾಗದ ಖಾಲಿ ಜಾಗದಲ್ಲಿ ಪಾರ್ಕಿಂಗ್ ಮಾಡುವುದು. ಹುಣಸೂರು ರಸ್ತೆ ಮೂಲಕ ಆಗಮಿಸುವವರು ಸೆಂಟ್ ಜೋಸೆಫ್ ಜಂಕ್ಷನ್–ಎಡ ತಿರುವು–ಟೆಂಪಲ್ ರಸ್ತೆ–ಮಾತೃ ಮಂಡಳಿ ಜಂಕ್ಷನ್–ಬಲ ತಿರುವು–ಆದಿಪಂಪ ರಸ್ತೆ–ನಾರಾಯಣ ಸ್ವಾಮಿ ಬ್ಲಾಕ್–ಬಲ ತಿರುವು–ಪಡುವಾರಹಳ್ಳಿ ಮಹದೇಶ್ವರ ದೇವಸ್ಥಾನದ ಹಿಂಭಾಗದ ಮೈದಾನದಲ್ಲಿ ಕಾರುಗಳನ್ನು ಪಾರ್ಕಿಂಗ್ ಮಾಡುವುದು.

> **ಬದಲಿ ಮಾರ್ಗ:** ಮೈಸೂರು ನಗರದಿಂದ ಹುಣಸೂರು ಕಡೆಗೆ ಹೋಗುವ ವಾಹನಗಳು ಡಿಸಿ ಕಚೇರಿ ಆರ್ಚ್‌ಗೇಟ್ ಜಂಕ್ಷನ್‌ನಿಂದ ವೀರೇಂದ್ರ ಹೆಗ್ಗಡೆ ವೃತ್ತದ ಕಡೆಗೆ ಸಂಚರಿಸುವ ವಾಹನಗಳು ಕಲಾಮಂದಿರ ಜಂಕ್ಷನ್ ಬಳಿ ಎಡ ತಿರುವು ಪಡೆದು ಕುಕ್ಕರಹಳ್ಳಿ ರೈಲ್ವೇ ಗೇಟ್ ಜಂಕ್ಷನ್–ಡಾ.ಪದ್ಮ ವೃತ್ತ–ವಿ.ಎಂ.ಡಿಜಂಕ್ಷನ್–ಬೋಗಾದಿ ರಸ್ತೆಯಲ್ಲಿ ಮುಂದೆ ಸಾಗುವುದು. ಹಾಸನ, ಮಡಿಕೇರಿ, ಹುಣಸೂರು ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ವಾಹನಗಳು ಸೆಂಟ್ ಜೋಸೆಫ್ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಟೆಂಪಲ್ ರಸ್ತೆ–ಬಿ.ಸಿ.ಅಂಗಯ್ಯ ವೃತ್ತ–ಕೆಆರ್‌ಎಸ್ ರಸ್ತೆ ಮೂಲಕ ಮುಂದೆ ಸಾಗುವುದು. ಹಾಸನ, ಮಡಿಕೇರಿ, ಹುಣಸೂರು ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ವಾಹನಗಳು ಪಡುವಾರಹಳ್ಳಿ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಬಯಲುರಂಗ ಮಂದಿರ ರಸ್ತೆ–ವಿ.ಎಂ.ಡಿ ಜಂಕ್ಷನ್ ಮೂಲಕ ಮುಂದೆ ಸಾಗುವುದು.

ಹೋಟೆಲ್ ಮುಂದೆ ಅಡ್ಡಾದಿಡ್ಡಿ ಕಾರು ನಿಲುಗಡೆ ಪ್ರಶ್ನಿಸಿದ ವೈದ್ಯರ ಮೇಲೆ ಹಲ್ಲೆ

ಮೈಸೂರು, ಜೂ.2(ಬಿಎಲ್‌ಯು)– ಸಂಚಾರಕ್ಕೆ ಅಡ್ಡಿಯಾಗುವಂತೆ ಹೋಟೆಲ್ ಮುಂದೆ ಅಡ್ಡಾದಿಡ್ಡಿಯಾಗಿ ಕಾರು ನಿಲುಗಡೆ ಮಾಡಿರುವುದನ್ನು ಪ್ರಶ್ನಿಸಿದ ವೈದ್ಯರ ಮೇಲೆ ಗುಂಪೊಂದು ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಕೆಸಿ ಲೇಔಟ್‌ನಲ್ಲಿ ಭಾನುವಾರ ಸಂಭವಿಸಿದೆ.

ನಗರದ ಕೆಸಿ ಲೇಔಟ್ ವಾಸಿ ಡಾ.ವಿಭು ಧವನ್ ಹಲ್ಲೆಗೊಳಗಾದ ವೈದ್ಯರಾಗಿದ್ದಾರೆ. ಕೆಸಿ ಲೇಔಟ್‌ನ ಪಾರ್ಕ್ ಬಳಿಯ ಹೋಟೆಲ್ ಮುಂದೆ ಈ ಘಟನೆ ಜರುಗಿದ್ದು, ಈ ಸಂಬಂಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೋಟೆಲ್‌ಗೆ ಹೋಗುವ ಗ್ರಾಹಕರು ಕಾರು, ಬೈಕ್ ಸೇರಿದಂತೆ ಇತರೆ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲುಗಡೆ ಮಾಡುತ್ತಿದ್ದರು. ಇದರಿಂದ ಅಕ್ಕ ಪಕ್ಕದ ನಿವಾಸಿಗಳಿಗ ತುಂಬಾ ತೊಂದರೆಯಾಗುತ್ತಿತ್ತು. ಇಂದು ತಮ್ಮ ಕಾರು ಸಾಗಲು ಸಾಧ್ಯವಾಗದಂತೆ ಹೋಟೆಲ್ ಗ್ರಾಹಕರೊಬ್ಬರು ರಸ್ತೆ ಮಧ್ಯೆ ಕಾರು ನಿಲ್ಲಿಸಿದ್ದ ಕಾರಣ ಆಕ್ಷೇಪಿಸಿದೆ ಎಂದು ಡಾ.ವಿಭು ಧವನ್ ತಿಳಿಸಿದ್ದಾರೆ.

ಕಾರಿನಲ್ಲಿದ್ದ ಮಹಿಳೆಯ ಜೊತೆ ಈ ಬಗ್ಗೆ ಮಾತನಾಡುವ ವೇಳೆ ಆಕೆಯ ಪತಿ ಬಂದು ಏಕಾಏಕಿ ಹಲ್ಲೆ ನಡೆಸಿದರು. ಆತನ ಜೊತೆ ಆರೇಳು ಜನರು ಸೇರಿ ನನ್ನನ್ನು ಥಳಿಸಿದರು. ಈ ವೇಳೆ ನನ್ನ ಬಟ್ಟೆ ಕೂಡ ಹರಿದಿದೆ ಎಂದು ಡಾ.ವಿಭು ಧವನ್ ಹೇಳಿದ್ದಾರೆ. ಈ ಸಂಬಂಧ ನನ್ನ ಮೇಲೆ ಹಲ್ಲೆ ನಡೆಸಿದ ಕಾರು ಮಾಲೀಕ ಹಾಗೂ ಇತರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಡಾ.ವಿಭು ಧವನ್ ನಜರ್‌ಬಾದ್ ಪೊಲೀಸ್ ಠಾಣೆಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಹಲ್ಲೆಗೊಳಗಾದ ವೈದ್ಯರನ್ನು ವೈದ್ಯಕೀಯ ತಪಾಸಣೆಗೊಳಪಡಿಸಿ ತನಿಖೆ ಕೈಗೊಂಡಿದ್ದಾರೆ.

ನಿಗಮ, ಮಂಡಳಿಗಳ ಆರ್ಥಿಕ ಸ್ಥಿತಿಗತಿ ಬಗ್ಗೆ ಸರ್ಕಾರ ಶ್ವೇತಪತ್ರ ಹೊರಡಿಸಲಿ

ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಒತ್ತಾಯ

ಮೈಸೂರು,ಜೂ.2(ಪಿಎಂ)– ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹೆಸರಿನಲ್ಲಿದ್ದ ಖಾತೆಯಿಂದ 187 ಕೋಟಿ ಹಣ ದುರುಪಯೋಗ ಬಹು ದೊಡ್ಡ ಹಗರಣ ಎಂದು ಆರೋಪಿಸಿರುವ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ, ಇತರ ಅಭಿವೃದ್ಧಿ ನಿಗಮ ಹಾಗೂ ಮಂಡಳಿಗಳ ಆರ್ಥಿಕ ಸ್ಥಿತಿಗತಿ ಹಾಗೂ ಅವುಗಳ ಖಾತೆಗಳ ವಿವರಗಳ ಬಗ್ಗೆ ಈ ಕೂಡಲೇ ಸರ್ಕಾರ ಶ್ವೇತಪತ್ರ ಹೊರಡಿಸಬೇಕೆಂದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಒಂದು ವರ್ಷದಿಂದ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ, ಮತ ಬ್ಯಾಂಕ್ ಆಧಾರಿತ ಯೋಜನೆಗಳನ್ನು ಜಾರಿಗೊಳಿಸಲು ತನ್ನ ಬೊಕ್ಕಸ ಬರಿದು ಮಾಡಿಕೊಂಡಿದ್ದು, ಅಭಿವೃದ್ಧಿ ಕಾರ್ಯಗಳನ್ನು ಮೂಲೆಗೆ ಸರಿಸಿದೆ. ಜೊತೆಗೆ ಕಾಂಗ್ರೆಸ್ ಪಕ್ಷದ ಪರವಾಗಿ ಚುನಾವಣೆ ಎದರಿಸಲು ಅಕ್ರಮ ಮಾರ್ಗದಲ್ಲಿ ಸರ್ಕಾರಿ ನಿಗಮಗಳ ಹಣ ದುರುಪಯೋಗಪಡಿಸಿಕೊಂಡಿರುವುದೂ ವಾಲ್ಮೀಕಿ ನಿಗಮದ ಪ್ರಕರಣದ ಮೂಲಕ ಬೆಳಕಿಗೆ ಬಂದಿದೆ.

ಸದ್ಯ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹೆಸರಿನಲ್ಲಿದ್ದ ಖಾತೆಯಿಂದ 187 ಕೋಟಿ ಹಣ ದುರುಪಯೋಗವಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಇತರ ಅಭಿವೃದ್ಧಿ ನಿಗಮ ಹಾಗೂ ಮಂಡಳಿಗಳ ಆರ್ಥಿಕ ಸ್ಥಿತಿಗತಿ ಬಗ್ಗೆ ಹಾಗೂ ನಿಗಮ–ಮಂಡಳಿಗಳು ಹೊಂದಿರುವ ಖಾತೆಗಳು ಹಾಗೂ ಅವುಗಳ ವಿವರವನ್ನು ಸಾರ್ವಜನಿಕರು ಪಾರದರ್ಶಕವಾಗಿ ತಿಳಿಯುವಂತಾ ಗಲು ಈ ಕೂಡಲೇ ಸರ್ಕಾರ ಶ್ವೇತಪತ್ರ ಹೊರಡಿಸಬೇಕು.



ರಘು ಕೌಟಿಲ್ಯ

ಡಾ.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸೇರಿದಂತೆ ಇತರ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು ಹಾಗೂ ಸರ್ಕಾರದ ಅನುದಾನ ಪಡೆಯುವ ಇತರ ಮಂಡಳಿಗಳು ಹಾಗೂ ಪ್ರಾಧಿಕಾರಗಳ ಖಾತೆಗಳಲ್ಲಿರುವ ಹಣದ ವಿವರ ಬಹಿರಂಗವಾಗಬೇಕು. ಸದ್ಯ ವಾಲ್ಮೀಕಿ ನಿಗಮದ ಹಗರಣವೊಂದು ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆ ಹಿನ್ನೆಲೆಯಲ್ಲಿ ಬೆಳಕಿಗೆ ಬಂದಿದ್ದು, ಇದೇ ರೀತಿಯ ಹಣ ದುರುಪಯೋಗದ ಪ್ರಕರಣಗಳು ಹಾಗೂ ಅಕ್ರಮ ಹಣ ವರ್ಗಾವಣೆಗಳು ಇತರ ನಿಗಮಗಳಲ್ಲೂ ನಡೆದಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಈ ನಿಟ್ಟಿನಲ್ಲಿ ಆರ್ಥಿಕ ಇಲಾಖೆ ಈ ಕೂಡಲೇ ಎಲ್ಲಾ ನಿಗಮ ಹಾಗೂ ಅನುದಾನ ಪಡೆಯುವ ಮಂಡಳಿಗಳ ಆರ್ಥಿಕ ವಿವರಗಳ ಸ್ಥಿತಿಗತಿಗಳ ಬಗ್ಗೆ ಶ್ವೇತಪತ್ರ ಹೊರಡಿಸುವ ಮೂಲಕ ರಾಜ್ಯದ ಆರ್ಥಿಕ ಸ್ಥಿತಿಯ ನಿರ್ವಹಣೆ ಬಗೆಗಿನ ಶಿಸ್ತಿನ ಕುರಿತು ಪಾರದರ್ಶಕ ಮಾಹಿತಿ ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

> **ಇನ್ನಷ್ಟು ಹಗರಣಗಳು ಹೊರಬರುವ ಸಾಧ್ಯತೆ!**
> "ನಾನು ಈ ಹಿಂದೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ನನಗೆ ತಿಳಿದಂತೆ ಸರ್ಕಾರದ ಅನುದಾನ ನಿಗಮಗಳಿಗೆ ಬಿಡುಗಡೆಯಾದ ನಂತರ ಸಂಪೂರ್ಣ ಬಳಕೆಯಾಗದೇ ಉಳಿಯುವ ಹಣ ಹಾಗೂ ನಿಗಮದಿಂದ ಸಾಲದ ನೆರವು ಪಡೆದ ಫಲಾನುಭವಿಗಳಿಂದ ಮರುಪಾವತಿಯಾಗುವ ಹಣವನ್ನು ನಿಗಮದ ಖಾತೆಗಳಲ್ಲಿ ಠೇವಣಿ ಇರಿಸಲಾಗುತ್ತಿತ್ತು. ನನಗೆ ಅರಿವಿರುವಂತೆ ಸಾವಿರಾರು ಕೋಟಿ ರೂ. ಠೇವಣಿಯು ಅನೇಕ ನಿಗಮಗಳ ಖಾತೆಗಳಲ್ಲಿದೆ. ಈ ಠೇವಣಿಗಳ ಕುರಿತ ಮಾಹಿತಿ ಹಾಗೂ ಇವುಗಳ ಮೇಲೆ ನಿಯಂತ್ರಣ ಹೇರುವ ನಿಟ್ಟಿನಲ್ಲಿ ಆರ್ಥಿಕ ಇಲಾಖೆ ಜಾಣಕುರುಡು ಪ್ರದರ್ಶಿಸುತ್ತಿರುವುದನ್ನು ನಾನು ಗಮನಿಸಿದ್ದೇನೆ. ಈ ಹಿನ್ನೆಲೆಯಲ್ಲಿಯೇ ಆರ್ಥಿಕ ಇಲಾಖೆಯ ಕಣ್ಣು ತಪ್ಪಿಸಿ, ವಾಲ್ಮೀಕಿ ನಿಗಮದ ಹಣ ದುರುಪಯೋಗವಾಗಲು ಕಾರಣವಾಗಿದೆ. ಈ ನಿಟ್ಟಿನಲ್ಲಿ ಅತೀ ತುರ್ತಾಗಿ ಸರ್ಕಾರ ನಿಗಮ ಮಂಡಳಿಗಳ ಬ್ಯಾಂಕ್ ಖಾತೆಗಳ ವಿವರ ಪ್ರಕಟಿಸಿದರೆ, ವಾಲ್ಮೀಕಿ ನಿಗಮದ ಹಗರಣದಂತೆ ಇನ್ನಷ್ಟು ಹಗರಣಗಳು ಹೊರಬರುವ ಸಾಧ್ಯತೆಯಿದೆ. **–ರಘು ಕೌಟಿಲ್ಯ**

ಡಿಇಎಲ್‌ಇಡಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.2 – 2024–25ನೇ ಸಾಲಿನ ಡಿಇಎಲ್‌ಇಡಿ ಯ ಪ್ರವೇಶಾತಿ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಸಾಮಾನ್ಯ ಅಭ್ಯರ್ಥಿಗಳು ಶೇ.50ರಷ್ಟು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಶೇ.45ರಷ್ಟು ಅಂಕಗಳನ್ನು ಪಡೆದಿರಬೇಕು. ಪ.ಜಾತಿ ಅಥವಾ ಪ.ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಯಿದ್ದು, ಸಾಮಾನ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ಶುಲ್ಕ ರೂ. 3065 ಇರುತ್ತದೆ. (ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ರೂ. 25000 ವಿದ್ಯಾರ್ಥಿ ವೇತನ ಇರುತ್ತದೆ.) ಆಸಕ್ತರು ಪಿಎಸ್‌ಟಿಇ ನೋಡಲ್ ಅಧಿಕಾರಿ ಅಮಿತ್, ಮೊ.ಸಂ: 8971265899, ಉಪನ್ಯಾಸಕಿ ಸುಷ್ಮಾ, ಮೊ.ಸಂ: 9535565579 ಅನ್ನು ಸಂಪರ್ಕಿಸಬಹುದು ಎಂದು ಡಯಟ್‌ನ ಪ್ರಾಂಶುಪಾಲರು ಹಾಗೂ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಂಗಾಯಣ ನಿವೃತ್ತ ಕಲಾವಿದ ರಾಮನಾಥರ ಎರಡು ಕೃತಿ ಬಿಡುಗಡೆ

ಸಹಪಾಠಿಯೊಂದಿಗಿನ ಸ್ವಾರಸ್ಯ ಸನ್ನಿವೇಶಗಳ ಮೆಲುಕು ಹಾಕಿದ ಹಿರಿಯ ರಂಗಕರ್ಮಿ ಮಂಡ್ಯ ರಮೇಶ್

ಮೈಸೂರು, ಜೂ. 2(ಎಸ್‌ಪಿಎನ್)– ನಾನು–ರಾಮನಾಥ ಕಳೆದ 35 ವರ್ಷಗಳಿಂದ ಹೋಗೋ–ಬಾರೋ ಗೆಳೆಯರು. ನಾನು ಮಂಡ್ಯದವ, ಆತ ಕೊಳ್ಳೇಗಾಲ ದವ. ಮಂಡ್ಯದವರು ಎಂದರೆ ಜಗಳಕ್ಕೆ ಫೇಮಸ್, ಕೊಳ್ಳೇಗಾಲದವರು ಎಂದರೆ ಮಾಟ–ಮಂತ್ರಕ್ಕೆ ಫೇಮಸ್ ಎಂದು ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಹಾಸ್ಯ ಚಟಾಕಿ ಹಾರಿಸಿದರು.

ರಂಗಾಯಣ ಆವರಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಏರ್ಪಡಿಸಿದ್ದ ಅನುಭೂತಿ ಟ್ರಸ್ಟ್ ಪ್ರಾರಂಭೋತ್ಸವ ಹಾಗೂ ರಂಗಾಯಣ ನಿವೃತ್ತ ಕಲಾವಿದ ರಾಮನಾಥ್ ರಚಿತ 'ಡ್ರಾಮಾ ಕ್ಲಬ್', 'ಷಡ್ಗುಣ' ಪುಸ್ತಕಗಳನ್ನು ಬಿಡುಗಡೆಗೊಳಿಸಿ, ಮಾತನಾಡಿದ ಅವರು, ಹಾಗಂತ ನಾನು ಜಗಳಗಂಟನಲ್ಲ. ನಾನು ಎಲ್ಲರೊಂದಿಗೂ ಬೆರೆಯುತ್ತೇನೆ. ಆತನೂ ಮಾಟ–ಮಂತ್ರ ಮಾಡಿಸುವುದಿಲ್ಲ. ಬದಲಾಗಿ ಉತ್ತಮ ಬರಹಗಾರ ಎಂಬುದಕ್ಕೆ ಈ ವೇದಿಕೆಯಲ್ಲಿ ಬಿಡುಗಡೆಗೊಂಡ ಪುಸ್ತಕಗಳೇ ಸಾಕ್ಷಿ ಎಂದರು.

ರಂಗಾಯಣ ಕ್ರಿಯಾಶೀಲತೆಗೆ ಹೆಸರುವಾಸಿಯಾಗಿದೆ. 35 ವರ್ಷಗಳ ಹಿಂದೆ ಬಿ.ವಿ.ಕಾರಂತರು ರಾಜ್ಯದ ಹಲವು ಜಿಲ್ಲೆಗಳಿಂದ ಬೇರೆಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ 25 ಕಲಾವಿದರನ್ನು ಆಯ್ಕೆ ಮಾಡಿ ರಂಗಾಯಣ ತಂಡ ಕಟ್ಟಿದರು. ಆ ತಂಡದಲ್ಲಿ ನಾನು ಮತ್ತು ರಾಮನಾಥ್ ಇದ್ದೆವು. ಸುದೀರ್ಘ ಪಯಣದ ನಂತರ ರಾಮನಾಥ್ ಇಂದು(ಮೇ 31ಕ್ಕೆ) ನಿವೃತ್ತಿ ಹೊಂದುತ್ತಿದ್ದಾರೆ. ಈ ದಿನವೇ ಎರಡು ಕೃತಿಗಳನ್ನು ಹೊರ ತಂದಿದ್ದಾರೆ. ಇದು ಆತನ ಕ್ರಿಯಾಶೀಲತೆಗೆ ಕೈಗನ್ನಡಿ ಎಂದರು.



ರಂಗಾಯಣ ನಿವೃತ್ತ ಕಲಾವಿದ ರಾಮನಾಥ್ ರಚಿತ 'ಡ್ರಾಮಾ ಕ್ಲಬ್', 'ಷಡ್ಗುಣ' ಪುಸ್ತಕಗಳನ್ನು ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಬಿಡುಗಡೆಗೊಳಿಸಿದರು.

ಪ್ರಸಕ್ತ ಶಿಕ್ಷಣಕ್ಷೇತ್ರದಲ್ಲಿ ರಂಗಭೂಮಿ ಮಾದರಿ ಪಠ್ಯ ಅಳವಡಿಕೆ ಸೂಕ್ತ ಎಂಬುದು ರಾಮನಾಥ್ ನಿಲುವಾಗಿದೆ. ಆತನ ನಿಲುವನ್ನು ನಾನೂ ಅನುಮೋದಿಸುತ್ತೇನೆ. ಅಲ್ಲದೆ, 'ಡ್ರಾಮಾ ಕ್ಲಬ್' ಪುಸ್ತಕ ಯುವ ಕಲಾವಿದರು ಕಲಿತುಕೊಳ್ಳಲು ಇದು ಸೂಕ್ತ ಪುಸ್ತಕ. ಈ ಪುಸ್ತಕವನ್ನು ಪ್ರತಿ ಯೊಬ್ಬರು ಖರೀದಿಸಿ ಓದುವಂತೆ ಮಂಡ್ಯ ರಮೇಶ್ ಸಲಹೆ ನೀಡಿದರು. ಕಳೆದ 35 ವರ್ಷಗಳ ಹಿಂದೆ ಬಿ.ವಿ.ಕಾರಂತರು, ಹಲವು ಯುವ ಕಲಾವಿದರನ್ನು ಒಗ್ಗೂಡಿಸಿ, ರಂಗಾಯಣ ಕಟ್ಟಿದರು. ಆ ತಂಡದಲ್ಲಿ ನಾನು, ರಾಮನಾಥ್ ಇಬ್ಬರು ಕಲಿತು ಪ್ರಸ್ತುತ ಸಮಾಜದಲ್ಲಿ ಸಾರ್ಥಕ ಜೀವನ ನಡೆಸುತ್ತಿದ್ದೇವೆ ಎಂದು ರಂಗಾಯಣದ ಮೂಲಕ ರಂಗಭೂಮಿಯಲ್ಲಿ ಬೆಳೆದು ಬಂದ ಹಾದಿಯನ್ನು ಸ್ಮರಿಸಿದರಲ್ಲದೆ, ಬಿ.ವಿ.ಕಾರಂತರು ರಾಮನಾಥ್ ರಚಿಸಿದ ನಾಟಕಕ್ಕೆ ಸಂಗೀತ ಸಂಯೋಜನೆ ಮಾಡಿರುವುದು ಸಂತೋಷದ ಸಂಗತಿ ಎಂದು ಮೆಲಕು ಹಾಕಿದರು.

ನಮ್ಮ ತಂದೆ(ಮಂಡ್ಯ ರಮೇಶ್ ತಂದೆ) ನಾಗಮಂಗಲ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅಧಿಕಾರಿಯಾಗಿದ್ದರು. ಆ ವೇಳೆ ರಾಮನಾಥ ಮತ್ತು ರಂಜಿನಿ (ರಾಮನಾಥ್ ಪತ್ನಿ) ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರು. ರಿಜಿಸ್ಟ್ರಾರ್ ಮದುವೆ ಮಾಡಿಸಲು ನಾವು ಮತ್ತು ಸ್ನೇಹಿತರು ಆಡಿದ ನಾಟಕ ಅಷ್ಟಿಷ್ಟಲ್ಲ. ಈಗ ಇವರ ದಾಂಪತ್ಯ 30 ವರ್ಷ ಕಳೆದಿದೆ ಹಾಗೂ ಸುಖಕರ ಜೀವನ ನಡೆಸುತ್ತಿದ್ದಾರೆ. ಹಾಗಾಗಿ ರಾಮನಾಥ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಆಶಿಸಿದರು. ಈ ವೇಳೆ ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ, ಅನುಭೂತಿ ಟ್ರಸ್ಟ್‌ನ ಕಾರ್ಯದರ್ಶಿ ಶ್ರೀವಿದ್ಯಾ ಕಾಮತ್, ರೂಪಶ್ರೀ ಸೇರಿದಂತೆ ಇತರರಿದ್ದರು.

> **ಕಲಾತ್ಮಕ ಸಂಸ್ಥೆಗಳು ಸ್ವತಂತ್ರ ನಿರ್ವಹಣೆ ಅಗತ್ಯ**
> "ಇಂದಿನ ಸಿನಿಮಾ ಮತ್ತು ಧಾರಾವಾಹಿಗಳನ್ನು ನೋಡಿದರೆ ಬೇಸರವಾಗುತ್ತವೆ. ಒಂದು ವಾಕ್ಯದಲ್ಲಿ ಹೇಳಬೇಕಾದದ್ದನ್ನು ದಿನವಿಡೀ ಎಳೆಯುತ್ತವೆ. ಏಕೆಂದರೆ ಅವರಿಗೆ ನಟನೆ ಬಗ್ಗೆ ಗಂಧ–ಗಾಳಿ ತಿಳಿದಿಲ್ಲ. ಅವರಿಗೆ ಯಾವುದೇ ರೀತಿಯ ತರಬೇತಿ ಇರುವುದಿಲ್ಲ. ಆದರೆ ರಂಗಾಯಣ ಆಯೋಜಿಸುವ ರಂಗ ತರಬೇತಿ ಶಿಬಿರಗಳಲ್ಲಿ ಅನೇಕ ಯುವ ಕಲಾವಿದರು ನಟನೆಯ ಬಗ್ಗೆ ತರಬೇತಿ ಪಡೆದು ಅತ್ಯದ್ಭುತವಾಗಿ ನಟಿಸಲು ಸಾಧ್ಯವಿದೆ. ಹಾಗಾಗಿ ರಂಗಾಯಣದಂತಹ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಅಂತೆಯೇ ಯಾವುದೇ ಕ್ರಿಯಾಶೀಲ ಸಂಸ್ಥೆಗಳು ಸರ್ಕಾರದ ಅಧೀನಕ್ಕೆ ಒಳಪಟ್ಟರೆ, ಅವುಗಳು ಸ್ವಾಯತ್ತೆಗೆ ಧಕ್ಕೆಯಾಗಿ ಆ ಸಂಸ್ಥೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲವಾಗುತ್ತದೆ.
> **–ಸಿ.ಬಸವಲಿಂಗಯ್ಯ, ಮಾಜಿ ನಿರ್ದೇಶಕ, ರಂಗಾಯಣ**

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 3 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 48 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣಾ ಫಲಿತಾಂಶ – 2024



ದಿನಗಣನೆ
2

ವಿಧಾನಪರಿಷತ್‌ನ 6 ಕ್ಷೇತ್ರಗಳಿಗೆ ಇಂದು ಮತದಾನ

ಬೆಂಗಳೂರು, ಜೂ.2– ಶಿಕ್ಷಕರು ಹಾಗೂ ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್‌ನ 6 ಕ್ಷೇತ್ರಗಳಿಗೆ ನಾಳೆ (ಜೂ.3) ಮತದಾನ ನಡೆಯಲಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ, ಈಶಾನ್ಯ ಪದವೀಧರರ ಕ್ಷೇತ್ರ, ಬೆಂಗಳೂರು ಪದವೀಧರರ ಕ್ಷೇತ್ರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಸೋಮವಾರ ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ.

ಈ 6 ಕ್ಷೇತ್ರಗಳಿಗೆ ಓರ್ವ ಮಹಿಳೆ ಸೇರಿ 78 ಮಂದಿ ಸ್ಪರ್ಧಿಸಿದ್ದಾರೆ. ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ (ಎನ್‌ಡಿಎ) ಮೈತ್ರಿ ಮಾಡಿಕೊಂಡಿರುವುದರಿಂದ ಕಾಂಗ್ರೆಸ್ ಮತ್ತು ಎನ್‌ಡಿಎ ನಡುವೆ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ನೇರ ಸ್ಪರ್ಧೆ ಏರ್ಪಟ್ಟಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕೆ.ವಿವೇಕಾನಂದ, ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡ ನಡುವೆ ● 8ನೇ ಪುಟಕ್ಕೆ

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 11 ಅಭ್ಯರ್ಥಿಗಳು ಕಣದಲ್ಲಿ

● ನಾಲ್ಕು ಜಿಲ್ಲೆಗಳ 44 ಮತಗಟ್ಟೆಗಳಲ್ಲಿ ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ಮತದಾನ ● 11,998 ಪುರುಷ, 9,550 ಮಹಿಳಾ ಮತದಾರರು ಸೇರಿದಂತೆ 21,549 ಮತದಾರರ ನೋಂದಣಿ ● ಮೈಸೂರು ಜಿಲ್ಲೆಯಲ್ಲೇ 10,439 ಮತದಾರರು



ಮರಿತಿಬ್ಬೇಗೌಡ



ವಿವೇಕಾನಂದ

ಮೈಸೂರು, ಜೂ.2(ಎಂಟಿವೈ)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಾಳೆ(ಜೂ.3) ಚುನಾವಣೆ ನಡೆಯಲಿದ್ದು, ನಾಲ್ಕು ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 44 ಮತಗಟ್ಟೆ ತೆರೆಯಲಾಗಿದ್ದು 21,549 ಮಂದಿ ಮತದಾರರು ಹಕ್ಕು ಚಲಾಯಿಸಲು ಹೆಸರು ನೋಂದಾಯಿಸಿಕೊಂಡಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಸೇರಿದಂತೆ 11 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಚುನಾವಣಾ ಕಣದಲ್ಲಿದ್ದು, ಅವರಲ್ಲಿ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಮೈತ್ರಿ ಅಭ್ಯರ್ಥಿಯ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಈಗಾಗಲೇ ರಾಜಕೀಯ ಪಕ್ಷಗಳ ಅಭ್ಯರ್ಥಿಗಳೂ ಸೇರಿದಂತೆ ಪಕ್ಷೇತರ ಅಭ್ಯರ್ಥಿಗಳು ಶಿಕ್ಷಕ ಮತದಾರರ ಮನವೊಲಿಸಿಕೊಳ್ಳಲು ಹರಸಾಹಸ ಪ್ರದರ್ಶಿಸಿದ್ದು, ಶಿಕ್ಷಕ ಮತದಾರರು ಯಾರ ಮೇಲೆ ಕೃಪಾಕಟಾಕ್ಷ ತೋರಿಸುತ್ತಾರೆ ಎಂದು ಕಾದು ನೋಡಬೇಕಾಗಿದೆ.

ಇಂದು ಮತದಾನ: ಸಮಾಜದಲ್ಲಿ ಉತ್ತಮ ಸತ್ಪ್ರಜೆಗಳನ್ನು ರೂಪಿಸುವ ಮಹತ್ತರ ಜವಾಬ್ದಾರಿ ಹೊಂದಿರುವ ಶಿಕ್ಷಕರು ಹಕ್ಕು ಚಲಾಯಿಸುವ ದಕ್ಷಿಣ ಶಿಕ್ಷಕರ ● 8ನೇ ಪುಟಕ್ಕೆ

ಕಡ್ಡಾಯ ಮತದಾನಕ್ಕೆ ಸಹಾಯಕ ಚುನಾವಣಾಧಿಕಾರಿ ಕವಿತಾ ರಾಜಾರಾಮ್ ಮನವಿ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಪ್ರಾದೇಶಿಕ ಆಯುಕ್ತರೂ ಆದ ಸಹಾಯಕ ಚುನಾವಣಾಧಿಕಾರಿ ಕವಿತಾ ರಾಜಾರಾಮ್ ಮಾತನಾಡಿದರು.

ಮೈಸೂರು, ಜೂ.2(ಎಂಕೆ)– ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ ಮತ್ತು ನೈರುತ್ಯ ಪದವೀಧರರ ಕ್ಷೇತ್ರಗಳ ಚುನಾವಣೆಗೆ ನಾಳೆ(ಜೂ.3) ಮತದಾನ ನಡೆಯಲಿದ್ದು, ಸರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ ನೋಂದಾಯಿತ ಮತದಾರರು ಕಡ್ಡಾಯವಾಗಿ ಮತದಾನ ಮಾಡುವಂತೆ ಹೆಚ್ಚುವರಿ ಪ್ರಾದೇಶಿಕ ಆಯುಕ್ತರೂ ಆದ ಸಹಾಯಕ ಚುನಾವಣಾಧಿಕಾರಿ ಕವಿತಾ ರಾಜಾರಾಮ್ ಮನವಿ ಮಾಡಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಭಾನುವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ವ್ಯಾಪ್ತಿಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾನಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ಮತಗಟ್ಟೆಗಳಿಗೆ ಈಗಾಗಲೇ 1017 ಸಿಬ್ಬಂದಿಗಳನ್ನು ನೇಮಿಸಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 194, ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ 348 ಹಾಗೂ ನೈರುತ್ಯ ಪದವೀಧರರ ಕ್ಷೇತ್ರಕ್ಕೆ 475 ಮಂದಿಯನ್ನು ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು. ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ● 8ನೇ ಪುಟಕ್ಕೆ

ದಕ್ಷಿಣ ಶಿಕ್ಷಕರ ಕ್ಷೇತ್ರದ ಮತಗಟ್ಟೆಗಳು...

ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾನ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯ 44 ಮತಗಟ್ಟೆಗಳಲ್ಲಿ ನಡೆಯಲಿದೆ. ಮೈಸೂರು ನಗರದಲ್ಲಿ ಕೃಷ್ಣಮೂರ್ತಿಪುರಂನ ಸರ್ಕಾರಿ ಮಿಶ್ರಿತ ಹಿರಿಯ ಪ್ರಾಥಮಿಕ ಶಾಲೆ, ಕುವೆಂಪು ನಗರ ಆದಿಚುಂಚನಗಿರಿ ರಸ್ತೆ ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಕಾಲೇಜು, ಗೋಕುಲಂನಲ್ಲಿರುವ ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆ, ವಿಜಯನಗರ 2ನೇ ಹಂತದ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್, ಶೇಷಾದ್ರಿ ಅಯ್ಯರ್ ರಸ್ತೆಯ ವಿದ್ಯಾವರ್ಧಕ ಕಾನೂನು ಕಾಲೇಜು, ಸಿದ್ಧಾರ್ಥ ನಗರದ ಗೀತಾ ಶಿಶು ಶಿಕ್ಷಣ ನರ್ಸರಿ ಮತ್ತು ಪ್ರೈಮರಿ ಶಾಲೆ, ಬಿ.ಎನ್. ರಸ್ತೆಯಲ್ಲಿರುವ ಸೆಂಟ್ ಫಿಲೋಮಿನಾ ಕಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ರಾಜೇಂದ್ರನಗರದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ರಾಮಕೃಷ್ಣ ನಗರದ ರಾಮಕೃಷ್ಣ ವಿದ್ಯಾಕೇಂದ್ರ, ಶಾರದಾದೇವಿನಗರದ ಇಂದಿರಾ ಪ್ರೌಢಶಾಲೆ ಮತ್ತು ಡಿಎಡ್ ಕಾಲೇಜು, ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್‌ನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಜಿಲ್ಲೆಯ ಹುಣಸೂರು, ಸಾಲಿಗ್ರಾಮ, ಕೆ.ಆರ್.ನಗರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಸರಗೂರು, ನಂಜಗೂಡು ಹಾಗೂ ಟಿ.ನರಸೀಪುರ ತಾಲೂಕು ಕಚೇರಿಗಳಲ್ಲಿ ಮತದಾನ ನಡೆಯಲಿದೆ.

ತೈವಾನ್ ಓಪನ್ 2024

ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದ ಕನ್ನಡಿಗ ಡಿ.ಪಿ. ಮನು



ತೈಪೆ, ಜೂ.2– ತೈವಾನ್ ಓಪನ್ 2024 ಕ್ರೀಡಾಕೂಟದಲ್ಲಿ ಕನ್ನಡಿಗ ಡಿ.ಪಿ. ಮನು ಅತ್ಯುನ್ನತ ಸಾಧನೆ ಮಾಡಿದ್ದು, ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದಿದ್ದಾರೆ.

ತೈವಾನ್ ಓಪನ್–2024ರಲ್ಲಿ ಭಾರತ ಹಾಗೂ ಕರ್ನಾಟಕದ ಅಥ್ಲೀಟ್ ಡಿ.ಪಿ. ಮನು ಅವರು ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡಿದ್ದು, ಜಾವೆಲಿನ್ ಥ್ರೋ ಫೈನಲ್‌ನಲ್ಲಿ ತಮ್ಮ ಕೊನೆಯ ಪ್ರಯತ್ನದಲ್ಲಿ 81.58 ಮೀ ದೂರ ಜಾವೆಲಿನ್ ಎಸೆಯುವ ಮೂಲಕ ಅಗ್ರಸ್ಥಾನ ಪಡೆದು ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ● 8ನೇ ಪುಟಕ್ಕೆ

ಭವಾನಿ ರೇವಣ್ಣ ಬಂಧನಕ್ಕೆ ಪೊಲೀಸರು ಹುಡುಕುತ್ತಿದ್ದಾರೆ

ಗೃಹ ಸಚಿವ ಪರಮೇಶ್ವರ್

ಬೆಂಗಳೂರು, ಜೂ.2– ಭವಾನಿ ರೇವಣ್ಣ ಅವರನ್ನು ಪೊಲೀಸರು ಅರೆಸ್ಟ್ ಮಾಡಲು ಹುಡುಕುತ್ತಿದ್ದಾರೆ. ಸಿಕ್ಕಿದ ತಕ್ಷಣ ಅವರ ಬಂಧನವಾಗಲಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದ್ದಾರೆ.



ಭವಾನಿ ರೇವಣ್ಣ

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭವಾನಿ ರೇವಣ್ಣ ಎಲ್ಲಿದ್ದಾರೋ ಗೊತ್ತಿಲ್ಲ. ಅವರನ್ನು ಪೊಲೀಸರು ಹುಡುಕಿ, ಬಂಧಿಸಲಿದ್ದಾರೆ. ಇದೆಲ್ಲ ಕಾನೂನು ಪ್ರಕಾರ ನಡೆಯುತ್ತದೆ. ಈ ವಿಚಾರ ಸರ್ಕಾರಕ್ಕೆ ಸವಾಲಿನ ಪ್ರಶ್ನೆಯೇ ಅಲ್ಲ ಎಂದು ಅವರು ಹೇಳಿದ್ದಾರೆ.


ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಚುನಾವಣೆ

ಕಾಂಗ್ರೆಸ್‌ನ 7, ಬಿಜೆಪಿ 3 ಅಭ್ಯರ್ಥಿಗಳ ಪ್ರಕಟ

● ಕಾಂಗ್ರೆಸ್‌ನಿಂದ ಡಾ. ಯತೀಂದ್ರ, ಸಚಿವ ಬೋಸರಾಜು ● ಬಿಜೆಪಿಯಿಂದ ಮಾಜಿ ಸಚಿವ ಸಿ.ಟಿ.ರವಿಗೆ ಸ್ಥಾನ ● ಜೆಡಿಎಸ್‌ನ ಅಭ್ಯರ್ಥಿ ಇನ್ನೂ ನಿಗೂಢ ● ನಾಮಪತ್ರ ಸಲ್ಲಿಕೆಗೆ ಇಂದು ಕಡೇ ದಿನ



ಡಾ. ಯತೀಂದ್ರ



ಬೋಸರಾಜು



ಐವಾನ್ ಡಿಸೋಜಾ



ವಸಂತಕುಮಾರ್



ಗೋವಿಂದರಾಜು



ಬಿಲ್ಕೀಸ್‌ಬಾನು



ಜಗದೇವ್



ಸಿ.ಟಿ. ರವಿ



ರವಿಕುಮಾರ್



ಎಂ.ಜಿ. ಮೂಳೆ

ಬೆಂಗಳೂರು, ಜೂ.2–ವಿಧಾನಸಭೆಯಿಂದ ವಿಧಾನಪರಿಷತ್‌ನ 11 ಕ್ಷೇತ್ರಗಳಿಗೆ ಜೂ.13ರಂದು ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಒಂದು ದಿನ ಬಾಕಿ ಇರುವಂತೆ ಕಾಂಗ್ರೆಸ್ 7 ಮತ್ತು ಬಿಜೆಪಿ 3 ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಮತ್ತು ಸಚಿವ ಎನ್.ಎಸ್.ಬೋಸರಾಜು ಕಾಂಗ್ರೆಸ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರೆ, ಬಿಜೆಪಿಯಲ್ಲಿ ಮಾಜಿ ಸಚಿವ ಸಿ.ಟಿ.ರವಿ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ರವಿಕುಮಾರ್ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಕಾಂಗ್ರೆಸ್‌ನಿಂದ ಯತೀಂದ್ರ ಸಿದ್ದರಾಮಯ್ಯ, ಸಚಿವ ಎನ್.ಎಸ್.ಬೋಸರಾಜು, ವಿಧಾನಪರಿಷತ್ ಮಾಜಿ ಸದಸ್ಯ ಐವಾನ್ ಡಿಸೋಜ, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಕೆ.ಗೋವಿಂದರಾಜು, ಬಿಲ್ಕೀಸ್ ಭಾನು, ಜಗದೇವ್ ಗುತ್ತೇಗಾ, ಕೆಪಿಸಿಸಿ ಕಾರ್ಯಾಧ್ಯಕ್ಷ ವಸಂತಕುಮಾರ್ ಅವರಿಗೆ ಸ್ಥಾನ ಕಲ್ಪಿಸಲಾಗಿದೆ.

ಬಿಜೆಪಿಯಲ್ಲಿ ಮಾಜಿ ಸಚಿವ ಸಿ.ಟಿ.ರವಿ, ವಿಧಾನ ಪರಿಷತ್ ಮಾಜಿ ಸದಸ್ಯ ಎನ್.ರವಿಕುಮಾರ್ ಮತ್ತು ಎಂ.ಜಿ.ಮೂಳೆ ಅವರನ್ನು ಅಭ್ಯರ್ಥಿಗಳಾಗಿ ಪ್ರಕಟಿಸಲಾಗಿದೆ.

ವಿಧಾನಸಭಾ ಸದಸ್ಯರ ಸಂಖ್ಯಾಬಲದಂತೆ ಕಾಂಗ್ರೆಸ್ 7 ಸ್ಥಾನಗಳನ್ನು ಪಡೆಯಬಹುದಾಗಿದ್ದು, ಆ ಎಲ್ಲಾ ಸ್ಥಾನಗಳಿಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಅದೇ ರೀತಿ ಬಿಜೆಪಿಗೆ ಲಭಿಸಲಿರುವ 3 ಸ್ಥಾನಗಳಿಗೆ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿದ್ದು, ಒಂದು ಸ್ಥಾನ ಪಡೆಯಲಿರುವ ಜೆಡಿಎಸ್ ಇನ್ನೂ ತನ್ನ ಅಭ್ಯರ್ಥಿಯನ್ನು ಪ್ರಕಟಿಸಿಲ್ಲ. ನಾಮಪತ್ರ ಸಲ್ಲಿಸಲು ನಾಳೆ (ಸೋಮವಾರ) ಕೊನೇ ದಿನವಾಗಿದ್ದು, ಆಗ ● 8ನೇ ಪುಟಕ್ಕೆ

ಪರಿಷತ್ ಉಪ ಚುನಾವಣೆಗೂ ಕಾಂಗ್ರೆಸ್ ಅಭ್ಯರ್ಥಿ ಘೋಷಣೆ

ಬೆಂಗಳೂರು, ಜೂ.2–ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರಾಜೀನಾಮೆಯಿಂದ ತೆರವಾಗಿರುವ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ನಡೆಯಲಿರುವ ಉಪ ಚುನಾವಣೆಗೂ ಕಾಂಗ್ರೆಸ್ ಈಗಾಗಲೇ ಅಭ್ಯರ್ಥಿಯನ್ನು ಘೋಷಿಸಿದೆ.



ಬಸನಗೌಡ ಬಾದರ್ಲಿ

ಜಗದೀಶ್ ಶೆಟ್ಟರ್ ರಾಜೀನಾಮೆಯಿಂದಾಗಿ ತೆರವಾಗಿರುವ ಸ್ಥಾನಕ್ಕೆ ಚುನಾವಣೆ ದಿನಾಂಕ ಇನ್ನೂ ಪ್ರಕಟವಾಗಿಲ್ಲ. ಆದರೂ ಎಐಸಿಸಿ ರಾಜ್ಯ ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಬಸನಗೌಡ ಬಾದರ್ಲಿ ಅವರನ್ನು ಅಭ್ಯರ್ಥಿಯಾಗಿ ಅಧಿಕೃತವಾಗಿ ಘೋಷಿಸಿದೆ.

ಹೆದ್ದಾರಿಗಳ ಟೋಲ್ ಶೇ.5ರಷ್ಟು ಏರಿಕೆ

ಇಂದಿನಿಂದಲೇ ಪರಿಷ್ಕೃತ ದರ ಜಾರಿ



ನವದೆಹಲಿ, ಜೂ.2– ಎಕ್ಸ್‌ಪ್ರೆಸ್ ವೇಗಳನ್ನು ಬಳಕೆ ಮಾಡುವ ವಾಹನ ಸವಾರರು ನಾಳೆಯಿಂದ ಟೋಲ್‌ಗಳಲ್ಲಿ ಹೆಚ್ಚಿನ ದರ ನೀಡಬೇಕಾಗುತ್ತದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದೇಶಾದ್ಯಂತ ಹೆದ್ದಾರಿಗಳ ಟೋಲ್ ದರವನ್ನು ಶೇ.5 ರಷ್ಟು ಏರಿಕೆ ಮಾಡಿದೆ. ಟೋಲ್ ದರ ವಾರ್ಷಿಕ ಶೇ.5 ರಷ್ಟು ಹೆಚ್ಚಾಗುವುದು ವಾಡಿಕೆ. ಏ.1 ರಿಂದ ಪರಿಷ್ಕೃತ ದರ ಜಾರಿಯಾಗಬೇಕಿತ್ತು. ಆದರೆ ಲೋಕಸಭಾ ಚುನಾವಣೆಯ ಕಾರಣದಿಂದಾಗಿ ಪರಿಷ್ಕೃತ ದರ ವಿಳಂಬವಾಗಿತ್ತು.

03.06.2024 ರಿಂದ ಪರಿಷ್ಕೃತ ದರ ಜಾರಿಯಾಗಲಿದೆ ಎಂದು NHAIನ ಅಧಿಕಾರಿಯೊಬ್ಬರು ಹೇಳಿದ್ದಾರೆ. ಸಿಪಿಐ ಆಧಾರಿತ ಹಣದುಬ್ಬರಕ್ಕೆ ಅನುಗುಣವಾಗಿ NHAI ದರ ಪರಿಷ್ಕರಣೆಯಾಗುತ್ತಿರುತ್ತದೆ. ರಾಷ್ಟ್ರೀಯ ಹೆದ್ದಾರಿ ನೆಟ್‌ವರ್ಕ್‌ನಲ್ಲಿ ಸುಮಾರು 855 ಬಳಕೆದಾರರ ಶುಲ್ಕ ಪ್ಲಾಜಾಗಳಿದ್ದು, ಇವುಗಳ ಮೇಲೆ ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರಗಳು ಮತ್ತು ಸಂಗ್ರಹಣೆ) ನಿಯಮಗಳು, 2008ರ ಪ್ರಕಾರ ಬಳಕೆದಾರರ ಶುಲ್ಕವನ್ನು ವಿಧಿಸಲಾಗುತ್ತದೆ.

ಮತ ಎಣಿಕೆ ಕೇಂದ್ರದ ಸುತ್ತ ಅರೆ ಸೇನಾಪಡೆ ನಿಯೋಜಿಸಿ

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಚುನಾವಣಾ ಆಯೋಗಕ್ಕೆ ಪತ್ರ



ಬೆಂಗಳೂರು, ಜೂ. 2– ಲೋಕಸಭಾ ಚುನಾವಣೆಯ ಮತ ಎಣಿಕೆ ಕಾರ್ಯಕ್ಕೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಜೂ.4 ರಂದು ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಕಾರ್ಯ ಪ್ರಾರಂಭವಾಗಲಿದೆ. ರಾಜ್ಯದ 28 ಕ್ಷೇತ್ರಗಳ ಲೋಕಸಭಾ ಚುನಾವಣೆಯ ಮತ ಎಣಿಕೆ ಆಯಾ ಜಿಲ್ಲಾ ಕೇಂದ್ರದಲ್ಲಿ ನಡೆಯಲಿದ್ದು, ಈಗಾಗಲೇ ಜಿಲ್ಲಾಧಿಕಾರಿಗಳು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಫಲಿತಾಂಶ ಪ್ರಕಟವಾಗುವ ಮೊದಲೇ ಬೆಂಗಳೂರು ಗ್ರಾಮಾಂತರ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಚುನಾವಣಾ ಆಯೋಗಕ್ಕೆ ಒಂದು ಮಹತ್ವದ ಪತ್ರ ಬರೆದಿದ್ದು, ಮತ ಎಣಿಕೆ ಕೇಂದ್ರದಲ್ಲಿ ಅಗತ್ಯ ಭದ್ರತಾ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ಅಲ್ಲದೇ ಕಾಂಗ್ರೆಸ್ ಅಭ್ಯರ್ಥಿ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಈ ಸಲ ಭಾರಿ ಸುದ್ದಿಯಾಗಿದೆ. ಹಾಲಿ ಸಂಸದ ಡಿಕೆ ಸುರೇಶ್ ಅವರನ್ನು ಸೋಲಿಸಲೇಬೇಕು ಎಂದು ಮೈತ್ರಿ ನಾಯಕರು ಖ್ಯಾತ ಹೃದ್ರೋಗ ತಜ್ಞ ವೈದ್ಯ ಡಾ. ಸಿ.ಎನ್. ಮಂಜುನಾಥ್ ಅವರನ್ನು ಕಣಕ್ಕಿಳಿಸಿದ್ದಾರೆ. ಹೀಗಾಗಿ ಈ ಬಾರಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿದೆ. ಈಗಾಗಲೇ ಏಪ್ರಿಲ್ 26ರಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ಚುನಾವಣೆ ನಡೆದಿದ್ದು, ಇದೀಗ ಯಾರು ಗೆಲ್ಲಲಿದ್ದಾರೆ ಎನ್ನುವ ಲೆಕ್ಕಾಚಾರಗಳು ಶುರುವಾಗಿವೆ. ಇದರ ಮಧ್ಯ ಲೋಕಸಭಾ ಚುನಾವಣೆಯ ಚುನಾವಣೋತ್ತರ ಸಮೀಕ್ಷೆಗಳು ಹೊರಬಂದಿದ್ದು, ರಾಜ್ಯದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನ ಗೆಲ್ಲಲಿದೆ ಎಂದು ಭವಿಷ್ಯ ನುಡಿದಿವೆ. ಅದರಲ್ಲೂ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಗೆಲ್ಲಲಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ.

ಈ ಹಿನ್ನೆಲೆಯಲ್ಲಿ ಅಭ್ಯರ್ಥಿ ಮಂಜುನಾಥ್ ಸೇರಿದಂತೆ ಬಿಜೆಪಿ, ಜೆಡಿಎಸ್ ನಾಯಕರಲ್ಲಿನ ಸಂತಸ ಮನೆ ಮಾಡಿದ್ದು, ಫಲಿತಾಂಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಹೀಗಾಗಿ ಮತ ಎಣಿಕೆ ಕೇಂದ್ರದಲ್ಲಿ ಯಾವುದೇ ಗೊಂದಲ, ಗಲಾಟೆಗಳು ಆಗಬಾರದು ಎಂದು ಡಾ ಮಂಜುನಾಥ್ ಅವರು ಮುಂಜಾಗ್ರತಾವಾಗಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, ಮತ ಎಣಿಕೆ ಕೇಂದ್ರದಲ್ಲಿ ಅಗತ್ಯ ಭದ್ರತಾ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ● 8ನೇ ಪುಟಕ್ಕೆ

ದೆಹಲಿ ಅಬಕಾರಿ ನೀತಿ ಹಗರಣ

ತಿಹಾರ್ ಜೈಲಿಗೆ ಶರಣಾದ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್!



ನವದೆಹಲಿ, ಜೂ.2– ದೆಹಲಿ ಅಬಕಾರಿ ನೀತಿ ಹಗರಣದ ಹವಾಲಾ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಇಂದು ತಿಹಾರ್ ಜೈಲಿಗೆ ಶರಣಾಗಿದ್ದಾರೆ.

ಮನಿ ಲಾಂಡರಿಂಗ್ ಪ್ರಕರಣದಲ್ಲಿ ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ಮಧ್ಯಂತರ ಜಾಮೀನು ಜೂನ್ 1 ರಂದು ಕೊನೆಗೊಂಡ ಹಿನ್ನೆಲೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಭಾನುವಾರ ತಿಹಾರ್ ಜೈಲಿಗೆ ಬಂದು ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ.

ಈ ಹಿಂದೆ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಚಾರ ನಡೆಸಲು ಅವರಿಗೆ ಜಾಮೀನು ನೀಡಲಾಗಿತ್ತು. ಇದೀಗ ಕೇಜ್ರಿವಾಲ್ ತಿಹಾರ್ ಜೈಲಿಗೆ ಬಂದು ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ. ಶರಣಾಗುವ ಮುನ್ನ ಕೇಜ್ರಿವಾಲ್ ಅವರು ರಾಜ್‌ಘಾಟ್‌ನಲ್ಲಿ ಮಹಾತ್ಮ ಗಾಂಧಿ ಅವರಿಗೆ ನಮನ ಸಲ್ಲಿಸಿದರು. ಬಳಿಕ ಕನ್ನಾಟ್‌ನಲ್ಲಿರುವ ಹನುಮಾನ್ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ● 8ನೇ ಪುಟಕ್ಕೆ

ಅರುಣಾಚಲ ಪ್ರದೇಶದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಬಿಜೆಪಿ

ಸಿಕ್ಕಿಂನಲ್ಲಿ ಮತ್ತೇ ಎಸ್‌ಕೆಎಂಗೆ ಅಧಿಕಾರ



ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪ್ರೇಮ ಖಂಡು

ಅರುಣಾಚಲ ಪ್ರದೇಶ, ಜೂ.2– ಲೋಕಸಭಾ ಚುನಾವಣೆ ಫಲಿತಾಂಶಕ್ಕೂ ಮೊದಲು ಅರುಣಾಚಲ ಪ್ರದೇಶದ ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಇಂದು ಬೆಳಗ್ಗೆಯಿಂದ ನಡೆದ ಮತ ಎಣಿಕೆಯಲ್ಲಿ ಬಿಜೆಪಿ 60 ಸ್ಥಾನಗಳ ಪೈಕಿ 46 ಸ್ಥಾನ ಗೆದ್ದುಕೊಂಡಿದೆ. ಈ ಮೂಲಕ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೇರಿದೆ. ಈ ಮೂಲಕ ಬಿಜೆಪಿ ಸತತ 3ನೇ ಬಾರಿಗೆ ಅಧಿಕಾರಕ್ಕೇರಿದ ಸಾಧನೆ ಮಾಡಿದೆ.

ಅರುಣಾಚಲ ಪ್ರದೇಶ ಚುನಾವಣೆ ಹಲವು ಕುತೂಹಲಕ್ಕೆ ಕಾರಣವಾಗಿತ್ತು. ಚುನಾವಣೆ ವೇಳೆಯ ಮುಖ್ಯಮಂತ್ರಿ ಹಾಗೂ ಬಿಜೆಪಿ ಅಭ್ಯರ್ಥಿ ಪ್ರೇಮಾ ಖಂಡು ಸೇರಿದಂತೆ 10 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರು. ಹೀಗಾಗಿ ಒಟ್ಟು 60 ಸ್ಥಾನಗಳ ಪೈಕಿ ಇಂದು ಕೇವಲ 50 ಸ್ಥಾನಗಳಿಗೆ ಮಾತ್ರ ಮತ ಎಣಿಕೆ ನಡೆದಿತ್ತು. ಇದೀಗ ಬಿಜೆಪಿ ಒಟ್ಟು 46 ಸ್ಥಾನಗಳನ್ನು ಗೆಲ್ಲುವ ಮೂಲಕ ಅರುಣಾಚಲ ಪ್ರದೇಶದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದೆ.

ಬಿಜೆಪಿ 46 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ, ಕಾಂಗ್ರೆಸ್ ಕೇವಲ 1 ಸ್ಥಾನ ಗೆದ್ದುಕೊಂಡಿದೆ. ಇನ್ನು ಅರುಣಾಚಲ ಪ್ರದೇಶದ ಪ್ರಬಲ ಪ್ರಾದೇಶಿಕ ಪಕ್ಷ ನ್ಯಾಷನಲ್ ಪೀಪಲ್ಸ್ ಪಾರ್ಟಿ 5 ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ವಿಶೇಷ ಅಂದರೆ ಮೂವರು ಪಕ್ಷೇತರರು ಶಾಸಕರಾಗಿದ್ದಾರೆ.

ಅರುಣಾಚಲ ಪ್ರದೇಶದ ಹಾಲಿ ಬಿಜೆಪಿ ಮುಖ್ಯಮಂತ್ರಿ ಪ್ರೇಮಾ ಖಂಡು ಮತ್ತೆ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಶೀಘ್ರದಲ್ಲೇ ಬಿಜೆಪಿ ಸರ್ಕಾರ ರಚಿಸಲಿದೆ. ಇದಕ್ಕಾಗಿ ರಾಜ್ಯಪಾಲರ ಭೇಟಿಯಾಗಿ ಮನವಿ ಸಲ್ಲಿಸಲಿದೆ. ಇತ್ತ ಬಿಜೆಪಿ ಕಾರ್ಯಕರ್ತರ ಸಂಭ್ರಮ ಶುರುವಾಗಿದೆ. ಇದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅರುಣಾಚಲ ಪ್ರದೇಶದ ● 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : 'ಕಾಡು ಬೆಳೆಸಿ, ನಾಡು ಉಳಿಸಿ. ಈ ರೀತಿಯ ಮತ್ತೊಂದು ಉದಾಹರಣೆ ಕೊಡು

ಗುಂಡ : ಎಲ್ಲರ ತಲೆ ಬೋಳಿಸಿ, ಕೊಬ್ಬರಿ ಎಣ್ಣೆ ಉಳಿಸಿ

ಮೈಸೂರು ಮಿತ್ರ

ಸೋಮವಾರ, 3 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಪ್ರತಿಭೆ ಇಲ್ಲ ಎಂದು ಕೊರಗಬಾರದು. ಕಠಿಣ ಪರಿಶ್ರಮ ಹಾಗೂ ಸಾಧಿಸಬೇಕೆಂಬ ಛಲ ಪ್ರತಿಭೆಗಿಂತಲೂ ಪ್ರಖರವಾದುದು...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ತಮ್ಮ ಮನೇಲಿ ಹೆಗ್ಗಣ ಸತ್ತಿದ್ರೂ ಬೇರೆ ಮನೆಯ ಸತ್ತ ನೊಣದ ಕಡೆ ಬೆಟ್ಟು ಮಾಡಿದ ಹಾಗೆ

ನಿಮ್ಮ ಪತ್ರಗಳು

ದಶಕವಾಗುತ್ತಿದ್ದರೂ ಕಸ ನಿರ್ಮೂಲನೆ ಅಸಾಧ್ಯವಾಗಿದೆ



ಮಾನ್ಯರೆ,

2016ರಲ್ಲಿ ಮೈಸೂರು ದೇಶದಲ್ಲೇ ಸ್ವಚ್ಛನಗರಿ ಪಟ್ಟಿಯಲ್ಲಿ ಪ್ರಥಮ ಸ್ಥಾನ ಪಡೆದಿತ್ತು. ವರ್ಷಗಳು ಕಳೆದಂತೆ ತನ್ನ ಸ್ಥಾನವನ್ನು ಕಳೆದುಕೊಳ್ಳಲಾರಂಭಿಸಿದೆ. 2020ರಲ್ಲಿ 5ನೇ ಸ್ಥಾನದಿಂದ 2023ರಲ್ಲಿ 27ನೇ ಸ್ಥಾನಕ್ಕೆ ಕುಸಿದಿದೆ. ಇದಕ್ಕೆ ಕೇವಲ ಪಾಲಿಕೆ ಅಧಿಕಾರಿಗಳು ಕಾರಣವಲ್ಲ, ಸಾರ್ವಜನಿಕರದ್ದೂ ಪಾತ್ರವಿದೆ.

ಮೈಸೂರಿನ ರಾಜೀವ್‌ನಗರ ಎರಡನೇ ಹಂತದಲ್ಲಿ ಗುಂಪು ಮನೆ ನಿರ್ಮಾಣಕ್ಕಾಗಿ ಮೀಸಲಿಟ್ಟಿರುವ ಸರ್ಕಾರಿ ಜಾಗದ ಸುತ್ತಲೂ ಕಸದ ರಾಶಿ ಸುರಿಯಲಾಗಿದೆ. ಸುಮಾರು 7–8 ವರ್ಷಗಳಿಂದ ಈ ಸಮಸ್ಯೆ ತಾಂಡವ ವಾಡುತ್ತಿದೆ. ಬೆಳಗಿನ ಜಾವ ಕಸ ಸಂಗ್ರಹಿಸಲು ಬರುವ ವಾಹನಕ್ಕಿಂತ ಹೆಚ್ಚು ತ್ಯಾಜ್ಯ ಈ ಪ್ರದೇಶದಲ್ಲಿ ಬಿದ್ದಿರುತ್ತದೆ. ಇಷ್ಟೇ ಅಲ್ಲದೆ ಈ ಕಸದೊಂದಿಗೆ ಒಳಚರಂಡಿ ನೀರು ಹರಿಯುತ್ತಿರುತ್ತದೆ. ಇನ್ನು ಈ ಜಾಗದ ಒಂದು ಭಾಗದಲ್ಲಿ ರಾಜಕಾಲುವೆ ಹರಿಯುತ್ತಿರುತ್ತದೆ. ಮೂರು ದಿಕ್ಕಿನಲ್ಲಿ ರಸ್ತೆ ಹಾದುಹೋಗಿದೆ. ಪ್ರತಿಬಾರಿ ರಸ್ತೆ ಸ್ವಚ್ಛಗೊಳಿಸಿದಾಗ ಜನರು ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿ ರಾಜಕಾಲುವೆಗೆ ಬಿಸಾಡುತ್ತಾರೆ. ಜನರು ತಮ್ಮ ಮನೆಯ ಹಳೆಯ ವಸ್ತುಗಳಾದ ಸೋಫಾ, ಪ್ಲಾಸ್ಟಿಕ್ ಡಬ್ಬಗಳನ್ನು ಇಲ್ಲಿ ಬಿಸಾಕುತ್ತಾರೆ. ಇದರಿಂದ ಕೆಲದಿನಗಳ ಹಿಂದೆ ನಾಯಿಯೊಂದು ಆಹಾರಕ್ಕಾಗಿ ಹುಡುಕುತ್ತಾ ತನ್ನ ತಲೆಯನ್ನು ಪ್ಲಾಸ್ಟಿಕ್ ಡಬ್ಬದೊಳಗೆ ಸಿಕ್ಕಿಸಿಕೊಂಡಿತ್ತು. ಇನ್ನು ಈ ವಸತಿ ಜಾಗದಲ್ಲಿ ಸಣ್ಣ ಕಾಡು ಬೆಳೆದು ನಿಂತಿದ್ದು ಹಾವುಗಳು ಮನೆಗೆ ಬರುವ ಹಾಗೂ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಿಸುತ್ತಿದ್ದಾರೆ. ಅಧಿಕಾರಿಗಳು ಕೂಡಲೇ ಇದರ ಬಗ್ಗೆ ಗಮನಹರಿಸಿ, ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಸಾರ್ವಜನಿಕರು ಇಲ್ಲಿ ಕಸ ಬಿಸಾಡುವುದನ್ನು ಬಿಟ್ಟು ಸರ್ಕಾರಕ್ಕೆ ತ್ಯಾಜ್ಯ ನಿರ್ವಹಣೆಯಲ್ಲಿ ಸಹಕರಿಸಬೇಕಿದೆ.

–ವಿ.ಕಿರಣ್, ಪತ್ರಿಕೋದ್ಯಮ ವಿದ್ಯಾರ್ಥಿ, ಸಂತ ಫಿಲೋಮಿನಾ ಕಾಲೇಜು, ಮೈಸೂರು

ನಿಗಮ, ಮಂಡಳಿ ಭ್ರಷ್ಟಾಚಾರ ತಡೆಗೆ ಕ್ರಮ ಅಗತ್ಯ

ಮಾನ್ಯರೆ,

ರಾಜ್ಯ ವಾಲ್ಮೀಕಿ ಅಭಿವೃದ್ಧಿ ಮಂಡಳಿಯಲ್ಲಿ ನಡೆದಿರುವ ಹಣ ದುರ್ಬಳಕೆ ವ್ಯವಹಾರ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರನ್ ಅವರ ಆತ್ಮಹತ್ಯೆಯ ಕಾರಣದಿಂದ ಬಯಲಾಗಿದೆ.

ನಿಗಮದ ಸಿಬ್ಬಂದಿಗಳು, ನಿಗಮದ ಪ್ರತಿನಿಧಿಗಳು, ಬ್ಯಾಂಕ್ ಅಧಿಕಾರಿಗಳು ಸೇರಿ ವ್ಯವಸ್ಥಿತವಾಗಿ ಹಣ ದುರ್ಬಳಕೆ ಮಾಡಿಕೊಂಡಿರುವುದು ದಂಗು ಬಡಿಸುವಂತಿದೆ. ಇದು ಒಂದು ನಿಗಮದ ಕತೆಯಷ್ಟೇ. ರಾಜ್ಯದಲ್ಲಿ ಈ ರೀತಿ ಅನೇಕ ನಿಗಮ /ಮಂಡಳಿಗಳಿವೆ. ಜನಪ್ರತಿನಿಧಿಗಳು, ನಿಗಮ ಮಂಡಳಿಗಳ ಅಧ್ಯಕ್ಷರಾಗಲು ಯಾಕೆ ಕಾತರಿಸುತ್ತಾರೆ ಎನ್ನುವುದು ಇದರಿಂದ ತಿಳಿಯುತ್ತದೆ. ಆದ್ದರಿಂದ ನಿಗಮ, ಮಂಡಳಿಗಳಲ್ಲಿ ನಡೆಯುವ ಹಣಕಾಸು ವ್ಯವಹಾರ ಪಾರದರ್ಶಕವಾಗಿ ನಡೆಯುವಂತೆ ನಿಗಾ ವಹಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಹಾಗೂ ಪ್ರತಿಯೊಂದು ಹಣಕಾಸಿನ ವ್ಯವಹಾರವನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಪಾರದರ್ಶಕ ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಇದು ಸೂಕ್ತ ಕಾಲವಾಗಿದೆ.

ವಾಲ್ಮೀಕಿ ಅಭಿವೃದ್ಧಿ ಮಂಡಳಿಯಲ್ಲಿ ದುರ್ಬಳಕೆಯಾಗಿರುವ ಪೂರ್ತ ಹಣವನ್ನು ವಾಪಸ್ ಖಾತೆಗೆ ಜಮಾ ಮಾಡಲು ಹಾಗೂ ಸಂಬಂಧಿಸಿದವರಿಗೆ ಕಠಿಣ ಶಿಕ್ಷೆಯಾಗುವಂತೆ ತನಿಖೆ ಸರಿಯಾದ ದಾರಿಯಲ್ಲಿ ನಡೆಯಲಿ. ಎಲ್ಲಾ ನಿಗಮ, ಮಂಡಳಿಗಳಲ್ಲಿ ಸರ್ಕಾರದ ಅನುಮೋದನೆ ಇಲ್ಲದೆ ಹಣ ಪಡೆಯಲು ಅವಕಾಶ ನೀಡದಂತೆ ಆದೇಶ ಮಾಡಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಓಟು ಹಾಕಲು ಬಾರದ ಶಿಕ್ಷಕರು ಪಾಠ ಮಾಡಲು ಅರ್ಹರೆ...?

ಮಾನ್ಯರೆ,

ಇದೇ, ತಿಂಗಳು ಅಂದರೆ ಜೂ.3ರಂದು ರಾಜ್ಯದಲ್ಲಿ ವಿಧಾನಪರಿಷತ್ತಿನ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಕ್ಕೆ ಚುನಾವಣೆ ನಡೆಯುತ್ತಿದೆ.

ಇದೇ ವೇಳೆ, ಮಂಡ್ಯ, ಮೈಸೂರು ಚಾಮರಾಜನಗರ ಮತ್ತು ಹಾಸನ ಜಿಲ್ಲೆ ಒಳಗೊಂಡಂತೆ , ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೂ ಚುನಾವಣೆ ನಡೆಯುತ್ತಿರುವುದು ಸರಿಯಷ್ಟೆ, ಕಳೆದ ಬಾರಿ (2018) ಈ ಕ್ಷೇತ್ರದಲ್ಲಿ ಒಟ್ಟು ಚಲಾವಣೆಯಾದ 16,696 ಮತಗಳಲ್ಲಿ 819 ಕುಲಗೆಟ್ಟ ಮತಗಳು ಬಿದ್ದಿದ್ದವು.

ಇದು ಹೇಳಿ–ಕೇಳಿ ಶಿಕ್ಷಕರ ಮತ ಕ್ಷೇತ್ರ. ಇಲ್ಲಿ ಪ್ರೌಢಶಾಲಾ ಶಿಕ್ಷಕರಿಂದ ಹಿಡಿದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ಶಿಕ್ಷಕರೇ ಮತದಾರರಾಗಿರುತ್ತಾರೆ, ಕೆಲವು ಸುಶಿಕ್ಷಿತರರಿಗೆ ಸರಿಯಾಗಿ ಮತದಾನ ಮಾಡುವ ಕನಿಷ್ಠ ಜ್ಞಾನವೂ ಇಲ್ಲವಾಯಿತೆ? ಇವರು ಮಕ್ಕಳಿಗೆ ಪಾಠ ಹೇಳಿಕೊಡಲು ಅರ್ಹರೇ? ಇಲ್ಲಿ 1, 2, 3 ಈ ವಿಧಾನದಲ್ಲಿ ಪ್ರಾಶಸ್ತ್ಯ ಮತದಾನ ಮಾಡುವುದು ಕಡ್ಡಾಯವಾಗಿರುತ್ತದೆ. ಇಷ್ಟನ್ನು ಬರೆಯಲು ಬಾರದವರು ಹೇಗೆ ಶಿಕ್ಷಕರಾಗಿ ಕೆಲಸ ನಿರ್ವಹಿಸಲು ಸಾಧ್ಯ? ಈ ಬಾರಿ ಯಾದರೂ, ಒಂದೇ ಒಂದು ಕುಲಗೆಟ್ಟ ಮತದಾನವಾಗದಂತೆ, ಶಿಕ್ಷಕರು ಮತ ಚಲಾಯಿಸುವಂತಾಗಲಿ, ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

ಮನೆಯ ಕಸದಂತೆ ಮನದ ಕಸ ಗುಡಿಸಬೇಕು!

ಮನೆಯ ಕಸ ಗುಡಿಸುವ ಕೆಲಸ ಎಂದರೆ ತುಂಬಾ ಸುಲಭದ್ದು, ಹಾಗೆಯೆ ಯಾರು ಬೇಕಾದರೂ ಕಸ ಗುಡಿಸಿ ಕಸದಡಬ್ಬಿಗೆ ಹಾಕಿ, ಮನೆಯಿಂದ ಹೊರಗೆ ಬಿಸಾಡಿಬಿಡಬಹುದು. ಆದರೆ ಮನದ ಕಸವನ್ನು ಗುಡಿಸುವುದು ಅಷ್ಟು ಸುಲಭವಲ್ಲ. ಮನೆಯ ಒಳಗೆ ಹೆಚ್ಚಾಗಿ ಕಸ ಬೀಳದಂತೆ ನೋಡಿಕೊಳ್ಳಬಹುದು. ನಿತ್ಯ ಕಸ ತೆಗೆಯದಿದ್ದರೂ ವಾರಕ್ಕೆ ಎರಡು ದಿನ ತೆಗೆದರೂ ಪರವಾಗಿಲ್ಲ. ಆದರೆ ಮನದ ಕಸವನ್ನು ನಿತ್ಯ ತೆಗೆಯುವ ಅಗತ್ಯವಿದೆ. ಮನದ ಕಸ ಹೆಚ್ಚಾದ ಕಾರಣಕ್ಕೆ ಮನಸ್ಸಿನಲ್ಲಿ ಗೊಂದಲ, ಆತಂಕ, ಅತೃಪ್ತಿ, ಅಸಮಾಧಾನ ಎಲ್ಲವೂ ಉಂಟಾಗುತ್ತದೆ. ಜಮೀನಿನಲ್ಲಿ ಅನಗತ್ಯವೆನಿಸುವ ಕಳೆ ತೆಗೆಯದ ಹೊರತು ಉತ್ತಮ ಬೆಳೆ ಬೆಳೆಯಲು ಅವಕಾಶವಿರದು. ಹಾಗೆಯೆ ಮನದ ಕಸವನ್ನು ತೆಗೆಯದ ಹೊರತು ಮನಸ್ಸಿನಲ್ಲಿ ಶಾಂತಿ, ಸಮಾಧಾನ, ಸದ್ಭಾವನೆಗಳು ಮೂಡದು.

ಮನುಷ್ಯ ಪ್ರತಿನಿತ್ಯದ ಬದುಕಿನಲ್ಲಿ ಒಳ್ಳೆಯದು ಹಾಗೂ ಕೆಟ್ಟದು ಎಲ್ಲವನ್ನೂ ಕೇಳುತ್ತಾನೆ, ನೋಡುತ್ತಾನೆ. ಮನುಷ್ಯನ ಮನಸ್ಸು ಒಳ್ಳೆಯದರ ಕುರಿತು ಹೆಚ್ಚು ಆಸಕ್ತಿ ತೋರುವುದಕ್ಕಿಂತ ಹೆಚ್ಚಾಗಿ ಕೆಟ್ಟದ್ದರ ಕಡೆ ಕುತೂಹಲ ಹೊಂದಿರುತ್ತದೆ. ಕೆಟ್ಟ ಸುದ್ದಿ, ಕೆಟ್ಟ ಘಟನೆ ಒಂದಿಲ್ಲೊಂದು ರೂಪದಲ್ಲಿ ಮನಸ್ಸನ್ನು ಹೊಕ್ಕುತ್ತಿರುತ್ತದೆ. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ನಮಗೆ ಇಷ್ಟವಿರಲಿ, ಇಲ್ಲದಿರಲಿ ಕೆಟ್ಟ ಸಂಗತಿಗಳು ಅರಿವಿಗೆ ಬರುತ್ತಲೇ ಹೋಗುತ್ತವೆ. ಅದರಿಂದ ಮನಸ್ಸು ಕಸಿವಿಸಿ ಹೊಂದುತ್ತದೆ. ಕೆಟ್ಟ ಸಂಗತಿಗಳು ಕೆಟ್ಟ ಆಲೋಚನೆಗಳಿಗೆ ಎಡೆಮಾಡಿಕೊಡುತ್ತದೆ. ಕೆಲವರಿಗೆ ಕೆಟ್ಟ ಕೃತ್ಯದ ಸಾಧ್ಯತೆ ಕುರಿತು ಪ್ರೇರೇಪಿಸುತ್ತಲೇ ಇರುತ್ತದೆ. ಅದರಿಂದ ಕೆಲವು ಅವಿವೇಕಿಗಳಿಂದ ಅನೇಕ ಅನಿರೀಕ್ಷಿತ ದುಷ್ಕೃತ್ಯಗಳು ಸಂಭವಿಸಿಬಿಡುತ್ತವೆ.

ಇಂದಿನ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳು ಯಾವುದೇ ಸೆನ್ಸಾರ್ ಇಲ್ಲದೆ ಸುದ್ದಿಗಳನ್ನು ಪ್ರಸಾರ ಮಾಡುತ್ತವೆ. ದೃಶ್ಯ ಮಾಧ್ಯಮಗಳು ಶುದ್ಧವಾದ ಮನಸ್ಸನ್ನು ಬಹುಬೇಗ ಅಶುದ್ಧ ಮಾಡಿಬಿಡುತ್ತವೆ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮದ, ಮತ್ಸರ, ಮೋಹ, ಲೋಭ ಮನುಷ್ಯನ ಮನಸ್ಸಿಗೆ ಕಸವನ್ನು ತುಂಬುವ ಕೆಲಸವನ್ನು ಮಾಡುತ್ತಲೇ ಇರುತ್ತವೆ. ಆದ್ದರಿಂದ ಮನುಷ್ಯ ಮನಸ್ಸನ್ನು ಆಗಾಗ್ಗೆ ಶುದ್ಧಿ ಮಾಡಿಕೊಳ್ಳುವ ಅಗತ್ಯವಿದೆ. ಕಂಪ್ಯೂಟರ್‌ಗೆ ವೈರಸ್ ಹೊಕ್ಕರೆ ಅದನ್ನು ಸಂರಕ್ಷಿಸಲು ಅಥವಾ ವೈರಸ್‌ಗಳ ನಿರ್ಮೂಲನೆಗೆ ಆ್ಯಂಟಿ ವೈರಸ್ ಬಳಸಿ ಸುಲಭವಾಗಿ ವೈರಸ್ ಮುಕ್ತ ಮಾಡಬಹುದು. ಆದರೆ ಮನಸ್ಸನ್ನು ಹೊಕ್ಕ ಕೆಟ್ಟ ಸಂಗತಿಗಳನ್ನು ಹೊರದಬ್ಬುವುದು, ಮನಸ್ಸನ್ನು ಸ್ವಚ್ಛವಾಗಿ, ಸ್ವಸ್ಥವಾಗಿ ಇರಿಸಿಕೊಳ್ಳುವುದು ಅಷ್ಟು ಸಲೀಸಲ್ಲ. ಏಕೆಂದರೆ ಮನುಷ್ಯ ಒಂದು ದಿನಕ್ಕೆ ಆಲೋಚಿಸುವ ಸಂಗತಿಗಳ ಸಂಖ್ಯೆಯೇ 60,000 ಮೀರುತ್ತದೆ. ಈ ಆಲೋಚನೆಗಳಲ್ಲಿ ಕೆಟ್ಟ ಆಲೋಚನೆಗಳು ಸಹ ಅರ್ಧ ಸೇರಿರುತ್ತವೆ. ಕೆಟ್ಟ ಸಂಗತಿಗಳು ಮನಸ್ಸಿನಲ್ಲಿ ಬಹುಕಾಲ ಉಳಿದುಬಿಡುತ್ತವೆ. ಆದರೆ ಅವುಗಳನ್ನು ಅಷ್ಟೇ ಸುಲಭವಾಗಿ ತೆಗೆದುಹಾಕಲು ಆಗುವುದಿಲ್ಲ. ಕೆಟ್ಟ ಸಂಗತಿಗಳಿಂದ ಮನುಷ್ಯ ಒಂದು ರೀತಿ ಮಾನಸಿಕ ಅಸ್ವಸ್ಥನಾಗಿಬಿಡುತ್ತಾನೆ. ಸಮಾಜದ ಕುರಿತು ಅವನಿಗೆ ಒಳ್ಳೆಯ ಭಾವನೆ ಮೂಡುವುದಕ್ಕಿಂತ ಕೆಟ್ಟ ಭಾವನೆಗಳೆ ಮೂಡುತ್ತದೆ. ಕೆಲವರಿಗೆ ಯಾರನ್ನೂ ನಂಬದ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ಪೂರ್ವಗ್ರಹಪೀಡಿತರಾಗಿ ಒಳ್ಳೆಯವರನ್ನು ಸಹ ಕೆಟ್ಟ ಮನುಷ್ಯರ ಸಾಲಿನಲ್ಲಿ ನಿಲ್ಲಿಸಿಬಿಡುವಂತೆ ಮಾಡಿಬಿಡುವ ಸಾಧ್ಯತೆ ಇರುತ್ತದೆ. ಇಡೀ ಪ್ರಪಂಚವೇ ಒಂದು ಪಾಪಿಗಳ ಲೋಕದಂತೆ ಗೋಚರಿಸಲು ಪ್ರಾರಂಭವಾಗುತ್ತದೆ. ಪ್ರಪಂಚದಲ್ಲಿ ಕೆಟ್ಟದಕ್ಕಿಂತ ಒಳ್ಳೆಯದು ಸಹ ಇರುತ್ತದೆ. ಆದರೆ ಒಳ್ಳೆಯದಕ್ಕೆ ಮನಸ್ಸನ್ನು ತೆರೆದುಕೊಳ್ಳಬೇಕು ಅಷ್ಟೆ

ಮನಸ್ಸಿನಿಂದ ಕೆಟ್ಟ ಸಂಗತಿಗಳನ್ನು ಹೊರದೂಡಲು ಮನುಷ್ಯನ ಮನಸ್ಸಿಗೆ ಒಂದು ವಿಶ್ರಾಂತ ಸ್ಥಿತಿ ಬೇಕಾಗುತ್ತದೆ. ಅದು ಸತತ ಅಭ್ಯಾಸದಿಂದ ಮಾತ್ರ ಸಾಧ್ಯ. ಬೆಳಗ್ಗೆ ಎದ್ದಾಗ ಯೋಗ, ಧ್ಯಾನ, ವಾಕಿಂಗ್‌ನಿಂದ ಮನುಷ್ಯ ತುಸು ನಿರಾಳನಾಗಬಹುದು. ಅದೇ ರೀತಿ ಸಜ್ಜನರ ಸಹವಾಸವನ್ನು ಮಾಡುವ ಅಗತ್ಯವಿರುತ್ತದೆ. ಅನೇಕ ವಿದ್ಯಾವಂತರೇ ಮನಸ್ಸಿಗೆ ಕಸಿವಿಸಿಯಾಗುವಂತಹ ಹಸಿಬಿಸಿ ಸುದ್ದಿಗಳನ್ನು ಯಾವುದೇ ನಾಚಿಕೆ ಇಲ್ಲದೆ ಹಂಚಿಕೊಳ್ಳುತ್ತಾರೆ. ಹೌದು, ಸಮಾಜದಲ್ಲಿ ಅನೇಕ ಕೆಟ್ಟ ಸಂಗತಿಗಳು ನಡೆಯುತ್ತಿರಬಹುದು, ಅದೇ ರೀತಿ ಒಳ್ಳೆಯ ಸಂಗತಿಗಳು ಸಹ ನಡೆಯುತ್ತಿರುತ್ತವೆ ಅಲ್ಲವೇ? ಅವುಗಳ ಕುರಿತು ಚರ್ಚೆ ಮಾಡಬೇಕು. ಹಾಗೆಯೇ ಕೆಟ್ಟ ಸಂಗತಿಗಳ ಕುರಿತು ಕುತೂಹಲ ಕಡಿಮೆ ಮಾಡಿಕೊಳ್ಳುವುದು, ಒಳ್ಳೆಯ ಸಂಗತಿಗಳನ್ನು ಆಲಿಸುವುದು, ನೋಡುವುದು ಅಭ್ಯಾಸ ಮಾಡಿಕೊಳ್ಳಬೇಕು. ಕೆಟ್ಟ ಸುದ್ದಿಗಳು ಬೇಡವೆಂದರೂ ಕಿವಿಗೆ ಬೀಳುತ್ತಿರುತ್ತವೆ. ಆದರೆ ಒಳ್ಳೆಯ ಸಂಗತಿಗಳನ್ನು ಹುಡುಕಿಕೊಂಡೇ ಹೋಗಬೇಕು. ಯಾವ ವ್ಯಕ್ತಿ ಕೆಟ್ಟ ವಿಷಯಗಳಿಗೆ ಬೆನ್ನುಮಾಡಿ ಒಳ್ಳೆಯ ಸಂಗತಿಗಳ ಬಗ್ಗೆ ಮುಖ ಮಾಡುವನೋ ಅವನ ಮಾನಸಿಕ ಸ್ವಾಸ್ಥ್ಯ ಉತ್ತಮವಾಗಿರುತ್ತದೆ.



> **ಮುಖವನ್ನು ಮನಸ್ಸಿನ ಕೈಗನ್ನಡಿ ಎನ್ನುವುದುಂಟು. ಹಾಗೆ ನೋಡುವುದಾದರೆ ಇಂದು ಬಹುತೇಕ ಜನರ ಮುಖವನ್ನು ಗಮನಿಸಿ. ಅವರ ಮುಖದಲ್ಲಿ ಶಾಂತಿ, ಸಮಾಧಾನ, ಸಂತೃಪ್ತಿ ಕಾಣುವುದೇ ಇಲ್ಲ. ಅತೃಪ್ತಿ, ಅಸಮಾಧಾನ, ಅಶಾಂತಿಯೇ ಕಾಣುತ್ತಿರುತ್ತದೆ. ಅದಕ್ಕೆ ಮನಸ್ಸಿನಲ್ಲಿ ತುಂಬಿಕೊಂಡಿರುವ ಕಸವೇ ಕಾರಣ. ಆ ಕಸವನ್ನು ಗುಡಿಸಿದವರನ್ನು ಗಮನಿಸಿ ನೋಡಿ ಅವರ ಮುಖದಲ್ಲಿ ಒಂದು ಮಂದಹಾಸವಿರುತ್ತದೆ, ಯಾವುದೇ ಪ್ರಕ್ಷುಬ್ಧತೆ ಇರುವುದಿಲ್ಲ, ಶಾಂತಚಿತ್ತರಾಗಿರುವುದು ಅವರ ಮುಖಾರವಿಂದದಿಂದಲೇ ತಿಳಿಯುತ್ತದೆ.**

ದಿನಪತ್ರಿಕೆಯಾಗಲಿ, ಟಿ.ವಿ.ಚಾನೆಲ್‌ಗಳೇ ಆಗಲಿ ಕೆಟ್ಟ ಹಾಗೂ ಒಳ್ಳೆಯ ಸುದ್ದಿಗಳನ್ನು ಹೊಂದಿರುತ್ತವೆ. ಮೊಬೈಲ್‌ನಲ್ಲಿ ಸಿಗುವ ಕಾರ್ಯಕ್ರಮಗಳಲ್ಲಿಯೂ ಅಷ್ಟೇ. ನಾವು ನಮ್ಮ ಅಭಿರುಚಿಗೆ ತಕ್ಕಹಾಗೆ ಓದುತ್ತೇವೆ ಹಾಗೂ ವೀಕ್ಷಿಸುತ್ತೇವೆ. ನಾವು ನೋಡುವ ಕಾರ್ಯಕ್ರಮಗಳೇ ನಮ್ಮ ವ್ಯಕ್ತಿತ್ವವನ್ನು ಹೇಳಿಬಿಡುತ್ತವೆ. ಒಳ್ಳೆಯ ಚಿಂತನೆ ಇರುವಂತಹ ಅನೇಕ ಉತ್ತಮ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ, ಅವುಗಳ ಕುರಿತು ಗಮನ ಹರಿಸದೇ ಮನಃಶಾಂತಿಯನ್ನು ಕದಡುವಂತಹ ಅನಾಚಾರ, ಅತ್ಯಾಚಾರ, ವ್ಯಭಿಚಾರದ ಸುದ್ದಿಗಳಿಗೆ ಹೆಚ್ಚು ಆದ್ಯತೆ ನೀಡಿದರೆ ಮನಸ್ಸು ಗೊಂದಲದ ಗೂಡಾಗುತ್ತವೆ. ಸಮಾಜದಲ್ಲಿ ನಡೆಯುವ ದುಷ್ಕೃತ್ಯಗಳನ್ನು ಮನಸ್ಸಿಗೆ ತುಂಬಿಕೊಳ್ಳಲು ನಮ್ಮ ಮನಸ್ಸು ಕಸದ ತೊಟ್ಟಿಯಲ್ಲ. ನಮ್ಮ ಮನಸ್ಸನ್ನು ಈ ರೀತಿಯ ಕಸದ ತೊಟ್ಟಿ ಮಾಡಿಕೊಂಡರೆ ನಮ್ಮ ವ್ಯಕ್ತಿತ್ವವೇ ದುರ್ನಾತ ಬೀರುತ್ತದೆ.

ಮುಖವು ಮನಸ್ಸಿನ ಕೈಗನ್ನಡಿ ಎನ್ನುವುದುಂಟು. ಹಾಗೆ ನೋಡುವುದಾದರೆ ಇಂದು ಬಹುತೇಕ ಜನರ ಮುಖವನ್ನು ಗಮನಿಸಿ. ಅವರ ಮುಖದಲ್ಲಿ ಶಾಂತಿ, ಸಮಾಧಾನ, ಸಂತೃಪ್ತಿ ಕಾಣುವುದೇ ಇಲ್ಲ. ಅತೃಪ್ತಿ, ಅಸಮಾಧಾನ, ಅಶಾಂತಿಯೇ ಕಾಣುತ್ತಿರುತ್ತದೆ. ಅದಕ್ಕೆ ಮನಸ್ಸಿನಲ್ಲಿ ತುಂಬಿಕೊಂಡಿರುವ ಕಸವೇ ಕಾರಣ. ಆ ಕಸವನ್ನು ಗುಡಿಸಿದವರನ್ನು ಗಮನಿಸಿ ನೋಡಿ ಅವರ ಮುಖದಲ್ಲಿ ಒಂದು ಮಂದಹಾಸವಿರುತ್ತದೆ, ಯಾವುದೇ ಪ್ರಕ್ಷುಬ್ಧತೆ ಇರುವುದಿಲ್ಲ, ಶಾಂತಚಿತ್ತರಾಗಿರುವುದು ಅವರ ಮುಖಾರವಿಂದದಿಂದಲೇ ತಿಳಿಯುತ್ತದೆ.

ಮನುಷ್ಯನ ಬದುಕು ಗೊಂದಲದ ಗೂಡಾಗುವುದು ಅವನ ಮನಸ್ಸಿನ ವೇಗದಿಂದ ಅನ್ನಬಹುದು. ಸ್ಥಿಮಿತತೆ ಇಲ್ಲದೆ, ಒಂದೆಡೆ ನಿಲ್ಲದ, ನಿಮಿಷಕ್ಕೆ ನೂರಾರು, ಗಂಟೆಗೆ ಸಾವಿರಾರು ಆಲೋಚನೆಗಳನ್ನು ಮಾಡುವ ಮನಸ್ಸಿಗೆ ಕಡಿವಾಣ ಹಾಕುವುದು ಅಷ್ಟು ಸುಲಭದ ಮಾತಲ್ಲ. ನಿಯಂತ್ರಣ ತಪ್ಪಿದ ಹುಚ್ಚು ಕುದುರೆಯಂತೆ ಓಡುವ ಮನಸ್ಸನ್ನು ನಿರ್ದಿಷ್ಟ ದಾರಿಯಲ್ಲಿ, ನಿಧಾನ ಗತಿಯಲ್ಲಿ ನಡೆಯುವಂತೆ ಮಾಡುವುದು ಕಷ್ಟಕರವಾದುದು. ಇಂದು ಮನಸ್ಸು ಬ್ರೇಕಿಂಗ್ ನ್ಯೂಸ್‌ಗೆ ಒತ್ತು ಕೊಡುವಷ್ಟು ನಮ್ಮ ಮನಸ್ಸನ್ನು ನಿಯಂತ್ರಣದಲ್ಲಿಡುವ ಒಳ್ಳೆಯ ಕಾರ್ಯಕ್ರಮದತ್ತ ಒಯ್ಯುವುದಿಲ್ಲ.

ಮನುಷ್ಯ ಮೊದಲಿಗೆ ಅನ್ಯ ವಿಷಯಗಳ ಹಾಗೂ ಅನ್ಯ ವ್ಯಕ್ತಿಗಳ ಕುರಿತು ಕುತೂಹಲವನ್ನು ಬಿಡಬೇಕು. ಅನೇಕ ವಿಷಯಗಳು ನಮ್ಮ ಬದುಕಿಗೆ ಅನವಶ್ಯಕವಾಗಿರುತ್ತವೆ. ಅವುಗಳ ಕುರಿತು ಚಿಂತಿಸುವುದು, ಚರ್ಚಿಸುವುದು, ಅವುಗಳನ್ನು ಮತ್ತಷ್ಟು ಜನರಿಗೆ ಹರಡುವುದು ಕೆಲವರ ಕಾಯಕವಾಗಿರುತ್ತದೆ. ಇದರಿಂದ ಸಮಾಜದ ಆರೋಗ್ಯವೂ ಹಾಳು, ಜನರ ಆರೋಗ್ಯವೂ ಹಾಳು. ಇಂದಿನ ಸ್ಪರ್ಧಾ ಜಗತ್ತಿನಲ್ಲಿ, ಕಲುಷಿತ ವಾತಾವರಣದಲ್ಲಿ, ಆಧುನಿಕ ಜೀವನಶೈಲಿ ಅನುಸರಿಸುತ್ತಿರುವ ಜನರಿಗೆ ಬೇಡವೆಂದರೂ ಬಿ.ಪಿ., ಶುಗರ್‌ನಂತಹ ಖಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಅಂತಹದರಲ್ಲಿ ಇಲ್ಲಸಲ್ಲದ ವಿಷಯಗಳ ಕುರಿತು ಚರ್ಚಿಸಿದರೆ ನಾವೇ ಅನಾರೋಗ್ಯವನ್ನು ಆಹ್ವಾನ ಮಾಡಿದಂತೆ ಅಲ್ಲವೇ?

ನಮ್ಮ ದೇಹಕ್ಕೆ ಅನಾರೋಗ್ಯವಾದರೆ ತಕ್ಷಣ ವೈದ್ಯರನ್ನು ಭೇಟಿ ಮಾಡಿ ಕೆಲವೇ ದಿನಗಳಲ್ಲಿ ಸರಿಮಾಡಿಕೊಳ್ಳಬಹುದು. ಆದರೆ ಮನಸ್ಸಿನ ಆರೋಗ್ಯ ಕೆಟ್ಟರೆ ಅಷ್ಟು ಬೇಗ ಸರಿಮಾಡಿಕೊಳ್ಳಲು ಆಗುವುದಿಲ್ಲ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಇಂದಿನ ದಿನಮಾನದಲ್ಲಿ ಒಂದು ಸವಾಲೇ ಸರಿ. ಆದರೆ ಮನುಷ್ಯ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ಮನಸ್ಸನ್ನು ಪ್ರಫುಲ್ಲವಾಗಿ, ಹಗುರವಾಗಿ ಇರಿಸಿಕೊಳ್ಳಬೇಕಾದರೆ ಅದರಲ್ಲಿರುವ ಕಸದ ವಿಲೇವಾರಿ ಆಗಬೇಕು. ಮನುಷ್ಯ ಈ ಕುರಿತು ಜಾಗೃತಿ ಮೂಡಿಸಿಕೊಳ್ಳಬೇಕು. ಶ್ರೀ ಷಣ್ಮುಖ ಸ್ವಾಮಿ ಅವರು 'ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ, ಇಂದ್ರಿಯಂಗಳೆಂಬ ಶಾಖೆಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣು ಫಲಂಗಳ ಗ್ರಹಿಸಿ, ಭವದತ್ತ ಮುಖವಾಗಿ ಹೋಗುತ್ತಿದೆ ನೋಡಾ!. ಈ ಮನವೆಂಬ ಮರ್ಕಟನ ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ' ಎಂದು ತಮ್ಮ ವಚನವೊಂದರಲ್ಲಿ ಬಹಳ ಅರ್ಥಪೂರ್ಣವಾಗಿ ಹೇಳಿದ್ದಾರೆ.

ಮಾಡುವ ಕೆಲಸವನ್ನು ಕಾಯಕನಿಷ್ಠೆಯಿಂದ ಮಾಡಬೇಕು. ಸ್ನೇಹಿತರು ಹಾಗೂ ಬಂಧುಗಳೊಡನೆ ಉತ್ತಮ ಬಾಂಧವ್ಯ ಹೊಂದಬೇಕು. ಗಾಸಿಪ್ ಹಬ್ಬಿಸುವ, ಕೆಟ್ಟ ಸುದ್ದಿಗಳನ್ನು ಬಹಳ ಆಸಕ್ತಿಯಿಂದ ಚರ್ಚಿಸುವ ಜನರಿಂದ ಅಂತರ ಕಾಪಾಡಿಕೊಳ್ಳಬೇಕು. ಹತ್ತಿರದವರೊಂದಿಗೆ ಆತ್ಮಶುದ್ಧಿಯಾಗುವಂತ ವಿಚಾರಗಳನ್ನು ಚರ್ಚಿಸಬೇಕು. ಮನಸ್ಸಿಗೆ ನಿರಾಳತೆ ನೀಡುವ ಕಾರ್ಯಕ್ರಮಗಳನ್ನು ವೀಕ್ಷಿಸಬೇಕು. ಜೀವನ ಪ್ರೀತಿ ಹೆಚ್ಚಿಸುವಂತಹ ಉಪನ್ಯಾಸ, ಪ್ರವಚನಗಳನ್ನು ಆಲಿಸಬೇಕು. ಮನಸ್ಸಿಗೆ ಹಿತವೆನಿಸುವ ನಿಮ್ಮ ಮೆಚ್ಚಿನ ಪ್ರಾಕೃತಿಕವಾಗಿ ಸಿರಿವಂತಿಕೆಯಿಂದ ಕೂಡಿದ ಸ್ಥಳಕ್ಕೆ ಆಗಾಗ್ಗೆ ಭೇಟಿ ನೀಡುತ್ತಿರಬೇಕು. ಮನಸ್ಸಿಗೆ ಹೊಕ್ಕ ಕಸ ತೆಗೆಯುವುದು ಕಷ್ಟದ ಕೆಲಸವಾದ್ದರಿಂದ ಸಾಧ್ಯವಾದಷ್ಟು ಕಸ ಮನಸಿನ ಒಳಗೆ ಸೇರದಂತೆ ನೋಡಿಕೊಳ್ಳುವುದು ಒಳ್ಳೆಯದು, ಏನಂತೀರಿ?

ಪದ ತಾಂಬೂಲ: ನಮ್ಮ ಮನೆ ಕಸವನ್ನು ಯಾರು ಬೇಕಾದರೂ ಗುಡಿಸಬಹುದು, ಆದರೆ ನಮ್ಮ ಮನದ ಕಸವನ್ನು ನಾವೇ ಗುಡಿಸಬೇಕು.

ಮೈಸೂರಲ್ಲಿ ಸೈಕ್ಲೋಥಾನ್ ಮೂಲಕ ಪರಿಸರ ಜಾಗೃತಿ





ವಿಶ್ವ ಪರಿಸರ ದಿನದ ಮಾಸಾಚರಣೆ ಅಂಗವಾಗಿ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕದ ವತಿಯಿಂದ ಭಾನುವಾರ ಆಯೋಜಿಸಿದ್ದ 'ಸೈಕ್ಲೋಥಾನ್–2024'ಗೆ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಸಾಹಸ ಕ್ರೀಡಾಪಟು ಡಾ.ಉಷಾ ಹೆಗ್ಡೆ ಹಸಿರು ನಿಶಾನೆ ತೋರಿದರು. ಬಲಚಿತ್ರದಲ್ಲಿ ಸೈಕ್ಲೋಥಾನ್‌ನಲ್ಲಿ ವಿಜೇತರಾದವರಿಗೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ ಅವರು ಬಹುಮಾನ ವಿತರಿಸಿದರು.

ಮೈಸೂರು, ಜೂ.2(ಜಿಎ)–ವಿಶ್ವ ಪರಿಸರ ದಿನದ ಮಾಸಾಚರಣೆ ಅಂಗವಾಗಿ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಸೈಕ್ಲೋಥಾನ್–2024'ನಲ್ಲಿ ನೂರಾರು ಮಂದಿ ಸೈಕಲ್ ಸವಾರಿ ಮಾಡುವ ಮೂಲಕ ಪರಿಸರ ಜಾಗೃತಿ ಸಾರಿದರು.

ಮೈಸೂರಿನ ಚಾಮುಂಡಿಬೆಟ್ಟದ ತಾವರಕಟ್ಟೆ ಮುಂಭಾಗದಿಂದ ಆರಂಭವಾದ ಸೈಕ್ಲೋಥಾನ್‌ಗೆ ಇತ್ತೀಚೆಗೆ ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಸಾಹಸ ಕ್ರೀಡಾಪಟು ಡಾ.ಉಷಾ ಹೆಗ್ಡೆ ಹಸಿರು ನಿಶಾನೆ ತೋರಿದರು. ನಂತರ ತಾವರೆಕಟ್ಟೆಯಿಂದ ಚಾಮುಂಡಿಬೆಟ್ಟದ ದೇವಿಕೆರೆವರೆಗೂ 6.5 ಕಿ.ಮೀ ದೂರದ ವಿವಿಧ ವಿಭಾಗಗಳಲ್ಲಿ ಸೈಕ್ಲೋಥಾನ್ ನಡೆಯಿತು.

ಸೈಕ್ಲೋಥಾನ್‌ನಲ್ಲಿ 12 ವರ್ಷದೊಳಗಿನ ಹುಡುಗರು, ಹುಡುಗಿಯರು, 18 ವರ್ಷದೊಳಗಿನ ಹುಡುಗರು, ಹುಡುಗಿಯರು, ಅಮ್ಯೂಚರ್ ಪುರುಷರು, ಎಲೈಟ್ ಪುರುಷರು, ಮಹಿಳೆಯರು, ಮಾಸ್ಟರ್ ಪುರುಷರು, ಮಹಿಳೆಯರು (38 ಮತ್ತು 50 ವರ್ಷ ವಯಸ್ಸಿನವರು), ಗ್ರ್ಯಾಂಡ್ ಮಾಸ್ಟರ್ಸ್ ಪುರುಷರು, ಮಹಿಳೆಯರು (50 ವರ್ಷಕ್ಕಿಂತ ಮೇಲ್ಪಟ್ಟವರು) ಸೇರಿದಂತೆ 107 ಸೈಕ್ಲಿಸ್ಟ್‌ಗಳು ಭಾಗವಹಿಸಿದ್ದರು.

ನಂತರ ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ ಅವರು ವಿವಿಧ ವಿಭಾಗಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿ ಮಾತನಾಡಿದ ಅವರು, ಸೈಕ್ಲೋಪೀಡಿಯಾ ಸೈಕ್ಲಿಂಗ್ ಸ್ಪರ್ಧೆಗಳನ್ನು ಆಯೋಜಿಸಿದ್ದಕ್ಕಾಗಿ ಸೈಕ್ಲೋಪೀಡಿಯಾವನ್ನು ಶ್ಲಾಘಿಸಿ, ಇದರಿಂದ ಇಂದು ಹೆಚ್ಚು ಮಕ್ಕಳು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ. ಇದೇ ರೀತಿಯ ಕಾರ್ಯಕ್ರಮಗಳನ್ನು ನಗರಾದ್ಯಂತ ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸೈಕ್ಲೋಥಾನ್‌ನಲ್ಲಿ ಪಾಲ್ಗೊಂಡಿದ್ದ ಕೆಲ ನುರಿತ ಸೈಕ್ಲಿಸ್ಟ್‌ಗಳು ಮಾತನಾಡಿ, ಮೈಸೂರು ಮಹಾನಗರಪಾಲಿಕೆಯೂ ನಗರಾದ್ಯಂತ ಉತ್ತಮವಾಗಿ ಸೈಕಲ್ ಟ್ರಾಕ್ ಸಿದ್ಧಪಡಿಸಿದ್ದಾರೆ. ಆದರೆ ಅವುಗಳನ್ನು ಸೈಕ್ಲಿಸ್ಟ್‌ಗಳು ಬಳಸಲಾಗದ ಸ್ಥಿತಿಗೆ ತಲುಪುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕದ ಅಧ್ಯಕ್ಷ ಎ.ಎಸ್.ಯೋಗನರಸಿಂಹ, ಕಾರ್ಯದರ್ಶಿ ಕೆ.ಆರ್.ಪ್ರಭಾಕರರಾವ್, ವಿಶ್ವ ಪರಿಸರ ಮಾಸ ಸಮಿತಿ ಅಧ್ಯಕ್ಷ ವಿ.ಶ್ರೀನಾಥ್, ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಎಂ.ಸಿ.ಮಲ್ಲಿಕಾರ್ಜುನ್, ಸ್ಫೂರ್ತಿ ಅಧ್ಯಕ್ಷೆ ರಮಾ ಶ್ರೀಕಾಂತ್, ಸಂಯೋಜಕರಾದ ವೀಣಾ ಅಶೋಕ್, ಚಂದ್ರಶೇಖರ ಭಾರದ್ವಾಜ್, ಶಾಂತಿ ಭಾರದ್ವಾಜ್, ಅಶೋಕ್ ಉಪಸ್ಥಿತರಿದ್ದರು.

ಬಹುಮಾನ ವಿಜೇತರು

ಎಲೈಟ್ ಪುರುಷರ ವಿಭಾಗ : ಚರಿತ್ (12:48 ನಿ), ದೇವ್ ಜಗದೀಶ್ (12:57 ನಿ), ವೈಶಾಕ್ (13:03 ನಿ). **18 ವರ್ಷದೊಳಗಿನ ಬಾಲಕಿಯರ ವಿಭಾಗ**: ನೈರ್ಮಲ್ಯ (23:04 ನಿಮಿಷ), ಸುಭಾಷಿನಿ (32:32 ನಿಮಿಷ). **18 ವರ್ಷದೊಳಗಿನವರ ಬಾಲಕರು:** ಫಾಜಿಯುಲ್ (15:14 ನಿ.), ಸಿ. ರುಚಿರ್ (15:29 ನಿ.), ರಿಹಾನ್ ರೋಶನ್ (15:59 ನಿ.). **ಮಹಿಳೆಯರು:** ಜಿಯೋನ್ನಾಡಿಸೋಜಾ (17:16 ನಿಮಿಷ), ಆರಾಧನಾ (19:06 ನಿಮಿಷ), ನಿಥಿಲಾ ದಾಸ್ (19:27 ನಿಮಿಷ). **ಮಾಸ್ಟರ್ ವುಮೆನ್:** ಸಿಮಿ ಥಾಮಸ್ (23:17 ನಿಮಿಷ), ಯಶೋಧ (23:33)), ಕೆ.ವತ್ಸಲಾ (23:42 ನಿಮಿಷ). **ಮಾಸ್ಟರ್ ಮೆನ್:** ಸೋಲ್ವಿನ್ ಥಾಮಸ್ (13:47 ನಿ.), ವೀರ ಮಣಿಕಂಠ (15:25 ನಿ.), ಎಲ್.ಮಂಜುನಾಥ್ (16:52 ನಿ.). **ಗ್ರ್ಯಾಂಡ್ ಮಾಸ್ಟರ್ ಮಹಿಳೆಯರು:** ವೀಣಾ ದೀಪಕ್ (23:47 ನಿಮಿಷ), ಕವಿತಾ ರಾವ್ (25:54 ನಿಮಿಷ), ಧನಲಕ್ಷ್ಮಿ (36:51 ನಿಮಿಷ). **ಗ್ರ್ಯಾಂಡ್ ಮಾಸ್ಟರ್ ಮೆನ್:** ಜೈಮನ್ (21:00 ನಿಮಿಷ), ಲಿಕ್ಮಾರಾಮ್ (21:27 ನಿಮಿಷ), ನಾಗೇಂದ್ರ ರಾವ್ (21:47 ನಿಮಿಷ). **12 ವರ್ಷದೊಳಗಿನ ಬಾಲಕರು:** ನಂದನ್ ದಾಸ್ (19:37 ನಿ), ಎನ್.ಸಿದ್ದಾರ್ಥ್ (20:41 ನಿ), ಸಮೃದ್ಧ್ (21:20 ನಿ) **ಹವ್ಯಾಸಿ ಪುರುಷರು:** ನವೀನ್ ಸೋಲಂಕಿ (14:41 ನಿ), ಶರಂಗ್ (14:52 ನಿ), ಕಿರಣ್ ಕೃಷ್ಣ (15:12 ನಿಮಿಷ).

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಸೋಮವಾರ 3 ಜೂನ್ 2024

ಮಳೆ ಆರ್ಭಟ: ಮೈಸೂರು ಬೆಂಗಳೂರು ಹೆದ್ದಾರಿ ಜಲಾವೃತ

8 ಕಿಮೀ ನಷ್ಟು ವಾಹನಗಳ ಜಾಮ್



ರಾಮನಗರ,ಜೂ.2– ಭಾನುವಾರ ಸಂಜೆ ಸುರಿದ ಮಳೆಯಿಂದಾಗಿ ಬೆಂಗಳೂರು–ಮೈಸೂರು ಹೆದ್ದಾರಿಯ ರಸ್ತೆಯಲ್ಲಿ ನೀರು ನುಗ್ಗಿದ ಪರಿಣಾಮ ಹೆದ್ದಾರಿಯಲ್ಲಿ ಸುಮಾರು 8 ಕಿಮೀ ನಷ್ಟು ದೂರು ವಾಹನಗಳು ಸಾಲುಗಟ್ಟಿ ನಿಂತಿತ್ತು.

ತಾಲೂಕಿನ ಸಂಗಬಸವನದೊಡ್ಡಿ ಗೇಟ್ ಸಮೀಪ ಸರ್ವೀಸ್ ರಸ್ತೆಯಲ್ಲಿ, ಅಂಡರ್ ಪಾಸ್ ಬಳಿ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಪ್ರಯಾಣಿಕರು ಪರದಾಡುವಂತಾಯಿತು. ಭಾನುವಾರ ಸಂಜೆ 6 ಗಂಟೆಯ ಆಸುಪಾಸಿನಲ್ಲಿ ಮಳೆ ಆರಂಭವಾಗಿ ಸತತವಾಗಿ ಸುರಿದ ಪರಿಣಾಮ ಹಳ್ಳ ಕೊಳ್ಳದ ನೀರು ಹರಿದು ಹೋಗಲು ಜಾಗವಿಲ್ಲದೆ ಸರ್ವೀಸ್ ರಸ್ತೆಗೆ ನುಗ್ಗಿದ ಪರಿಣಾಮ ರಸ್ತೆಯಲ್ಲಿ ನದಿಯಂತೆ ನೀರು ಹರಿಯಲಾರಂಭಿಸಿತು.

ಸಂಗಬಸವನದೊಡ್ಡಿ ಅಂಡರ್‌ಪಾಸ್ ಬಳಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿದ ಪರಿಣಾಮ ಕಾರೊಂದು ನೀರಿನಲ್ಲಿ ತೇಲಾಡುತ್ತಿದ್ದ ದೃಶ್ಯ ಕಂಡು ಬಂತು. ಆದರೆ, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಸರ್ವೀಸ್ ರಸ್ತೆಯಲ್ಲಿ ಮಾತ್ರವಲ್ಲದೆ ಎಕ್ಸ್‌ಪ್ರೆಸ್ ವೇಗೆ ಸಹ ಸಂಗಬಸವನದೊಡ್ಡಿಯಿಂದ ಬಿಡದಿಯವರೆಗೆ ಅಲ್ಲಲ್ಲಿ ರಸ್ತೆಗೆ ನೀರು ನುಗ್ಗಿ ಪ್ರಯಾಣಿಕರು ಪರದಾಡುವಂತಾಯಿತು. ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಕಾರಣ ವಾಹನಗಳು ಮಂದಗತಿಯಲ್ಲಿ ಸಾಗಿದವು. ಅಪಾಯದಲ್ಲಿ ಸಿಲುಕಿದವರಿಗೆ ಸಹಾಯ ಮಾಡುವ ಸಲುವಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಧಾವಿಸಿದರು.

ಇದೇ ಮೊದಲಲ್ಲ: ಈ ಹಿಂದೆ ಮಳೆಯಿಂದಾಗಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಾಕಷ್ಟು ಅನಾಹುತ ಸಂಭವಿಸಿದೆ. ಮಳೆಗಾಲದಲ್ಲಿ ಹೆದ್ದಾರಿಯಲ್ಲಿ ನೀರು ಹರಿಯುವುದು ಸಾಮಾನ್ಯವಾಗಿ ಬಿಟ್ಟಿದೆ. ಹಾಗಾಗಿ ಇಂತಹ ಘಟನೆಗೆ ಕಡಿವಾಣ ಹಾಕುವಂತೆ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದ್ದರು ಯಾವುದೇ ಪ್ರಯೋಜನವಾಗಿಲ್ಲ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಕ್ಷೇತ್ರದ ಅಭಿವೃದ್ಧಿ ಕೆಲಸಗಳತ್ತ ಗಮನಹರಿಸಲು ಕಾಂಗ್ರೆಸ್ ಶಾಸಕರಿಗೆ ಸಿಎಂ ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ಜೂ.2– ಜುಲೈ ಮೊದಲ ವಾರದಲ್ಲಿ ರಾಜ್ಯ ವಿಧಾನಮಂಡಲ ಅಧಿವೇಶನ ನಡೆಸಲು ಸಿಎಂ ಸಿದ್ದರಾಮಯ್ಯ ಅವರು ಬಯಸಿದ್ದು, ಚುನಾವಣಾ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಚುರುಕುಗೊಳಿಸುವತ್ತ ಗಮನಹರಿಸುವಂತೆ ಪಕ್ಷದ ಶಾಸಕರಿಗೆ ಸೂಚಿಸಿದ್ದಾರೆ.

ವಿಧಾನಸಭೆಯಿಂದ ಮೇಲ್ಮನೆಯ 11 ಸ್ಥಾನಗಳಿಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಭಾನುವಾರ ರಾತ್ರಿ ನಗರದ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಎಂ, ಸಾರ್ವತ್ರಿಕ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಆಡಳಿತ ಯಂತ್ರ ಪೂರ್ಣ ಪ್ರಮಾಣದಲ್ಲಿ ಚುರುಕಾಗಲಿದೆ. ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ವೇಗ ಸಿಗಲಿದೆ. ನಿಮ್ಮ ನಿರೀಕ್ಷೆ, ಬೇಡಿಕೆಗಳಿಗೆ ಸ್ಪಂದಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಮತದಾನೋತ್ತರ ಸಮೀಕ್ಷೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಬಹುತೇಕ ಎಕ್ಸಿಟ್ ಪೋಲ್‌ಗಳಲ್ಲಿ ನಾವು ಎರಡಂಕಿ ದಾಟುವುದಿಲ್ಲಎಂದು ತೋರಿಸಲಾಗಿದೆ. ಆದರೆ, ವಾಸ್ತವ ನನಗೆ ಗೊತ್ತಿದೆ. ಪಕ್ಷದ ವತಿಯಿಂದ ನಡೆಸಿರುವ ಸರ್ವೆ ಹಾಗೂ ಗುಪ್ತದಳದ ವರದಿ ಪ್ರಕಾರ ಪಕ್ಷಕ್ಕೆ ರಾಜ್ಯದಲ್ಲಿ ಕನಿಷ್ಠ 12 ಸೀಟುಗಳಿಂದ 18 ಸೀಟುಗಳವರೆಗೆ ಸಿಗಬಹುದು. ಮಾಧ್ಯಮ ಸಮೀಕ್ಷೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ ಎಂದು ಸಿಎಂ ಶಾಸಕರಿಗೆ ಸಲಹೆ ನೀಡಿದ್ದಾರೆ.

ಶಾಸಕಾಂಗ ಪಕ್ಷದ ಅಧ್ಯಕ್ಷರಾದ ಸಿಎಂ ಹಾಗೂ ಡಿಸಿಎಂ ಮಾತುಗಳಿಗೆ ಸಭೆ ಸೀಮಿತವಾಯಿತು. ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಯಾವುದೇ ವಿಚಾರಗಳಿದ್ದರೂ ಚರ್ಚೆ ಮಾಡೋಣ. ಜುಲೈ ಮೊದಲ ವಾರದಲ್ಲಿ ಅಧಿವೇಶನ ಕರೆಯುತ್ತಿದ್ದು, ಅದಕ್ಕೆ ಮುನ್ನ ಮತ್ತೊಮ್ಮೆ ಸಭೆ ನಡೆಸಲಾಗುವುದು ಎಂದು ಸಿಎಂ ಹೇಳಿದ್ದಾರೆ. ಬೇರೆ ಕಾರ್ಯಸೂಚಿಯೇ ಇಲ್ಲದ ಈ ಸಭೆಯನ್ನು ಕೇವಲ 10 ನಿಮಿಷಗಳಲ್ಲೇ ಮುಗಿಸಲಾಯಿತು.

ಮೇಲ್ಮನೆ ಚುನಾವಣೆಗೆ ಪಕ್ಷದ 7 ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಲಿದ್ದು, ಬೆಳಗ್ಗೆ ವಿಧಾನಸೌಧದ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಎಲ್ಲ ಶಾಸಕರು ಹಾಜರಿದ್ದು, ತಲಾ ಅಭ್ಯರ್ಥಿಗೆ 10 ಮಂದಿ ಸೂಚಕರಾಗಿ ಸಹಿ ಮಾಡಬೇಕು. ಬಹುತೇಕ ಅವಿರೋಧ ಆಯ್ಕೆ ನಡೆಯುವ ಸಾಧ್ಯತೆ ಇದ್ದು, ಒಂದು ವೇಳೆ ಪ್ರತಿಪಕ್ಷಗಳು ಹೆಚ್ಚುವರಿ ಅಭ್ಯರ್ಥಿ ಹಾಕಿದರೆ ಮಾತ್ರ ಎಚ್ಚರ ವಹಿಸಬೇಕು ಎಂದು ಸಭೆಯಲ್ಲಿ ಸೂಚಿಸಲಾಯಿತು.

ಜೂ.5, ಅರ್ಕಧಾಮದಲ್ಲಿ ಗಿಡ ನೆಡುವ ಕಾರ್ಯಕ್ರಮ

ಮೈಸೂರು,ಜೂ.2(ಪಿಎಂ)– ಅರ್ಕ ಫೌಂಡೇಶನ್ ಇಂಡಿಯಾ ವತಿಯಿಂದ ಜೂ.5ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ವನಮಹೋತ್ಸವ' ಶೀರ್ಷಿಕೆಯಡಿ 'ಗಿಡ ನೆಡುವ ಕಾರ್ಯಕ್ರಮ' ಹಮ್ಮಿಕೊಳ್ಳಲಾಗಿದೆ.

ಬೋಗಾದಿ ಗದ್ದಿಗೆ ಮುಖ್ಯರಸ್ತೆಯ ಕಣಿಯನಹುಂಡಿ ಗೇಟ್–ಮಾದಳ್ಳಿ ಸಮೀಪದಲ್ಲಿರುವ ಅರ್ಕಧಾಮ ಆವರಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ಚಾಲನೆ ಪಡೆಯಲಿದೆ. ಬಳಿಕ ಸುತ್ತಮುತ್ತ ಪ್ರದೇಶದಲ್ಲಿ ಗಿಡ ನೆಡಲಾಗುವುದು. ದೊಡ್ಡ ಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಮೈಸೂರು ಅರಣ್ಯ ತಳಿಶಾಸ್ತ್ರವಲಯದ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ ಅರ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರಾಗಿ ಅಂಜಲಿದೇವಿ ನೇಮಕ



ಕರ್ನಾಟಕ ರಾಜ್ಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡಿರುವ ಅಂಜಲಿದೇವಿ ಅವರಿಗೆ ಪ್ರಭಾರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಜಿ.ಎಸ್.ಸಂಗ್ರೇಶಿ ಅಧಿಕಾರ ಹಸ್ತಾಂತರ ಮಾಡಿದರು. ಈ ಹುದ್ದೆ ಅಲಂಕರಿಸಿದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಅಂಜಲಿದೇವಿ ಭಾಜನರಾಗಿದ್ದಾರೆ.

ಸಂಗಪ್ಪ ಶಿಲಾನಾಥಪ್ಪ ಆಲೂರ ನಿಧನ



ಮೈಸೂರು, ಜೂ.2– ಕೊಡಗು ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ್ ಆಲೂರ ಅವರ ತಂದೆ ಸಂಗಪ್ಪ ಶಿಲಾನಾಥಪ್ಪ ಆಲೂರ(88) ಅವರು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಇವರು ಪುತ್ರರಾದ ಡಾ.ಅಶೋಕ ಆಲೂರ, ಅನ್ನದಾನಿ ಆಲೂರ, ಡಾ.ಶಿವಾನಂದ್ ಆಲೂರ, ಬಸವರಾಜ ಆಲೂರ, ಪುತ್ರಿ ಡಾ.ಪಾರ್ವತಿ ಆಲೂರ ಸೇರಿದಂತೆ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಬಾಗಲಕೋಟೆ ನಗರದ ಬಳೂಲ ಮಠ ರುದ್ರಭೂಮಿಯಲ್ಲಿ ಸೋಮವಾರ ಬೆಳಿಗ್ಗೆ 11ಕ್ಕೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಹೊನ್ನಪ್ಪ ನಿಷ್ಠಾವಂತ, ಆದರ್ಶ ರಾಜಕಾರಣಿ

ಮಾಜಿ ಸಿಎಂ ಸದಾನಂದಗೌಡ ಬಣ್ಣನೆ


ಮಂಡ್ಯ, ಜೂ.2– ರಾಜಕೀಯ, ಕ್ರೀಡೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಮಾಡಿ, ಮಂಡ್ಯ ಜಿಲ್ಲೆಯ ಮನೆ ಮಾತಾದ ಹಿರಿಯ ರಾಜಕೀಯ ಧುರೀಣ ಹೆಚ್.ಹೊನ್ನಪ್ಪ ನಿಷ್ಠಾವಂತ ವ್ಯಕ್ತಿತ್ವದ ಆದರ್ಶ ರಾಜಕಾರಣಿ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಬಣ್ಣಿಸಿದರು.

ಭಾನುವಾರ ನಗರದ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ಕರ್ನಾಟಕ ಸಂಘದ ವತಿಯಿಂದ ನಡೆದ ಇಂಡುವಾಳು ಹೆಚ್.ಹೊನ್ನಪ್ಪ ಕುರಿತ ನೆಲದ ಕಣ್ಣು ಕೃತಿ ಬಿಡುಗಡೆ, ಹೆಚ್.ಹೊನ್ನಪ್ಪ ಕ್ರೀಡಾ ಪ್ರಶಸ್ತಿ ಪ್ರದಾನ ಹಾಗೂ ಇಂಡುವಾಳು ಹೆಚ್.ಹೊನ್ನಪ್ಪ ಸೇವಾ ಟ್ರಸ್ಟ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ತಳಮಟ್ಟದಿಂದ ಬಿಜೆಪಿಯನ್ನು ಬಲಿಷ್ಠಗೊಳಿಸಿದವರಲ್ಲಿ ಹೊನ್ನಪ್ಪ ಅಗ್ರಗಣ್ಯರು. ನಾನು ಬಿಜೆಪಿಯ ರಾಜ್ಯಾಧ್ಯಕ್ಷನಾಗಿದ್ದ ಅವಧಿಯಲ್ಲಿ ಹೊನ್ನಪ್ಪರನ್ನು ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದೆ. ಅವರೆಂತ ಕಠೋರವಾದಿ ಹಾಗೂ ಆದರ್ಶ ವ್ಯಕ್ತಿ ಎಂಬುದು ಅವರು ನನ್ನ ಒಡನಾಟಕ್ಕೆ ಬಂದ ಮೇಲೆ ತಿಳಿಯಿತು ಎಂದು ಶ್ಲಾಘಿಸಿದರು.

ಮಂಡ್ಯದಲ್ಲಿ ಬಿಜೆಪಿ ಕಟ್ಟಲು ನಿಷ್ಠಾವಂತ, ಆದರ್ಶ, ಕಮಿಟೆಡ್ ರಾಜಕಾರಣಿಯ ಅವಶ್ಯಕತೆ ಇತ್ತು. ಎಲ್ಲರನ್ನು ಹುಡುಕಿದಾಗ ನಮಗೆ ಸಿಕ್ಕವರು ಹೊನ್ನಪ್ಪ. ಅವರನ್ನು ಕೇಳಿದಾಗ ರಾಜಕಾರಣವೇ ಬೇಡ ಎನ್ನುತ್ತಿದ್ದರು. ಆದರೆ ನಾನು ಅವರನ್ನು ಒತ್ತಾಯ ಮಾಡಿ, ಅಧ್ಯಕ್ಷರನ್ನಾಗಿ ಮಾಡಿದೆ. ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಮಂಡ್ಯದಲ್ಲಿ ಬಿಜೆಪಿ ಇಂದು ಕ್ರಮೇಣ ಗಟ್ಟಿಗೊಳ್ಳುತ್ತಿದೆ ಎಂದರೆ ಅದಕ್ಕೆ ಅಡಿಪಾಯ ಹಾಕಿದ ಹೊನ್ನಪ್ಪ ಕಾರಣ ಎಂದು ಹೇಳಿದರು.

ಅವರು ಜಿಲ್ಲಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಅವರಿಗೆ ನಾನು ಪರಿಷತ್ ಸದಸ್ಯತ್ವ ಸ್ಥಾನದ ಆಫರ್ ಕೊಟ್ಟೆ, ಆದರೆ ಅವರು ಅದನ್ನು ತಿರಸ್ಕರಿಸಿ, ಪಕ್ಷ ಕಟ್ಟಲು ನನಗೆ ಅವಕಾಶ ಕೊಡಿ ಎಂದಿದ್ದರು. ಮಂಡ್ಯದಲ್ಲಿ ಬಿಜೆಪಿ ಬೆಳೆಸಬೇಕೆಂದು ಪ್ರಯತ್ನಪಟ್ಟು ಹಲವರಿಗೆ ಅವಕಾಶ ಮಾಡಿಕೊಟ್ಟೆವು. ನಿಗಮ ಮಂಡಳಿ, ಎಂಎಲ್‌ಸಿ ಹಲವನ್ನು ಕೊಟ್ಟೆವು. ಅವಕಾಶವಾದಿ ರಾಜಕಾರಣಿಗಳು ಅಧಿಕಾರ ಅನುಭವಿಸಿ, ಪುಷ್ಪಕ ವಿಮಾನದ ರೀತಿ ಓಡಿ ಹೋದರು. ಆದರೆ ಹೊನ್ನಪ್ಪರವರು ಮಾತ್ರ ಮಂಡ್ಯದಲ್ಲಿ ಬಿಜೆಪಿ ಕಟ್ಟಲು ತಮ್ಮನ್ನೇ ತಾವು ಮುಡಿಪಾಗಿಟ್ಟಿದ್ದರು ಎಂದು ತಿಳಿಸಿದರು.

ಹೊನ್ನಪ್ಪ ಅವರಿಗೆ ಪಕ್ಷ ಕಟ್ಟಲು ನಾವು ಎಲ್ಲಾ ರೀತಿಯ ಸಹಕಾರ ಕೊಟ್ಟಿದ್ದೆವು. ಆದರೆ ಅವರು ಎಂದು ಸಹ ಸ್ವಾರ್ಥಕ್ಕಾಗಿ ಅಧಿಕಾರ ಬಳಸಿದವರಲ್ಲ. ಮೈಷುಗರ್ ಅಧ್ಯಕ್ಷ ಸ್ಥಾನ ಅಲಂಕರಿಸಲು ಬೇಡಿಕೆ ಇಟ್ಟಾಗ ಬೇಡ ಎಂದ ಪ್ರಾಮಾಣಿಕ ವ್ಯಕ್ತಿ ಅವರು. ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್ ಆಗಿರುವ ಪ್ರಸ್ತುತ ರಾಜಕಾರಣದಲ್ಲಿ ಹೊನ್ನಪ್ಪರಂತಹ ರಾಜಕಾರಣಿಗಳು ವಿರಳ. ಪ್ರಶಂಸೆ ಹಾಗೂ ಟೀಕೆ ಎಲ್ಲವನ್ನು ಒಟ್ಟಿಗೆ ಜೀರ್ಣಿಸಿಕೊಂಡು ಸಮರ್ಥವಾಗಿ ರಾಜಕೀಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆದು ಆದರ್ಶ ವ್ಯಕ್ತಿಯಾದ ಹೊನ್ನಪ್ಪ ಪ್ರತಿಯೊಬ್ಬರಿಗೂ ಮಾದರಿ ಎಂದು ನುಡಿದರು.


ಮಂಡ್ಯದಲ್ಲಿ ಇಂಡುವಾಳು ಹೆಚ್.ಹೊನ್ನಪ್ಪ ಕುರಿತ 'ನೆಲದ ಕಣ್ಣು' ಕೃತಿಯನ್ನು ಬಿಡುಗಡೆ ಮಾಡುತ್ತಿರುವ ಗಣ್ಯರು

ಹೊನ್ನಪ್ಪರ ಸಾಧನೆಗೆ ಗೌರವ ಕೊಡಬೇಕು

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಮಾತನಾಡಿ, ಸಮಾಜದಲ್ಲಿ ಮತ್ತೊಬ್ಬರಿಗೆ ಕಿರುಕುಳ ನೀಡಿ, ಅವರ ರಕ್ತವನ್ನು ಹೀರಿ ಜೀವನ ನಡೆಸುವ ವ್ಯಕ್ತಿಗಳು ಹೆಚ್ಚಾಗಿದ್ದಾರೆ. ಇದರ ನಡುವೆ ಮತ್ತೊಂದು ವರ್ಗ ಸಮಾಜಕ್ಕೆ ಭಾರವಾಗದೇ ತಮ್ಮ ಬದುಕನ್ನೇ ಸಮಾಜಕ್ಕೆ ಮುಡಿಪಾಗಿಟ್ಟಿದ್ದಾರೆ ಅಂತಹ ವ್ಯಕ್ತಿಗಳ ಪೈಕಿ ಹೆಚ್.ಹೊನ್ನಪ್ಪ ಅವರು ಅಗ್ರಗಣ್ಯರು ಎಂದು ಬಣ್ಣಿಸಿದರು.

ಹೊನ್ನಪ್ಪ ಅವರ ಸಾಧನೆಗೆ ನಾವು ಗೌರವ ಕೊಡಬೇಕಾಗಿದ್ದು ನಮ್ಮ ಕರ್ತವ್ಯ. ಕ್ರೀಡೆ, ಶಿಕ್ಷಣ, ರಾಜಕೀಯ, ಸಾಮಾಜಿಕ ಜೀವನ ಹೀಗೆ ಹಲವು ಕ್ಷೇತ್ರದಲ್ಲಿ ಹೊನ್ನಪ್ಪ ಅವರು ಸಾಧನೆಗೈದಿದ್ದಾರೆ. ಕ್ರೀಡೆಗೆ ಹೆಚ್ಚಿನ ಒತ್ತು ಕೊಟ್ಟಾಗ ಆರೋಗ್ಯ ವೃದ್ಧಿಯಾಗಿ, ದುರಭ್ಯಾಸ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬರು ಕ್ರೀಡೆಗೆ ಹೆಚ್ಚಿನ ಒತ್ತು ಕೊಡಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಹೆಚ್.ಹೊನ್ನಪ್ಪ ಕುರಿತ ನೆಲದ ಕಣ್ಣು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಹೆಚ್.ಹೊನ್ನಪ್ಪ ಹೆಸರಿನ ಕ್ರೀಡಾ ಪ್ರಶಸ್ತಿಯನ್ನು ಜಿಲ್ಲೆಯ ಹಿರಿಯ ಫುಟ್‌ಬಾಲ್ ಆಟಗಾರ ವೆಂಕಟ್‌ಗೆ ನೀಡಿ ಗೌರವಿಸಲಾಯಿತು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮಾನಂದಶ್ರೀ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ, ವಿಶ್ರಾಂತ ಪ್ರಾಧ್ಯಾಪಕ ಡಾ.ಶಂಕರೇಗೌಡ, ಕೃತಿಯ ಕರ್ತೃ ಡಾ.ಅನಿತಾ, ಹೊನ್ನಪ್ಪ ಪುತ್ರ ಡಾ.ಆದರ್ಶ ಹೊನ್ನಪ್ಪ ಸೇರಿದಂತೆ ಇಡೀ ಕುಟುಂಬ ವರ್ಗ ಹಾಗೂ ಕರ್ನಾಟಕ ಸಂಘದ ಲೋಕೇಶ್ ಚಂದಗಾಲು, ಹನಕೆರೆ ನಾಗಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೃದಯ ಗೆಲ್ಲಿ, ಅಸೂಯೆ, ಮತ್ಸರ ಬಿಡಿ, ಪ್ರೀತಿ, ಪ್ರತಿಭೆ ಹಂಚಿ

ಖ್ಯಾತ ವೈದ್ಯ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಹೆಚ್.ಹೊನ್ನಪ್ಪ ಅನೇಕ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿಯಾಗಿದ್ದಾರೆ. ಜೀವನದಲ್ಲಿ ಒಂದನ್ನು ಗೆಲ್ಲಬೇಕು. ಒಂದನ್ನು ಬಿಡಬೇಕು. ಮತ್ತೊಂದನ್ನು ಹಂಚಬೇಕು. ಜನರ ಹೃದಯ ಗೆಲ್ಲುವ ಕೆಲಸ ಮಾಡಿ, ದ್ವೇಷ, ಮತ್ಸರ, ಅಸೂಯೆಯನ್ನು ಬಿಡಬೇಕು, ಪ್ರೀತಿ, ಪ್ರತಿಭೆ ಹಂಚಬೇಕು. ಈ ಎಲ್ಲವು ಹೊನ್ನಪ್ಪ ಅವರಿಗೆ ಅನ್ವಯವಾಗುತ್ತದೆ ಎಂದರು. ಪ್ರಸ್ತುತ ಸತ್ಯಕ್ಕೆ ಸಾಕ್ಷಿ ಕೇಳುವ ಕಾಲದಲ್ಲಿ ಹೊನ್ನಪ್ಪ ಆದರ್ಶ ವ್ಯಕ್ತಿಯಾಗಿ ಕಾಣುತ್ತಾರೆ. ಸ್ವಾಭಿಮಾನ ಹಲವು ಸಂದರ್ಭದಲ್ಲಿ ಅವರನ್ನು ಕಟ್ಟಿ ಹಾಕಿದೆ. ಸ್ವಾಭಿಮಾನ ಹಲವು ಸಂದರ್ಭದಲ್ಲಿ ಮನುಷ್ಯನನ್ನು ಕಟ್ಟಿ ಹಾಕುತ್ತದೆ. ಅದಕ್ಕೆ ಹೊನ್ನಪ್ಪ ಸಹ ಹೊರತಾಗಿರಲಿಲ್ಲ. ಸದಾನಂದಗೌಡರು ಸಿಎಂ ಆಗಿದ್ದ ಅವಧಿಯಲ್ಲಿ ಮೈಷುಗರ್ ಅಧ್ಯಕ್ಷ ಸ್ಥಾನವನ್ನು ಹೊನ್ನಪ್ಪ ಅವರಿಗೆ ಆಫರ್ ಕೊಟ್ಟಾಗ ಹೊನ್ನಪ್ಪನವರು ಈಗಾಗಲೇ ನಾನು ಆ ಹುದ್ದೆ ಅನುಭವಿಸಿದ್ದೇನೆ. ಬೇಡ ಬೇರೆ ವ್ಯಕ್ತಿಗೆ ಈ ಹುದ್ದೆ ಕೊಡಿ ಎಂದು ಹೇಳಿದ ಅಧಿಕಾರ ತ್ಯಾಗಿ ಹೊನ್ನಪ್ಪ ಎಂದು ಬಣ್ಣಿಸಿದರು.

ಕೆ.ಆರ್.ಪೇಟೆಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ

ದಿನಸಿ ಪದಾರ್ಥಗಳು, ಬಟ್ಟೆ, ಟಿವಿ, ಗೃಹೋಪಯೋಗಿ ಸಾಮಗ್ರಿಗಳು ಭಸ್ಮ



ಕೆಆರ್.ಪೇಟೆ, ಜೂ. 2– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ ಬಿದ್ದು ದಿನಸಿ ಪದಾರ್ಥಗಳು, ಬಟ್ಟೆ–ಬರೆ, ಟೀವಿ, ಮೊಬೈಲ್ ಸೇರಿದಂತೆ ಗೃಹೋಪಯೋಗಿ ವಸ್ತುಗಳು ಸುಟ್ಟು ನಾಶವಾಗಿರುವ ಘಟನೆ ಪಟ್ಟಣದ ಅಗ್ರಹಾರ ಬಡಾವಣೆಯಲ್ಲಿ ನಡೆದಿದೆ.

ಅಗ್ರಹಾರ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಸೋಮಶೇಖರ್ ಮತ್ತು ಗಾಯಿತ್ರಿ ದಂಪತಿ ಮನೆಯಲ್ಲಿ ವಿದ್ಯುತ್ ಅವಘಡ ಸಂಭವಿಸಿದ್ದು ಕೂಲಿ ಮಾಡಿ ಜೀವನ ಸಾಗಿಸುವ ಈ ಕುಟುಂಬಕ್ಕೆ ಅಪಾರ ನಷ್ಟ ಉಂಟಾಗಿದೆ. ಇದರಿಂದಾಗಿ ಕುಟುಂಬವು ಬೀದಿಗೆ ಬಿದ್ದಿದೆ.

ಶನಿವಾರ ಬೆಳಿಗ್ಗೆ ಸೋಮಶೇಖರ್ ಮತ್ತು ಗಾಯಿತ್ರಿ ಇಬ್ಬರೂ ಸಹ ಎಂದಿನಂತೆ ಮನೆಗೆ ಬೀಗ ಹಾಕಿ ಕೂಲಿ ಕೆಲಸಕ್ಕೆಂದು ಹೊರ ಹೋಗಿದ್ದರು. ಈ ಸಮಯದಲ್ಲಿ ಮನೆಯೊಳಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಹೊತ್ತಿಕೊಂಡು ಮನೆಯೊಳಗಿದ್ದ ಅಕ್ಕಿ, ರಾಗಿ, ಬಟ್ಟೆಗಳು, ಟೀವಿ, ಹಾಸಿಗೆ, ಸೇರಿದಂತೆ ವಿವಿಧ ಬಗೆಯ ದಿನಬಳಕೆಯ ವಸ್ತುಗಳು ಹಾಗೂ ಗೃಹೋಪಯೋಗಿ ವಸ್ತುಗಳು ಸಂಪೂರ್ಣ ಸುಟ್ಟು ಕರಕಲಾಗಿವೆ.

ಮನೆಯಲ್ಲಿ ಬೆಂಕಿ ಹೊಗೆಯಾಡುತ್ತಿರುವುದನ್ನು ಕಂಡು ಅಕ್ಕಪಕ್ಕದ ಮನೆಯವರು ನೀರು ಹಾಕಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದ್ದಾರೆ. ಅಷ್ಟಾಗ್ಯೂ ಕಡಿಮೆಯಾಗದೇ ಇರುವುದನ್ನು ಕಂಡು ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದಾರೆ. ವಿಷಯ ತಿಳಿದ ತಕ್ಷಣ ಆಗಮಿಸಿದ ಅಗ್ನಿ ಶಾಮಕ ದಳದ ಅಧಿಕಾರಿಗಳು ಬೆಂಕಿಯನ್ನು ನಂದಿಸಿ ಅಕ್ಕಪಕ್ಕದ ಮನೆಗೆ ಬೆಂಕಿ ಹೊತ್ತಿಕೊಳ್ಳದಂತೆ ತಡೆದು ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಘಟನಾ ಸ್ಥಳಕ್ಕೆ ಟೌನ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನವೀನ್‌ಕುಮಾರ್, ಗ್ರಾಮ ಲೆಕ್ಕಾಧಿಕಾರಿ ಜಗದೀಶ್ ಇತರರು ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ವ್ಯಸನಮುಕ್ತ ಬದುಕಿನಿಂದ ನೆಮ್ಮದಿಯ ಜೀವನ


ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ನಡೆದ 'ವಿಶ್ವತಂಬಾಕು ವಿರೋಧಿ ದಿನಾಚರಣೆ' ಕಾರ್ಯಕ್ರಮವನ್ನು ನಿರ್ದೇಶಕ ಎಚ್.ಎಲ್. ಮುರುಳೀಧರ್ ಉದ್ಘಾಟಿಸಿದರು.

ಚಿನಕುರಳಿ, ಜೂ.2– ಮದ್ಯಪಾನ, ಡ್ರಗ್ಸ್, ಧೂಮಪಾನ, ಗುಟ್ಕಾ ಸೇವನೆ ಹಾಗೂ ಮೊಬೈಲ್ ಗೀಳುಗಳಿಂದಾಗಿ ಯುವ ಜನತೆ ದಾರಿ ತಪ್ಪುತ್ತಿದ್ದಾರೆ ಎಂದು ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಎಚ್.ಎಲ್. ಮುರುಳೀಧರ್ ವಿಷಾದ ವ್ಯಕ್ತಪಡಿಸಿದರು.

ಚಿನಕುರಳಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ನಡೆದ 'ವಿಶ್ವತಂಬಾಕು ವಿರೋಧಿ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವ್ಯಸನಮುಕ್ತ ಬದುಕಿನಿಂದ ನೆಮ್ಮದಿ ಜೀವನ ನಡೆಸಬಹುದು. ತಂಬಾಕು ಇನ್ನಿತರ ಮಾದಕ ವಸ್ತುಗಳಿಂದ ಆಗುತ್ತಿರುವ ದುಷ್ಪರಿಣಾಮಗಳು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿದೆ. ಈ ಬಗ್ಗೆ ಯುವ ಸಮುದಾಯಕ್ಕೆ ಜಾಗೃತಿ ಮೂಡಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳು ಮಾರುಕಟ್ಟೆಯಲ್ಲಿ ಮುಕ್ತವಾಗಿ ಸಿಗುತ್ತಿದೆ. ಜತೆಗೆ ಜಾಹೀರಾತಿನ ವೋಹಕ್ಕೆ ಬಲಿಬಿದ್ದು ಮಕ್ಕಳು ತಂಪು ಪಾನೀಯಕ್ಕೆ ಮಾರು ಹೋಗುತ್ತಿದ್ದಾರೆ ಎಂದು ತಿಳಿಸಿದರು.

ವ್ಯಸನಗಳಿಂದ ಹೊರಬರಬೇಕಾದರೆ ನಮ್ಮ ದೈನಂದಿನ ದಿನಚರಿ, ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಯೋಗ, ಧ್ಯಾನ ಇತ್ಯಾದಿ ಮನಸ್ಸು ಮತ್ತು ದೇಹಕ್ಕೆ ಹಿತವಾದ ಕಾರ್ಯವೈಖರಿ ಮೈಗೂಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿಗಳಾದ ಎಸ್.ಯಶವಂತ್, ಮೇಲುಕೋಟೆ ಯೋಜನಾಧಿಕಾರಿ ಸರೋಜ, ಮೇಲ್ವಿಚಾರಕಿ ಸುಷ್ಮ, ಕಸಾಪ ಮಾಜಿ ಅಧ್ಯಕ್ಷ ಎಚ್.ಆರ್.ಧನ್ಯಕುಮಾರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ತೇಜಸ್ವಿ ಸೇರಿದಂತೆ ಹಲವರು ಹಾಜರಿದ್ದರು.

ವಿಶ್ವ ತಂಬಾಕು ದಿನಾಚರಣೆ: ಜಾಗೃತಿ ಜಾಥಾ


ಪಾಂಡವಪುರ ಪಟ್ಟಣದ ಕೋರ್ಟ್ ಆವರಣದಿಂದ ಹೊರಟ 'ವಿಶ್ವ ತಂಬಾಕು ನಿಷೇಧ ದಿನಾಚರಣೆ' ಜಾಗೃತಿ ಜಾಥಾಕ್ಕೆ ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶೆ ಬಿ.ಪಾರ್ವತಮ್ಮ ಅವರು ಚಾಲನೆ ನೀಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ


ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವುದು.

ಶ್ರೀರಂಗಪಟ್ಟಣ: ತಾಲೂಕಿನ ಕಿರಂಗೂರು ಗ್ರಾಮದ ಬಳಿಯ ಗಣಪತಿ ದೇವಸ್ಥಾನದ ಆವರಣದಲ್ಲಿ ಉದ್ಯೋಗದಾತ ಫೌಂಡೇಶನ್ ಸಂಸ್ಥೆ ಅಧ್ಯಕ್ಷ ಡಿ.ಬಿ ರುಕ್ಮಾಂಗದ ಅವರ ಸ್ನೇಹ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಂತರ ಸಂಸ್ಥೆ ಅಧ್ಯಕ್ಷ ಡಿ.ಬಿ.ರುಕ್ಮಾಂಗದ ಮಾತನಾಡಿ, ಜಗತ್ತಿನಲ್ಲಿ ವಿದ್ಯೆಯಿಂದ ಮಾತ್ರ ಎಲ್ಲವನ್ನೂ ಪಡೆಯಲು ಸಾಧ್ಯ. ಇಂದು ನಿಮ್ಮನ್ನ ಚಿಕ್ಕದಾಗಿ ಸನ್ಮಾನಿಸಲಾಗುತ್ತಿದೆ, ಆದರೆ ಮುಂದಿನ ದಿನಗಳಲ್ಲಿ ನಿಮಗೆ ಹೆಚ್ಚಿನ ಗೌರವ, ಒಳ್ಳೆ ಸ್ಥಾನಮಾನ ಲಭಿಸಲಿ. ಜೊತೆಗೆ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗೌರವಿಸುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ 6 ವಿದ್ಯಾರ್ಥಿಗಳು ಮತ್ತು ಪಿಯುಸಿ ವಿಭಾಗದಲ್ಲಿ 2 ವಿದ್ಯಾರ್ಥಿಗಳು ಸೇರಿ ಒಟ್ಟು 8 ಮಂದಿ ವಿದ್ಯಾರ್ಥಿಗಳಿಗೆ ಅಭಿನಂದಿಸಿ, ಸನ್ಮಾನಿಸಲಾಯಿತು. ಈ ವೇಳೆ ಪುರಸಭಾ ಸದಸ್ಯ ಎಂ.ನಂದೀಶ್, ಮಾಜಿ ಸದಸ್ಯ ಜಯರಾಮು, ಡಿ.ಎಂ.ರವಿ, ಆಶಾಲತಾ ಪುಟ್ಟೇಗೌಡ, ಸರಸ್ವತಿ, ಬೆಟ್ಟೇಗೌಡ, ಕಡತನಾಳು ಬಾಲಕೃಷ್ಣ, ಸ್ವಾಮೀಗೌಡ, ನೆಲಮನೆ ಗುರುಪ್ರಸಾದ್ ಸೇರಿದಂತೆ ಇತರರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ: ಮಂಡ್ಯ ರಸ್ತೆ ಅಗಲೀಕರಣ ಕಾಮಗಾರಿಗೆ ಕಟ್ಟಡಗಳನ್ನು ತೆರವುಗೊಳಿಸುತ್ತಿರುವುದರಿಂದ ಜೂ.3 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರ ವರೆಗೆ ನಾಗಮಂಗಲ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಂಪತ್ ಗಿರಿ ತಿಳಿಸಿದ್ದಾರೆ.

ಕೆಸರೆ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ತ್ಯಾಜ್ಯ ಸಾಗಿಸುತ್ತಿದ್ದ ವಾಹನಗಳಿಗೆ ನಿವಾಸಿಗಳ ತಡೆ


ಮೈಸೂರಿನ ಹಳೇ ಕೆಸರೆಯಲ್ಲಿನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ತ್ಯಾಜ್ಯ ಸಾಗಿಸುತ್ತಿದ್ದ ವಾಹನಗಳನ್ನು ಕೆಸರೆ ನಿವಾಸಿಗಳು ಹಾಗೂ ಜನಸ್ಪಂದನ ಹಿತರಕ್ಷಣಾ ಸಮಿತಿ ಸದಸ್ಯರು ತಡೆದರು.

ಮೈಸೂರು, ಜೂ.2(ಎಸ್‌ಬಿಡಿ)– ಮೈಸೂರಿನ ಹಳೇ ಕೆಸರೆ ಘನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ತ್ಯಾಜ್ಯ ಸಾಗಿಸುತ್ತಿದ್ದ ವಾಹನಗಳನ್ನು ಜನಸ್ಪಂದನ ಹಿತರಕ್ಷಣಾ ಸಮಿತಿ ಸದಸ್ಯರು ತಡೆದು ಹಿಂದಕ್ಕೆ ಕಳುಹಿಸಿದ ಘಟನೆ ಭಾನುವಾರ ನಡೆದಿದೆ.

ತ್ಯಾಜ್ಯ ತುಂಬಿದ್ದ 2 ಟ್ರಕ್‌ಗಳು ಹಾಗೂ 22 ಆಟೋ ಟಿಪ್ಪರ್‌ಗಳನ್ನು ಸಂಸ್ಕರಣಾ ಘಟಕದ ಗೇಟ್ ಬಳಿ ತಡೆದ ಸಮಿತಿ ಸದಸ್ಯರು ಹಾಗೂ ಸ್ಥಳೀಯರು, ಯಾವುದೇ ಕಾರಣಕ್ಕೂ ಘಟಕದಲ್ಲಿ ಹೆಚ್ಚುವರಿ ತ್ಯಾಜ್ಯ ರಾಶಿ ಹಾಕಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದ ಪರಿಣಾಮ ತ್ಯಾಜ್ಯ ಸಾಗಿಸುತ್ತಿದ್ದ ವಾಹನಗಳು ವಾಪಸ್ಸಾದವು.

ಹಳೆ ಕೆಸರೆ ತ್ಯಾಜ್ಯ ಸಂಸ್ಕರಣಾ ಘಟಕದಿಂದ ದುರ್ವಾಸನೆ ಬೀರುತ್ತಿದ್ದು, ಸಾಂಕ್ರಮಿಕ ರೋಗದ ಭೀತಿ ಸೃಷ್ಟಿಯಾಗಿದೆ. ಹೆಚ್ಚು ಪ್ರಮಾಣದ ತ್ಯಾಜ್ಯ ರಾಶಿಯಿಂದ ಗಂಭೀರ ಸಮಸ್ಯೆ ಸೃಷ್ಟಿಯಾಗುತ್ತದೆ. ಇದಕ್ಕೆ ವಿದ್ಯಾರಣ್ಯಪುರಂ ಸೀವೇಜ್ ಫಾರಂ ಸಾಕ್ಷಿಯಾಗಿದೆ. ಹಳೇ ಕೆಸರೆ ಘಟಕದಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾದರೆ ಇಲ್ಲಿನ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮವಾಗುತ್ತದೆ. ಈ ಹಿನ್ನೆಲೆಯಲ್ಲಿ ನಿನ್ನೆಯಷ್ಟೇ ಪ್ರತಿಭಟನೆ ನಡೆಸಲಾಗಿತ್ತು. ಈ ವೇಳೆ ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಅವರು ಘಟಕದಲ್ಲಿ ಹೆಚ್ಚುವರಿ ತ್ಯಾಜ್ಯ ರಾಶಿ ಹಾಕುವುದಿಲ್ಲ ಎಂದು ಭರವಸೆ ನೀಡಿದ್ದರು. ಆದರೆ ಮರುದಿನವೇ (ಭಾನುವಾರ) 20ಕ್ಕೂ ಹೆಚ್ಚು ವಾಹನಗಳಲ್ಲಿ ತ್ಯಾಜ್ಯ ಸಾಗಿಸಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ತಿಳಿದ ಕೂಡಲೇ ಸಮಿತಿ ಸದಸ್ಯರು ಹಾಗೂ ಕೆಸರೆ ಗ್ರಾಮಸ್ಥರು ಘಟಕದ ಬಳಿ ದೌಡಾಯಿಸಿ, ವಾಹನಗಳನ್ನು ತಡೆದು ವಾಪಸ್ ಕಳುಹಿಸಿದ್ದಾಗಿ ಸಮಿತಿಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಘನ ತ್ಯಾಜ್ಯ ಸಂಸ್ಕರಣ ಘಟಕವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಸ್ಥಳೀಯರ ಆರೋಗ್ಯದ ಬಗ್ಗೆ ಪಾಲಿಕೆ ಅಧಿಕಾರಿಗಳು ಚೆಲ್ಲಾಟವಾಡಬಾರದು. ಸಂಸ್ಕರಣ ಸಾಮರ್ಥ್ಯಕ್ಕೆ ಅನುಗುಣವಾಗಿ ತ್ಯಾಜ್ಯ ಸಂಗ್ರಹಿಸಬೇಕು. ಯಾವುದೇ ಕಾರಣಕ್ಕೂ ಹೆಚ್ಚುವರಿ ತ್ಯಾಜ್ಯವನ್ನು ರಾಶಿ ಹಾಕಬಾರದು. ಈ ಬಗ್ಗೆ ಅಧಿಕಾರಿಗಳು ಕಣ್ಣಾಮುಚ್ಚಾಲೆ ಆಡಿದರೆ ತೀವ್ರ ಪ್ರತಿಭಟನೆ ನಡೆಸುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

ಪ್ಲೀಸ್ ಚೆಕ್ ದಿ ನಂಬರ್ ಅಂಡ್ ಡಯಲ್ ಎಗೈನ್!

ಫೋನ್ ಕರೆ ಮಾಡಿ ವಂಚನೆ ಜಾಲಕ್ಕೆ ಬೀಳಸ್ತಾರೆ ಎಚ್ಚರ

ಮೈಸೂರು,ಜೂ.2(ಪಿಎಂ)– ಅಪರಿಚಿತ ಕರೆಗಳನ್ನು ನಂಬದಿರುವುದೇ ಸೂಕ್ತ. ಗೊತ್ತಿಲ್ಲದ ಯಾವುದೇ ನಂಬರ್‌ನಿಂದ ಕರೆ ಬಂದಾಗ ಎಚ್ಚರ ತಪ್ಪಿದರೆ, ನಷ್ಟಕ್ಕೊಳಗಾಗುವುದು ತಪ್ಪಿದ್ದಲ್ಲ, ಕ್ಷಣಾರ್ಧದಲ್ಲಿ ಹಣ ಕಳೆದುಕೊಳ್ಳುತೀರಿ ಜೋಕೆ.



ಫೋನ್ ಕಾಲ್ ಮಾಡಿ, ಹಣ ಹಾಕಿರುವಂತೆ ನಿಮ್ಮ ಮೊಬೈಲ್‌ಗೆ ನಕಲಿ ಸಂದೇಶ ಕಳುಹಿಸಿ ಕ್ಷಣ ಮಾತ್ರದಲ್ಲೇ ಹೆಚ್ಚುವರಿ ಹಣ ಕಳುಹಿಸಿಬಿಟ್ಟಿದ್ದೇನೆಂದು ಮತ್ತೊಂದು ನಕಲಿ ಸಂದೇಶ ರವಾನಿಸುವ ವಂಚಕರ ಜಾಲಕ್ಕೆ ಬಿದ್ದರೆ, ಮರುಕ್ಷಣವೇ ಮೋಸ ಹೋಗಿರುವುದು ಗೊತ್ತಾಗಿ ಪರಿತಪಿಸಬೇಕಾದೀತು. ಇಂತಹದೊಂದು ವಂಚನೆಯ ಹೊಸ ಟ್ರೆಂಡ್‌ಗೆ ಖದೀಮರು ಇಳಿದಿದ್ದಾರೆ.

ಈ ಖದೀಮರು ಮೊದಲೇ ನಿಮ್ಮ ಬ್ಯಾಂಕ್ ಖಾತೆ ಬಗ್ಗೆ ಮಾಹಿತಿ ಕಲೆ ಹಾಕಿ, ನಿಮ್ಮ ಮೊಬೈಲ್‌ಗೆ ಕರೆ ಮಾಡುತ್ತಾರೆ. ನಾನು ನಿಮ್ಮ ತಂದೆ ಸ್ನೇಹಿತ, ನಾನು ನಿಮ್ಮ ಅಣ್ಣನ ಗೆಳೆಯ ಇತ್ಯಾದಿಯಾಗಿ ಕಥೆ ಆರಂಭಿಸುತ್ತಾರೆ. ನಂತರ ತಂದೆ ಅಥವಾ ಅಣ್ಣ ನಿಮ್ಮ ಖಾತೆಗೆ ಹಣ ಕಳುಹಿಸಲು ಹೇಳಿದ್ದಾರೆ ಅವರು ನನಗೆ ಈ ಹಿಂದೆ ಸಾಕಷ್ಟು ಸಹಾಯ ಮಾಡಿದ್ದಾರೆ ಎಂದು ಕಥೆ ಹೆಣೆಯುತ್ತಾ ಸಾಗುತ್ತಾರೆ.

ಯಾರಾದರೆ ನಮಗೇನು ನಮ್ಮ ಖಾತೆ ಹಣ ಹಾಕುವುದಲ್ಲವೇ? ಎಂದು ನೀವು ಸಮ್ಮತಿಸಬಹುದು. ಆದರೆ ಅವರು ಯಾವುದೇ ಕಾರಣಕ್ಕೂ ನಿಮ್ಮ ಖಾತೆ ಹಣ ವರ್ಗಾವಣೆ ಮಾಡಿರುವುದೇ ಇಲ್ಲ. ಬದಲಿಗೆ ನಕಲಿ ನಂಬರ್‌ನಿಂದ ಬ್ಯಾಂಕ್ ಖಾತೆಗೆ ಕ್ರೆಡಿಟ್ ಆಗಿದೆ ಎನ್ನುವಂತೆ ಸಂದೇಶ ರವಾನಿಸುತ್ತಾರೆ. ಇದನ್ನು ನಂಬಿದರೆ ನೀವು ಅರ್ಧ ಹಳ್ಳಕ್ಕೆ ಬಿದ್ದಂತೆ. ಮತ್ತೆ ಹೆಚ್ಚುವರಿ ಹಣ ಕಳುಹಿಸಿದ್ದೇನೆಂದು ಅಂತೆಯೇ ಮತ್ತೊಂದು ನಕಲಿ ಸಂದೇಶ ಕಳುಹಿಸಿ ಆ ಕೂಡಲೇ ಕರೆ ಮಾಡಿ ಸದರಿ ಹೆಚ್ಚುವರಿ ಹಣವನ್ನು ತಮಗೆ ವರ್ಗಾಹಿಸುವಂತೆ ನಯವಾಗಿಯೇ ಮಾತನಾಡುತ್ತಾರೆ.

ಇದನ್ನು ನಂಬಿ ಹಣ ಕಳುಹಿಸಿದರೆ ನೀವು ಪೂರ್ತಿ ಹಳ್ಳಕ್ಕೆ ಬೀಳಬೇಕಾದೀತು. ಒಂದು ವೇಳೆ ನೀವು ಮೋಸ ಹೋಗಿ ವಂಚಕರು ಕರೆ ಮಾಡಿದ ನಂಬರ್‌ಗೆ ವಾಪಸ್ ಕರೆ ಮಾಡಿದರೆ, ನಿಮಗೆ ಸಿಗುವ ಪ್ರತಿಕ್ರಿಯೆ ಏನು ಗೊತ್ತೇ? 'ಪ್ಲೀಸ್ ಚೆಕ್ ದಿ ನಂಬರ್ ಅಂಡ್ ಡಯಲ್ ಎಗೈನ್'!

ವಿವೇಕಾನಂದ ಪರ ಸಂದೇಶ್ ಸ್ವಾಮಿ ಮತಯಾಚನೆ


ಮೈಸೂರು ಉದಯಗಿರಿಯಲ್ಲಿನ ಡಿ.ಬನುಮಯ್ಯ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಪರ ಮತಯಾಚಿಸಿದರು. ಶಿಕ್ಷಕರ ಆಶೋತ್ತರಗಳಿಗೆ ಅನುಗುಣವಾಗಿ ವಿವೇಕಾನಂದ ಕಾರ್ಯ ನಿರ್ವಹಿಸಲಿದ್ದು, ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಕೋರಿದರು. ಈ ವೇಳೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಬಿಎಸ್‌ವೈ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಭಾನುವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ರುದ್ರೇಶ್, ಹಂಚ್ಯಾ ನಂದೀಶ್, ಲಕ್ಷ್ಮಣ್, ಎಂ.ನಾಗೇಂದ್ರ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ನಾಳೆಯಿಂದ 'ಪನಾಚಿ' ಫ್ಯಾಷನ್ ಪ್ರದರ್ಶನ

ಮೈಸೂರು, ಜೂ.2– ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಜೂ.4 ಮತ್ತು 5ರಂದು 'ಪನಾಚಿ' ಫ್ಯಾಷನ್ ಅಂಡ್ ಲೈಫ್‌ಸ್ಟೈಲ್ ಎಕ್ಸಿಬಿಷನ್ ಏರ್ಪಡಿಸಲಾಗಿದೆ.

ಸಿಂಧು ವಿಕ್ರಮ್ ಮತ್ತು ಸಹನಾ ಸುಮಂತ್ ಆಯೋಜಿಸುತ್ತಿರುವ ಈ ಎಕ್ಸಿಬಿಷನ್‌ನಲ್ಲಿ ಭಾರತದ 40ಕ್ಕೂ ಹೆಚ್ಚು ಪ್ರಸಿದ್ಧ ವಿನ್ಯಾಸಕಾರರ ನವೀನ ರಚನೆಗಳು ಪ್ರದರ್ಶನಗೊಳ್ಳಲಿವೆ. ಈ ಸದವಕಾಶ ಕಳೆದುಕೊಳ್ಳದೆ ಆಸಕ್ತರು ಎಕ್ಸಿಬಿಷನ್‌ನಲ್ಲಿ ಪಾಲ್ಗೊಳ್ಳುವಂತೆ ಆಯೋಜಕರು ಮನವಿ ಮಾಡಿದ್ದಾರೆ.


ಸಿಂಧು ವಿಕ್ರಮ್ ಮತ್ತು ಸಹನಾ ಸುಮಂತ್

ಸಾಧಕ ವಿದ್ಯಾರ್ಥಿಗಳು ದೇಶದ ಸಂಪನ್ಮೂಲ ವ್ಯಕ್ತಿಗಳಾಗಬೇಕು

ಶಾಸಕ ಜಿ.ಟಿ.ದೇವೇಗೌಡ ಆಶಯ

ಮೈಸೂರು, ಜೂ.2(ಎಸ್‌ಪಿಎನ್)– ಸಾಧಕ ವಿದ್ಯಾರ್ಥಿಗಳು ದೇಶದ ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯಬೇಕು ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ. ದೇವೇಗೌಡರು ಆಶಯ ವ್ಯಕ್ತಪಡಿಸಿದರು.

ಮೈಸೂರು ನಿವೇದಿತಾನಗರ ಎಸ್.ಆರ್. ಸುಬ್ಬರಾವ್ ಉದ್ಯಾನವನ ಮುಂಭಾಗದಲ್ಲಿ ನಿವೇದಿತಾ ನಗರ ನಿವಾಸಿಗಳ ವೇದಿಕೆ ವತಿಯಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 300ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಪರಿಶ್ರಮಪಟ್ಟು ಅಭ್ಯಾಸ ಮಾಡಿದರೆ ಪಿಯುಸಿ ನಂತರ ಮುಂದಿನ ಭವಿಷ್ಯವನ್ನು ಉಜ್ವಲವಾಗಿ ರೂಪಿಸಿಕೊಳ್ಳಬಹುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ನೇತೃತ್ವದಲ್ಲಿ 300ಕ್ಕೂ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವುದು ಉತ್ತಮ ಸಂಗತಿ. ಅಲ್ಲದೆ, ಪಿಯುಸಿ ನಂತರ ವಿದ್ಯಾರ್ಥಿಗಳು ಯಾವುದೇ ಕ್ಷೇತ್ರದಲ್ಲಿ ಗುರುತಿಸಿಕೊಂಡರೂ ಅವರ ಸಾಧನೆಗೆ ಪೋಷಕರು ಒತ್ತಾಸೆಯಾಗಿ ನಿಲ್ಲಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳ ಸಾಧನೆಯನ್ನು ಸಮುದಾಯದಲ್ಲಿ ಗುರುತಿಸಿ, ಅಭಿನಂದಿಸುತ್ತಿರುವುದು ಸಂತೋಷ ಸಂಗತಿ. ಈ ವಿದ್ಯಾರ್ಥಿಗಳು ಓದಿನ ಜೊತೆಗೆ ತಮ್ಮ ತಂದೆ ತಾಯಿಗಳನ್ನು ಗೌರವದಿಂದ ಕಾಣುವುದರ ಜೊತೆಗೆ ವೃದ್ಧಾಪ್ಯದಲ್ಲಿ ಆಸರೆಯಾಗಿ ನಿಲ್ಲಬೇಕು ಮತ್ತು ದೇಶಕ್ಕೆ ಸಂಪನ್ಮೂಲ ಪ್ರಜೆ ಆಗಿ ಬೆಳೆಯಬೇಕು ಎಂದರಲ್ಲದೆ, ಶಿಕ್ಷಣದ ಜತೆಗೆ ಕ್ರೀಡೆ, ಪಠ್ಯೇತರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡು ಸದಾ ಕ್ರಿಯಾಶೀಲರಾಗಿರಬೇಕು ಎಂದು ಸಲಹೆ ನೀಡಿದರು.

ಸಾಧಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು: ಸಂಸದ ಪ್ರತಾಪ ಸಿಂಹ ಮಾತನಾಡಿ, ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿರುವುದು ಶ್ಲಾಘನೀಯ. ಇದು ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗಲಿದೆ ಎಂದರಲ್ಲದೆ, ಇಂತಹ ಕೆಲಸವನ್ನು ಎಲ್ಲ ಜನ ಪ್ರತಿನಿಧಿಗಳು ಹಮ್ಮಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಸಮಾಜ ಸೇವೆಗೆ ಮುಂದಾಗಿ: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಒಡೆಯರ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಪ್ರತಿಭಾ ಪುರಸ್ಕಾರ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳು ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಚೆನ್ನಾಗಿ ಓದಿ, ಉತ್ತಮ ಭವಿಷ್ಯ ರೂಪಿಸಿಕೊಂಡು ಸಮಾಜ ಸೇವೆ ಮಾಡಲು ಮುಂದಾಗಬೇಕು. ತಮ್ಮ ಅಭಿವೃದ್ಧಿಯ ಜತೆಗೆ ಸಮಾಜದ ಅಭಿವೃದ್ಧಿಗೆ ಮತ್ತು ದೇಶದ ಬೆಳವಣಿಗೆಗೂ ಸಹಕಾರ ನೀಡಬೇಕು ಎಂದರು.

ನಿಮಗಿಷ್ಟದ ಕ್ಷೇತ್ರ ಆಯ್ಕೆ ಮಾಡಿಕೊಳ್ಳಿ: ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್‌ಗೌಡ ಮಾತನಾಡಿ, ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ವೈದ್ಯ, ಕಲಾವಿದ, ವಕೀಲ, ಉತ್ತಮ ಅಧಿಕಾರಿ, ಇಂಜಿನಿಯರ್ ಆಗಬಹುದು. ಪಿಯುಸಿ ನಂತರ ಇವೆಲ್ಲಾ ಅವಕಾಶ ನಿಮ್ಮ ಮುಂದಿದೆ. ಸಿಇಟಿ ಬರೆದಿರುವ ವಿದ್ಯಾರ್ಥಿಗಳು ಇಂಜಿನಿಯರಿಂಗ್, ಮೆಡಿಕಲ್ ಸೀಟ್ ಸಿಗುತ್ತಾ, ಇಲ್ಲವಾ ಎಂದು ಆತಂಕಕ್ಕೆ ಒಳಗಾಗಬಾರದು ಎಂದರು.

ಈ ವೇಳೆ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ಯಲ್ಲಿ ಹೆಚ್ಚು ಅಂಕ ಪಡೆದಿರುವ 300 ಕ್ಕೂ ಹೆಚ್ಚು ಮಕ್ಕಳನ್ನು ಪುರಸ್ಕರಿಸಲಾಯಿತು. ಭಾರತೀಯ ಅರಣ್ಯ ಸೇವೆಗೆ 33ನೇ ರ್‍ಯಾಂಕ್ (ಐಎಫ್‌ಎಸ್) ಪಡೆದಿರುವ ಸೌಮ್ಯಾ ರಾಂಪುರೆ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಘು ಆರ್.ಕೌಟಿಲ್ಯ ವಿದ್ಯಾರ್ಥಿಗಳನ್ನು ಕುರಿತು ಶುಭ ಹಾರೈಸಿದರು. ಶಾಸಕ ಟಿ.ಎಸ್. ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಮುಖಂಡ ಜೋಗಿ ಮಂಜು, ಎಂ.ಎಸ್. ಸತ್ಯಾನಂದ ವಿಟ್ಟು ಇತರರಿದ್ದರು.


ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 300ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಜಿ.ಟಿ.ದೇವೇಗೌಡರು ಅಭಿನಂದಿಸಿದರು.

ಮುಂದೆ ಸಾಮಾನ್ಯ ನಾಗರಿಕನಂತೆ ಕೆಲಸ ಮಾಡುತ್ತೇನೆ

ಮಂಗಳವಾರದಿಂದ ನಾನು ಮಾಜಿ ಸಂಸದನಾಗುತ್ತೇನೆ. ಅಂದಿನಿಂದ ಮೈಸೂರಿನ ನಾಗರಿಕನಾಗಿ ನಿಮಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಮೈಸೂರು ಜನ ನನಗೆ ಹತ್ತು ವರ್ಷ ಅವಕಾಶ ನೀಡಿದ್ದೀರಿ. ಅದರಂತೆ ನಾನು ಕೂಡ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ, ತಿಪ್ಪೆ ಕರಗಿಸಲು ಅನುದಾನ, ಮೈಸೂರು–ಕೊಡಗು ಹೆದ್ದಾರಿ ನವೀಕರಣ, ರೈಲ್ವೆ ಅಭಿವೃದ್ಧಿಗೆ ಒತ್ತು ಸೇರಿದಂತೆ ಹತ್ತು–ಹಲವು ನನ್ನ ಕೆಲಸಗಳನ್ನು ನಮ್ಮ ಜನ ನೆನಪು ಮಾಡಿಕೊಳ್ಳುತ್ತಾರೆ. – **ಪ್ರತಾಪ ಸಿಂಹ,** ಸಂಸದ

ಮೈಸೂರು ಮಿತ್ರ ಸೋಮವಾರ 3 ಜೂನ್ 2024

ಕಳೆದ ವರ್ಷದಂತೆ ಈ ಬಾರಿಯೂ ಮುಂಗಾರು ಕ್ಷೀಣ

ಭೂ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ ನಿವೃತ್ತ ಉಪ ಮಹಾ ನಿರ್ದೇಶಕ ಡಾ.ಪ್ರಕಾಶ್ ಅಭಿಪ್ರಾಯ

ಮಡಿಕೇರಿ, ಜೂ.2– ರಾಜ್ಯದಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಕೊರತೆ ಮುಂಗಾರು ಕಂಡು ಬರುವ ಸಾಧ್ಯತೆಗಳಿವೆ ಎಂದು ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯ ನಿವೃತ್ತ ಉಪ ಮಹಾ ನಿರ್ದೇಶಕರಾದ ವಿಜ್ಞಾನಿ ಡಾ. ಹೆಚ್.ಎಸ್.ಎಂ. ಪ್ರಕಾಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, 2024ನೇ ವರ್ಷದ ವರ್ಷಋತುವಾದ ಜೂನ್ ಮತ್ತು ಸೆಪ್ಟೆಂಬರ್ ಅವಧಿಯ ಮುಂಗಾರು ಅವಧಿಗೆ ಸಂಬಂಧಪಟ್ಟ ಹಾಗೆ ಇಂದಿನವರೆಗಿನ ಜಿಯೋ ಮೀಟಿಯೋರಾಲಜಿ ಅಧ್ಯಯನದ ಆಧಾರದ ಮೇಲೆ ಹೇಳುವುದೇನೆಂದರೆ 2023ನೇ ವರ್ಷದ ಮುಂಗಾರು ಪರಿಸ್ಥಿತಿ ಈ ವರ್ಷವೂ ಕಂಡು ಬರುತ್ತಿದೆ. ಹಾಗಾಗಿ ಈ ಬಾರಿಯ ಮುಂಗಾರು ಸಹ ಕೊರತೆಯ ಮುಂಗಾರು ಆಗುವ ಸಾಧ್ಯತೆಯಿದೆ. ಹಿಂಗಾರಿನ ಬಗ್ಗೆ ಅಕ್ಟೋಬರ್ 2024ರ ಮೊದಲ ವಾರದಲ್ಲಿ ನಿಷ್ಕರ್ಷೆ ಮಾಡಹುದಾಗಿದೆ ಎಂದು ಅಂದಾಜಿಸಿದ್ದಾರೆ.



ಜ್ವಾಲಾಮುಖಿಗಳು ನಿಷ್ಕ್ರಿಯ: ಆವಿಯ ಮೂಲಗಳಾದ ಭಾರತ ದೇಶದ ಸುತ್ತ ಮುತ್ತಲಿನ ಸುಮಾತ್ರ, ಇಂಡೋನೇಷ್ಯಾ, ಫಿಲಿಪ್ಪೀನ್ಸ್, ಪಪುವಾ ನ್ಯೂ ಗಿನಿಯಾ, ಜಪಾನ್, ಕಾಮಚಟ್ಕ, ಅರಬ್ಬೀ ಸಮುದ್ರ, ಹಿಂದೂ ಮಹಾಸಾಗರ ಹಾಗೂ ಬಂಗಾಳ ಕೊಲ್ಲಿಯಲ್ಲಿನ ಮುಖ್ಯವಾದ ದೊಡ್ಡ ಮಟ್ಟದ ಜ್ವಾಲಾಮುಖಿಗಳು ನಿಷ್ಕ್ರಿಯವಾಗಿವೆ. ಇವುಗಳು ಮುಂದಿನ ತಿಂಗಳುಗಳಲ್ಲಿ ಸಕ್ರಿಯವಾಗುವ ಯಾವ ಮುನ್ಸೂಚನೆಗಳು ಇಂದಿನವರೆಗೂ ಕಂಡು ಬಂದಿಲ್ಲ. ಈ ಲಕ್ಷಣಗಳು ಮುಂಗಾರಿನ ಕೊರತೆಗೆ ಮುಖ್ಯ ಕಾರಣವಾಗಲಿವೆ ಎಂದು ಡಾ. ಪ್ರಕಾಶ್ ವಿವರಿಸಿದ್ದಾರೆ. ಹಾಗಾಗಿ ಇಂದಿನ ಪರಿಸ್ಥಿತಿ 2023ರ ಪರಿಸ್ಥಿತಿಯ ಹಾಗೆ ಇರುವುದರಿಂದ ಮಳೆಯ ಪ್ರಮಾಣವು ಕಳೆದ ಬಾರಿಯಷ್ಟೇ ಇರುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಎದುರಾಗಲಿದೆ ನೀರಿನ ಸಮಸ್ಯೆ: ಇದರಿಂದಾಗಿ 2025ರ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ತೀವ್ರ ತೊಂದರೆಯಾಗುವ ಸಾಧ್ಯತೆ ಉಂಟಾಗುತ್ತದೆ. ಆದ್ದರಿಂದ ಜಲ ಕೇಂದ್ರಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಮಳೆ ನೀರಿನ ಸಂಗ್ರಹ ಮಾಡುವುದರಿಂದ ಪರಿಸ್ಥಿತಿಯನ್ನು ನಿಭಾಯಿಸಬಹುದು. ನೀರು ಸಂಗ್ರಹಣಾ ತೊಟ್ಟಿಗಳನ್ನು ಆರಂಭಿಸಿ ಸಾಕಷ್ಟು ನೀರನ್ನು ಹಿಡಿದಿಟ್ಟುಕೊಳ್ಳುವ ಕ್ರಮ ಆಗಬೇಕು. ಈ ಬಾರಿ ಸಾಕಷ್ಟು ಮಳೆ ಆಗದೆ ಇರುವುದರಿಂದ ಅಂತರ್ಜಲ ಕೂಡ ಪೂರ್ಣವಾಗಿ ಮರು ಪೂರಣವಾಗುವುದಿಲ್ಲ ಎಂದು ಮುನ್ಸೂಚನೆ ನೀಡಿದ್ದಾರೆ.

ಭೂಕುಸಿತ ಆತಂಕ ಇಲ್ಲ: ಉತ್ತರ ಕರ್ನಾಟಕ, ಕೊಡಗು ಮತ್ತು ಕೇರಳಗಳಲ್ಲಿ ಪ್ರವಾಹ ಮತ್ತು ಭೂಕುಸಿತ ಪ್ರಕರಣಗಳ ಸಾಧ್ಯತೆ ಕಡಿಮೆ ಇದೆ. 2018 ಮತ್ತು 2019ರ ದುರಂತ ಪರಿಸ್ಥಿತಿಯ ರೀತಿ ಘಟನೆಗಳು ಇರುವುದಿಲ್ಲ. 'ಎಲ್ ನಿನೋ' ಮತ್ತು 'ಲಾ ನಿನ್' ಪರಿಸ್ಥಿತಿಗಳಿಗೆ ಪೂರಕವಾದ ಶಾಂತ ಸಾಗರದ ಕೇಂದ್ರ ಮತ್ತು ಪೂರ್ವ ಭಾಗಗಳ ಸಮುದ್ರ ತಳದಲ್ಲಿರುವ ಜ್ವಾಲಾಮುಖಿಗಳೂ ಸಹ ಸದ್ಯದಲ್ಲಿ ಸ್ವಲ್ಪಮಟ್ಟಿನ ಚಟುವಟಿಕೆ ತೋರುತ್ತಿರುವುದರಿಂದ ದೊಡ್ಡ ಮಟ್ಟದ ಏರಿಳಿತ ಕಂಡು ಬರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ದುಷ್ಚಟಗಳಿಂದ ದೂರವಿದ್ದು, ಆರೋಗ್ಯ ಕಾಪಾಡಿಕೊಳ್ಳಿ



ಧೂಮಪಾನ ರಹಿತ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾಕ್ಕೆ ನ್ಯಾಯಾಧೀಶರಾದ ಎಸ್.ಸುಜಾತ ಚಾಲನೆ ನೀಡಿದರು.

ವಿರಾಜಪೇಟೆ, ಜೂ.2– ತಂಬಾಕು ದುಷ್ಚಟಗಳಿಂದ ಇತ್ತೀಚಿನ ದಿನಗಳಲ್ಲಿ ಯುವಕರು ಬಲಿಯಾಗುತ್ತಿದ್ದಾರೆ. ದುಶ್ಚಟಗಳನ್ನು ದೂರ ಮಾಡಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು 2ನೇ ಅಪರ ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಸ್.ಸುಜಾತ ತಿಳಿಸಿದರು.

ತಾಲೂಕು ಕಾನೂನು ಸೇವೆಗಳ ಸಮಿತಿ, ವಿರಾಜಪೇಟೆ ವಕೀಲರ ಸಂಘ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಶಾ ಕಾರ್ಯಕರ್ತೆಯರ ಸಂಯುಕ್ತ ಆಶ್ರಯದಲ್ಲಿ ವಿಶ್ವ ದೂಮಪಾನ ರಹಿತ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾ ಕಾರ್ಯಕ್ರಮಕ್ಕೆ ನ್ಯಾಯಾಲಯದ ಆವರಣದಲ್ಲಿ ಹಸಿರು ನಿಶಾನೆ ತೋರಿಸಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದುಶ್ಚಟಗಳಿಗೆ ಮಕ್ಕಳು ಬಲಿಯಾಗದಂತೆ ಅಂಗಡಿ ಮಳಿಗೆಗಳಲ್ಲಿಯೂ ತಂಬಾಕು ದುಷ್ಪರಿಣಾಮಗಳ ಬಗ್ಗೆ ನಾಮಫಲಕ ಅಳವಡಿಸಲಾಗಿದೆ. ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಮೊದಲಿಗೆ ನ್ಯಾಯಾಲಯದ ಆವರಣದಿಂದ ಹೊರಟ ಜಾಥಾ ಕಾರು, ನಿಲ್ದಾಣ ಗಡಿಯಾರ ಕಂಬದ ಬಳಿಯಿಂದ ಮುರ್ನಾಡು ರಸ್ತೆ, ದೊಡ್ಡಟ್ಟಿ ಚೌಕಿ ನಂತರ ಖಾಸಗಿ ಬಸ್ ನಿಲ್ದಾಣದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮಕ್ಕೆ ಆಗಮಿಸಿತು. ಈ ವೇಳೆ ಮಾತನಾಡಿದ ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ ಕೊಠಾರಿ ಅವರು, ತಂಬಾಕು ಸೇವನೆಯಿಂದ ಯುವಕರು ತಮ್ಮ ಜೀವವನ್ನು ಹಾಳು ಮಾಡಿಕೊಳ್ಳಬೇಡಿ. ಮಕ್ಕಳು ತಂಬಾಕು ಸೇವನೆಯಿಂದ ದೂರ ಇದ್ದು, ಉತ್ತಮ ಜೀವನವನ್ನು ರೂಪಿಸಿಕೊಳ್ಳುವಂತಾಗಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಯತಿರಾಜ್ ಮಾತನಾಡಿ, ತಂಬಾಕು ದುಷ್ಪರಿಣಾಮದ ಬಗ್ಗೆ 1987ರಿಂದ ಕ್ರಮ ಕೈಗೊಂಡು ಪ್ರತಿ ವರ್ಷ ಮೇ 31 ರಂದು ತಂಬಾಕು ರಹಿತ ದಿನವನ್ನು ಆಚರಿಸಿಕೊಂಡು ಬರುತ್ತಿದ್ದು ಚಿಕ್ಕಮಕ್ಕಳು ದುಶ್ಚಟಕ್ಕೆ ಬಲಿಯಾಗುತ್ತಿರುವುದನ್ನು ವಿಶ್ವಸಂಸ್ಥೆ ಗಮನಿಸಿ ಕಾನೂನು ರಚನೆ ಮಾಡಲಾಗಿದೆ ಎಂದರು.

ಜಾಥಾ ಕಾರ್ಯಕ್ರಮದಲ್ಲಿ ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಕೊಕ್ಕಂಡ ಅಪ್ಪಣ್ಣ, ಅಪರ ಸಿವಿಲ್ ನ್ಯಾಯಾಧೀಶರಾದ ಪ್ರದೀಪ ಪೋತದಾರ್, ಸರಕಾರಿ ಆಸ್ಪತ್ರೆಯ ದಂತ ವೈದ್ಯ ಸನೀಲ್ ಹಾಗೂ ನ್ಯಾಯಾಲಯದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗುಂಡಿಬಿದ್ದ ರಸ್ತೆ ಅಭಿವೃದ್ಧಿಗೆ ಗ್ರಾಮಸ್ಥರ ಒತ್ತಾಯ





ಸಿದ್ದಾಪುರ: ಅಭಿವೃದ್ಧಿ ಕಾಣದ ರಸ್ತೆಯಲ್ಲಿ ಸಂಕಷ್ಟದ ನಡಿಗೆಯೊಂದಿಗೆ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ತೆರಳಲು ಹರಸಾಹಸ ಪಡಬೇಕಾದ ಪರಿಸ್ಥಿತಿ ಇಲ್ಲಿನ ನಿವಾಸಿಗಳಿಗೆ ನಿತ್ಯ ದರ್ಶನವಾಗಿದೆ.

ಕಾಡುಪ್ರಾಣಿಗಳ ಭಯದ ನಡುವೆ ಬದುಕು ಸಾಗಿಸುತ್ತಿರುವ ಗ್ರಾಮೀಣ ಭಾಗದ ಜನರು ನಡೆದಾಡಲು ಸೂಕ್ತ ರಸ್ತೆಗಳು ಇಲ್ಲದೆ ಗುಂಡಿ ಬಿದ್ದ ರಸ್ತೆಯಲ್ಲಿ ಸಂಚರಿಸುವಂತಾಗಿದೆ. ಹಲವಾರು ವರ್ಷಗಳಿಂದಲೂ ರಸ್ತೆ ಅಭಿವೃದ್ಧಿ ಕಾಣದ ಕುಗ್ರಾಮಕ್ಕೆ ಯಾವುದೇ ಬಸ್ಸುಗಳ ಓಡಾಟವಿಲ್ಲದೆ ಖಾಸಗಿ ಬಾಡಿಗೆ ವಾಹನಗಳು ಗ್ರಾಮಕ್ಕೆ ಬರಲು ಭಯಪಡುತ್ತಾರೆ. ತುರ್ತು ಸಂದರ್ಭಗಳಲ್ಲಿ ದುಬಾರಿ ಹಣ ನೀಡಿ ತೆರಳಬೇಕಾದ ಪರಿಸ್ಥಿತಿಯು ನಿರ್ಮಾಣವಾಗುತ್ತದೆ.

ಹಲವು ವರ್ಷಗಳಿಂದಲೂ ರಸ್ತೆ ಅಭಿವೃದ್ಧಿ ಕಾಣದ ಸಿದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಗುಯ್ಯ ಶಾಲೆಯಿಂದ ಕಣ್ಣಂಗಾಲ ಸಂಪರ್ಕದ ಸೇತುವೆ ರಸ್ತೆಯವರೆಗೆ ಗುಂಡಿಗಳಾಗಿ ಪರಿವರ್ತನೆಯಾಗಿದ್ದು, ರಸ್ತೆಯಲ್ಲಿ ಡಾಂಬರೀಕರಣ ಕಾಣದೆ ಕಲ್ಲುಗಳು ಎದ್ದು ಹೋಗಿವೆ. ಇಳಿಜಾರಿನ ರಸ್ತೆಯಲ್ಲಿ ಸಾರ್ವಜನಿಕರು ವಾಹನ ಸವಾರರು ಸಂಚರಿಸಲು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಳೆಗಾಲ ಸಂದರ್ಭದಲ್ಲಿ ಈ ಭಾಗದ ರಸ್ತೆಗಳು ಜಲಾವೃತಗೊಳ್ಳುತ್ತವೆ. ಸೂಕ್ತ ಚರಂಡಿ ವ್ಯವಸ್ಥೆಯು ಇಲ್ಲದೆ ರಸ್ತೆಯಲ್ಲಿ ನೀರು ಹರಿಯುವುದರಿಂದ ಸಂಚಾರಕ್ಕೆ ತೊಡಕು ಉಂಟಾಗುತ್ತದೆ. ಯಾವುದಾದರೂ ಚುನಾವಣೆ ಬಂದ ಸಂದರ್ಭದಲ್ಲಿ ಕಾಟಾಚಾರಕ್ಕೆ ರಸ್ತೆ ಅಭಿವೃದ್ಧಿ ಮಾಡಿದರೆ ಚುನಾವಣೆ ನಂತರ ರಸ್ತೆ ಕಳಪೆಯೊಂದಿಗೆ ಸಂಪೂರ್ಣ ಎದ್ದು ಹೋಗುತ್ತೆ. ಗ್ರಾಮೀಣ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಪಂಚಾಯಿತಿ ಹಾಗೂ ಅಧಿಕಾರಿಗಳು, ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕಾಡು ಪ್ರಾಣಿಗಳ ಭಯದ ನಡುವೆ ಬಸ್ ಸಂಚಾರವಿಲ್ಲದ ಗ್ರಾಮದಲ್ಲಿ ಸಂಚರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಆದಷ್ಟು ಬೇಗ ರಸ್ತೆ ಅಭಿವೃದ್ಧಿಪಡಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಈ ಸಂದರ್ಭ ಸ್ಥಳೀಯರಾದ ವಿಜು, ಮುರುಳಿ, ಬಂಗಾರು, ಪ್ರಕಾಶ್, ಮಣಿ ಕಂಠ, ಸುರೇಶ್, ವಸಂತ ಸೇರಿದಂತೆ ಮತ್ತಿತರರು ಇದ್ದರು.

ಪ್ರಕೃತಿ ವಿಕೋಪ ಅನಾಹುತ ತಡೆಯಲು ಸಜ್ಜಾದ ಪೊಲೀಸರು

ಸಿದ್ದಾಪುರ, ಜೂ.2– ಬೆಳ್ಳಂಬೆಳಿಗ್ಗೆ ಪೊಲೀಸ್ ಅಧಿಕಾರಿಗಳೊಂದಿಗೆ ಸಿಬ್ಬಂದಿಗಳು ಸೇರಿ ಬೆಟ್ಟ ಹತ್ತಿ ಅರಣ್ಯದ ಪ್ರಕೃತಿ ಸೌಂದರ್ಯವನ್ನ ಸವಿಯೋ ಮೂಲಕ ಬೆಟ್ಟದ ತಪ್ಪಲಿನ ಕಲ್ಲು ಬಂಡೆಗಳ ನಡುವೆ ಹತ್ತಿ ಇಳಿಯುವ ಸಾಹಸಮಯ ತರಬೇತಿ ಪಡೆದರು.

ಜಿಲ್ಲೆಯಲ್ಲಿ ಮಳೆಗಾಲ ಸಂದರ್ಭದಲ್ಲಿ ಪ್ರವಾಹ ಪ್ರಕೃತಿ ವಿಕೋಪ ಸೇರಿದಂತೆ ಹಲವು ಅನಾಹುತಗಳನ್ನು ತಡೆಯಲು ಹಾಗೂ ಜನರ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಸಿದ್ದಾಪುರ ಪೊಲೀಸರು ಸಜ್ಜಾಗಿದ್ದಾರೆ. ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ನೇತೃತ್ವದಲ್ಲಿ ಠಾಣೆಯ 37 ಸಿಬ್ಬಂದಿಗಳು ಅರಣ್ಯ ಇಲಾಖೆ ಸಿಬ್ಬಂದಿಗಳ ಸಹಕಾರದೊಂದಿಗೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಗದ್ದಿಗೆ ಬೆಟ್ಟಕ್ಕೆ ತೆರಳಿ ಕಲ್ಲು ಬಂಡೆಗಳ ನಡುವೆ ಕಡಿದಾದ ಮಾರ್ಗಗಳಲ್ಲಿ ಸಂಚರಿಸಿ ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬಹುದಾದ ರಕ್ಷಣಾ ಕಾರ್ಯದ ಬಗ್ಗೆ ತರಬೇತಿ ಪಡೆದುಕೊಂಡರು.

ಪೊಲೀಸ್ ಇಲಾಖೆಯ ನಿರ್ದೇಶನಗಳನ್ನ ಪಾಲಿಸುವುದರೊಂದಿಗೆ ಸಿಬ್ಬಂದಿಗಳು ಸಾಹಸಮಯ ತರಬೇತಿಯಲ್ಲಿ ಪಾಲ್ಗೊಂಡರು.



ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಮಾತನಾಡಿ, ಕೊಡಗು ವರಿಷ್ಠಾಧಿಕಾರಿಗಳಾದ ರಾಮರಾಜನ್ ಅವರ ನಿರ್ದೇಶನದಂತೆ ಡಿವೈಎಸ್ಪಿ ಮಹೇಶ್ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ ರಾಜು ಅವರ ಮಾರ್ಗದರ್ಶನದಲ್ಲಿ ಪ್ರವಾಹ ಪ್ರಕೃತಿ ವಿಕೋಪ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಇಲಾಖೆಯ ನಿರ್ದೇಶನದಂತೆ ಗದ್ದಿಗೆ ಬೆಟ್ಟ ಏರಿ ಇಳಿಯುವ ಹಾಗೂ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮಾರ್ಗದರ್ಶನದ ಬಗ್ಗೆ ಮಾಹಿತಿ ನೀಡಲಾಗಿದೆ ಎಂದರು

ಈ ಸಂದರ್ಭ ಅಪರಾಧ ಪತ್ತೆದಳದ ಪಿಎಸ್ಐ ಹಾಲಪ್ಪ, ಶ್ರೀಮಂಗಲ ಪಿಎಸ್ಐ ಶಿವಾನಂದ, ಪೊನ್ನಂಪೇಟೆ ಪಿಎಸ್ಐ ನವೀನ್‌ಕುಮಾರ್ ಸೇರಿದಂತೆ ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಸುನಿಲ್‌ಕುಮಾರ್ ನಿಧನ



ನಾಪೋಕ್ಲು: ನಾಪೋಕ್ಲುವಿನಲ್ಲಿ ಹೋಬಳಿ ಉಪ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಸುನಿಲ್‌ಕುಮಾರ್(43) ನಿಧನರಾಗಿದ್ದಾರೆ.

ಕುಶಾಲನಗರ ಸಮೀಪದ ಗುಡ್ಡೆಹೊಸೂರು ಬಸವನಹಳ್ಳಿ ನಿವಾಸಿ ಸುನಿಲ್‌ಕುಮಾರ್ ಶನಿವಾರ ಕೂಡ ನಾಪೋಕ್ಲುವಿನಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರು. ಕರ್ತವ್ಯ ಮುಗಿಸಿ ಸಂಜೆ ಮನೆಗೆ ತೆರಳಿದ್ದ ವೇಳೆ ಅವರ ಆರೋಗ್ಯದಲ್ಲಿ ಏರುಪೇರಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಸುನಿಲ್‌ಕುಮಾರ್ ನಿಧನ ಹೊಂದಿದ್ದಾರೆ.

ಅವಿವಾಹಿತರಾಗಿರುವ ಸುನಿಲ್‌ಕುಮಾರ್ ಅವರ ಅಂತ್ಯಕ್ರಿಯೆ ಬಸವನಹಳ್ಳಿಯ ಅವರ ಸಹೋದರಿಯ ಜಮೀನಿನಲ್ಲಿ ಸೋಮವಾರ ಜರುಗಲಿದೆ.

ಚಾ.ನಗರ ಲೋಕಸಭಾ ಚುನಾವಣೆ: ನಾಳೆ ಮತ ಎಣಿಕೆ

ಜಿಲ್ಲಾಡಳಿತದಿಂದ ಸಕಲ ಸಿದ್ಧತೆ: ಜಿಲ್ಲಾಧಿಕಾರಿ ಶಿಲ್ಪಾ ನಾಗ್

ಚಾಮರಾಜನಗರ, ಜೂ.2– ಚಾಮರಾಜನಗರ (ಮೀಸಲು) ಲೋಕಸಭಾ ಕ್ಷೇತ್ರದ ಮತ ಎಣಿಕೆಯು ಜೂ.4 ರಂದು ನಡೆಯಲಿದ್ದು, ಎಣಿಕೆ ಕಾರ್ಯಕ್ಕಾಗಿ ಜಿಲ್ಲಾಡಳಿತದ ವತಿಯಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರೂ ಆದ ಶಿಲ್ಪಾನಾಗ್ ತಿಳಿಸಿದ್ದಾರೆ.

ನಗರದ ತಮ್ಮ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ (ಮೀಸಲು) ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಬರುವ ಹೆಚ್.ಡಿ. ಕೋಟೆ, ನಂಜನಗೂಡು, ವರುಣ, ಟಿ.ನರಸೀಪುರ, ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದ್ದು, ಸದರಿ 8 ವಿಧಾನ ಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಜೂನ್ 4ರಂದು ನಗರದ ನಂಜನಗೂಡು ರಸ್ತೆಯ ಬೇಡರಪುರದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ. ಮತ ಎಣಿಕೆ ಕಾರ್ಯ ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ ಎಂದರು.

ಮತ ಎಣಿಕೆ ಕೇಂದ್ರದಲ್ಲಿ ಮತ ಯಂತ್ರಗಳ ಭದ್ರತಾ ಕೊಠಡಿಗಳ ಮುಂದೆ ಸಿಸಿಟಿವಿಗಳನ್ನು ಅಳವಡಿಸಲಾಗಿದೆ. ಸದರಿ ವೀಡಿಯೋ ಚಿತ್ರೀಕರಣವನ್ನು ವೀಕ್ಷಿಸಲು ಎಲ್‌ಇಡಿ ಟಿವಿಯನ್ನು ಹಾಕಿಸಲಾಗಿದೆ. ಸಿಸಿ ಟಿವಿಗಳು ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸಲು 6 ಜನ ತಾಂತ್ರಿಕ ಸಿಬ್ಬಂದಿ 3 ಪಾಳಿಯಲ್ಲಿ ನಿಯೋಜಿಸಲಾಗಿದೆ. ಮತ ಎಣಿಕೆ ಕೇಂದ್ರದ 100 ಮೀ. ಒಳಗಡೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಯಾವುದೇ ವಾಹನವನ್ನು ಒಳಗಡೆ ಬಿಡುವುದಿಲ್ಲ. ಎಣಿಕೆ ಕಾರ್ಯವನ್ನು ಸುಲಲಿತವಾಗಿ ನಡೆಸುವ ಸಲುವಾಗಿ ಕಂಪ್ಯೂಟರ್, ಸ್ಕ್ಯಾನರ್, ಪ್ರಿಂಟರ್ಸ್, ಯುಪಿಎಸ್, ಟೆಲಿಫೋನ್, ಇಂಟರ್‌ನೆಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಎಣಿಕೆ ಕಾರ್ಯವನ್ನು ಶಾಂತಿ ಮತ್ತು ಸುವ್ಯವಸ್ಥೆ ಮತ್ತು ಸುರಕ್ಷಿತವಾಗಿ ನಡೆಸಲು ಅಗತ್ಯ ಬ್ಯಾರಿಕೇಡಿಂಗ್, ಸಿಗ್ನಲ್ಸ್ ಮತ್ತು ವಾಹನ ನಿಲುಗಡೆಯನ್ನು ವ್ಯವಸ್ಥಿತವಾಗಿ ಕಲ್ಪಿಸಲಾಗಿದೆ ಎಂದರು.



ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿದರು.

ಅಂಚೆ ಮತಪತ್ರಗಳ ಮೂಲಕ ಒಟ್ಟು 4405 ಮತ ಚಲಾವಣೆಯಾಗಿವೆ. ಪ್ರತಿ ವಿಧಾನಸಭಾ ಕ್ಷೇತ್ರದ ಮತ ಎಣಿಕೆಯು ತಲಾ 14 ಟೇಬಲ್(ಮೇಜು)ಗಳಲ್ಲಿ ನಡೆಯಲಿದೆ. ಪ್ರತಿ ಟೇಬಲ್‌ಗೆ ತಲಾ 14 ಮಂದಿ ಮತ ಎಣಿಕೆ ಮೇಲ್ವಿಚಾರಕರು, 14 ಮಂದಿ ಎಣಿಕೆ ಸಹಾಯಕರು, 14 ಮಂದಿ ಮೈಕ್ರೋ ಅಬ್ಸರ್‌ವರ್ ಹಾಗೂ ಅಂಚೆ ಮತ ಪತ್ರ ಎಣಿಕೆಗೆ 5 ಮಂದಿ ಸೇರಿ ಒಟ್ಟು 45 ಸಿಬ್ಬಂದಿ ಇರಲಿದ್ದಾರೆ. ಅಂಚೆ ಮತ ಪತ್ರ ಎಣಿಕೆಗೆ 8 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದ್ದು, 8 ಮಂದಿ ಏಜೆಂಟರನ್ನು ನೇಮಕ ಮಾಡಲಾಗಿದೆ. ಅಂಚೆ ಮತಪತ್ರಗಳ ಎಣಿಕೆಯು ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಯವರ ಸಮ್ಮುಖದಲ್ಲಿ ನಡೆಯಲಿದೆ ಎಂದರು.

ಎವಿಎಂ ಮತ ಯಂತ್ರಗಳ ಮೂಲಕ ಮತ ಎಣಿಕೆಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 14 ಏಜೆಂಟರಂತೆ ಒಟ್ಟು 120 ಮಂದಿ ಎಣಿಕೆ ಏಜೆಂಟರನ್ನು ನೇಮಕಾತಿ ಮಾಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 14 ಮತ ಎಣಿಕೆ ಟೇಬಲ್‌ಗಳಂತೆ ಒಟ್ಟು 112 ಮತ ಎಣಿಕೆ ಟೇಬಲ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಮತ ಎಣಿಕೆ ಟೇಬಲ್‌ಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಎಣಿಕೆ ಕಾರ್ಯವನ್ನು ಸಂಬಂಧಿಸಿದ ವಿಧಾನಸಭಾ ಕ್ಷೇತ್ರಗಳ ಸಹಾಯಕ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುತ್ತದೆ ಎಂದು ತಿಳಿಸಿದರು.

ಮತ ಎಣಿಕೆ ಏಜೆಂಟರಿಗೆ ಎಣಿಕೆಯ ಸಮಗ್ರ ಪ್ರಕ್ರಿಯೆಯನ್ನು ನೋಡಲು ಮುಕ್ತ ಸೌಲಭ್ಯ ಕಲ್ಪಿಸಲಾಗಿದೆ. ಪ್ರತಿ ಎಣಿಕೆ ಟೇಬಲ್‌ಗಳಿಗೆ ನೀಡಲಾಗುವ ಕಂಟ್ರೋಲ್ ಯುನಿಟ್ ಜೊತೆಗೆ ಸದರಿ ಮತ ಕೇಂದ್ರಕ್ಕೆ ಸಂಬಂಧಿಸಿದಂತೆ ನಮೂನೆ–17ಸಿ ರಲ್ಲಿ ದಾಖಲಾದ ಮತಗಳಿಗೆ ಸಂಬಂಧಿಸಿದ ಲೆಕ್ಕವನ್ನು ಎಣಿಕೆ ಟೇಬಲ್‌ಗಳಿಗೆ ನೀಡಿ, 17ಸಿ ಪಾರ್ಟ್–2 ರಲ್ಲಿ ಮತದಾನವಾದ ಮತಗಳ ವಿವರವನ್ನು ದಾಖಲಿಸಲಾಗುತ್ತದೆ. ಅಂಚೆ ಮತಪತ್ರಗಳ ಎಣಿಕೆಯು ಪ್ರಾರಂಭವಾದ 30 ನಿಮಿಷಗಳ ನಂತರ, ಇವಿಎಂ ಮತ ಎಣಿಕೆಯನ್ನು ಪ್ರಾರಂಭಿಸಲಾಗುತ್ತದೆ ಎಂದರು.

ಮತ ಎಣಿಕೆಯ ಏಜೆಂಟರು ಮತ ಎಣಿಕೆ ಕಾರ್ಯಕ್ಕೆ ಅವರು ಹಾಜರಾದಾಗ ತಮ್ಮ ನೇಮಕಾತಿ ಪತ್ರದ ಜೊತೆಗೆ (ನಮೂನೆ–18) ತಮ್ಮ ಗುರುತಿನ ಚೀಟಿಯನ್ನು ಮತಗಳ ಎಣಿಕೆಗಾಗಿ ನಿಗದಿಪಡಿಸಿರುವ ಸಮಯಕ್ಕೆ (ದಿನಾಂಕ: 04.06.2024 ರಂದು ಬೆಳಿಗ್ಗೆ 8–00 ಗಂಟೆ) ಕನಿಷ್ಠ ಪಕ್ಷ ಒಂದು ಗಂಟೆ ಮುಂಚಿತವಾಗಿ ಚುನಾವಣಾಧಿಕಾರಿಗೆ ಸಲ್ಲಿಸಬೇಕು. ಸಮಯಕ್ಕೆ ಮೀರಿ ಸಲ್ಲಿಸಲ್ಪಟ್ಟ ಯಾವುದೇ ನೇಮಕಾತಿ ಪತ್ರಗಳನ್ನು ಅಂಗೀಕರಿಸಲಾಗುವುದಿಲ್ಲ. ಮತ ಎಣಿಕೆ ಏಜೆಂಟರಿಗೆ ಮತ ಎಣಿಕೆ ಕೇಂದ್ರದೊಳಗೆ ಮೊಬೈಲ್, ಐಫೋನ್, ಲ್ಯಾಪ್‌ಟಾಪ್ ಅಥವಾ ವಿಡಿಯೋ (ಶ್ರವ್ಯ–ದೃಶ್ಯ) ಚಿತ್ರೀಕರಣ ಮಾಡಿ ದಾಖಲಿಸುವಂತಹ ಯಾವುದೇ ವಿದ್ಯುನ್ಮಾನ ಸಾಧನಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದರು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರ್‍ಯಾಂಡಂ ಆಗಿ ಆಯ್ಕೆ ಮಾಡಿದ 5 ಮತಗಟ್ಟೆಗಳ ವಿವಿ ಪ್ಯಾಟ್ ಪೇಪರ್ ಸ್ಲಿಪ್‌ಗಳನ್ನು ಎಣಿಕೆ ಮಾಡಲಾಗುತ್ತದೆ. ಎಣಿಕೆ ಕಾರ್ಯ ನಡೆಸಲಾಗುವ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳ ಕೊಠಡಿಗಳಲ್ಲಿ ವೆಬ್ ಕಾಸ್ಟಿಂಗ್ ಕಾರ್ಯ ನಡೆಸಲಾಗುತ್ತದೆ. ಮಾಧ್ಯಮ ಪ್ರತಿನಿಧಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದ್ದು, ಅಗತ್ಯವಾದ ಟಿ.ವಿ, ಇಂಟರ್‌ನೆಟ್ ಸೇರಿದಂತೆ ಅಗತ್ಯ ತಾಂತ್ರಿಕ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು, ಸ್ಟ್ರಾಂಗ್ ರೂಂ ಭದ್ರತೆಗಾಗಿ ಅಗತ್ಯ ಪೊಲೀಸ್ ಬಂದೋಬಸ್ತ್ ಅನ್ನು ವ್ಯವಸ್ಥಿತವಾಗಿ ಮಾಡಲಾಗಿದೆ. ಭದ್ರತೆ ಕಾರ್ಯಕ್ಕಾಗಿ ಕೆ.ಎಸ್.ಆರ್.ಪಿ ಹಾಗೂ ಮೀಸಲು ಪೊಲೀಸ್ ಪಡೆ ನಿಯೋಜಿಸಲಾಗಿದೆ. 80 ಮಂದಿ ಅಧಿಕಾರಿಗಳು, 300 ಸಿಬ್ಬಂದಿ ಹಾಗೂ 350 ಮಂದಿ ಗೃಹರಕ್ಷಕ ದಳ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಡಿಸಿ ಗೀತಾ ಹುಡೇದ, ಇತರರು ಇದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರ ಚುನಾವಣೆ : ಇಂದು ಮತದಾನ



ಕರ್ನಾಟಕ ವಿಧಾನಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಜೂ.3ರಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ಜಿಲ್ಲೆಯ ವಿವಿಧ ತಾಲೂಕುಗಳಿಗೆ ನೇಮಕವಾಗಿರುವ ಮತಗಟ್ಟೆ ಅಧಿಕಾರಿಗಳು ಮತದಾನಕ್ಕೆ ಅಗತ್ಯವಾದ ಬ್ಯಾಲೆಟ್ ಪೇಪರ್, ಬ್ಯಾಲೆಟ್ ಬಾಕ್ಸ್ ಮತ್ತು ಇನ್ನಿತರೆ ನಮೂನೆಗಳನ್ನು ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ತೆರೆಯಲಾಗಿರುವ ಮಸ್ಟರಿಂಗ್ ಕೇಂದ್ರದಿಂದ ಪಡೆದು ಮತಗಟ್ಟೆಗಳತ್ತ ತೆರಳಿದರು.

ಚಾಮರಾಜನಗರ, ಜೂ.2– ಕರ್ನಾಟಕ ವಿಧಾನಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಜೂ.3ರಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ಈ ಸಂಬಂಧ ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಕರ್ನಾಟಕ ವಿಧಾನ ಪರಿಷತ್ತಿನ ದಕ್ಷಿಣ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಗೆ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳು ಒಳಪಡಲಿದ್ದು, ಚುನಾವಣೆಗೆ ಸಂಬಂಧಿಸಿದಂತೆ ಒಟ್ಟು 11 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಮತಗಟ್ಟೆಯಲ್ಲಿ ಮತದಾರರು ಮತ ಚಲಾಯಿಸಲು ಬ್ಯಾಲೆಟ್ ಪೇಪರ್‌ಗಳನ್ನು ಬಳಸಲಾಗುತ್ತದೆ ಎಂದು ಅವರು ತಿಳಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗಾಗಿ ಜಿಲ್ಲೆಯಲ್ಲಿ ಒಟ್ಟು 5 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಗುಂಡ್ಲುಪೇಟೆ ಪಟ್ಟಣದ ತಾಲೂಕು ಆಡಳಿತ ಸೌಧ ಕೊಠಡಿ ಸಂಖ್ಯೆ 17, ಚಾಮರಾಜನಗರ ಪಟ್ಟಣದ ತಾಲೂಕು ಆಡಳಿತ ಸೌಧದ ನೆಲಮಹಡಿಯಲ್ಲಿರುವ ಮೀಟಿಂಗ್ ಹಾಲ್, ಯಳಂದೂರು ಪಟ್ಟಣದ ತಾಲೂಕು ಆಡಳಿತ ಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ 1ರ ಮಿಟಿಂಗ್ ಹಾಲ್, ಕೊಳ್ಳೇಗಾಲ ಪಟ್ಟಣದ ತಾಲೂಕು ಆಡಳಿತ ಸೌಧದ ನೆಲಮಹಡಿಯಲ್ಲಿರುವ ಕೇಸ್ವಾನ್ ಕೊಠಡಿ ಸಂಖ್ಯೆ 2 ಮತ್ತು ಹನೂರು ತಾಲೂಕಿಗೆ ಸಂಬಂಧಪಟ್ಟಂತೆ ಪಶು ವೈದ್ಯಕೀಯ ಆಸ್ಪತ್ರೆ ಸಭಾಂಗಣದಲ್ಲಿ ಮತಗಟ್ಟೆಗಳನ್ನು ತೆರೆಯಲಾಗಿದೆ ಎಂದರು.

ಅಂತಿಮ ಮತದಾರರ ಪಟ್ಟಿಯಲ್ಲಿ ಗುಂಡ್ಲುಪೇಟೆ ತಾಲೂಕಿನಲ್ಲಿ 306 ಪುರುಷರು, 97 ಮಹಿಳೆಯರು ಸೇರಿದಂತೆ ಒಟ್ಟು 403 ಮತದಾರರು, ಚಾಮರಾಜನಗರ 384 ಪುರುಷರು, 219 ಮಹಿಳೆಯರು ಸೇರಿದಂತೆ ಒಟ್ಟು 603 ಮತದಾರರು, ಯಳಂದೂರು 148 ಪುರುಷರು, 54 ಮಹಿಳೆಯರು ಸೇರಿದಂತೆ ಒಟ್ಟು 202 ಮತದಾರರು, ಕೊಳ್ಳೇಗಾಲ 417 ಪುರುಷರು, 307 ಮಹಿಳೆಯರು ಸೇರಿದಂತೆ ಒಟ್ಟು 724 ಮತದಾರರು ಹಾಗೂ ಹನೂರು ತಾಲೂಕಿನಲ್ಲಿ 193 ಪುರುಷರು, 56 ಮಹಿಳೆಯರು ಸೇರಿದಂತೆ ಒಟ್ಟು 249 ಮತದಾರರಿದ್ದು, ಜಿಲ್ಲೆಯಲ್ಲಿ ಒಟ್ಟು 1448 ಪುರುಷರು, 733 ಮಹಿಳೆಯರು ಸೇರಿದಂತೆ 2181 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಪತ್ರಿಕಾಗೋಷ್ಠಿ ಬಳಿಕ ಜಿಲ್ಲಾಧಿಕಾರಿಯವರು ಜಿಲ್ಲಾಡಳಿತ ಭವನದ ಅವರಣದಲ್ಲಿರುವ ಜೆ.ಎಚ್. ಪಟೇಲ್ ಸಭಾಂಗಣಕ್ಕೆ ಭೇಟಿ ನೀಡಿ ಅಲ್ಲಿ ನಡೆಯುತ್ತಿದ್ದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮಸ್ಟರಿಂಗ್ ಕಾರ್ಯವನ್ನು ವೀಕ್ಷಿಸಿದರು.

ಚುನಾವಣೆಯ ಮತದಾನಕ್ಕಾಗಿ ಸಿದ್ಧತೆಗಳು, ಪೋಸ್ಟಲ್ ಬ್ಯಾಲೆಟ್ ಪೇಪರ್‌ಗಳು ಮತದಾನದ ಪೆಟ್ಟಿಗೆಗಳು, ಮತದಾನಕ್ಕೆ ಅಗತ್ಯವಾದ ಪರಿಕರಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಅವರು ಮಸ್ಟರಿಂಗ್ ಪ್ರಕ್ರಿಯೆಯಲ್ಲಿ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಕಾರ್ಯನಿರ್ವಹಿಸುವಂತೆ ಮಸ್ಟರಿಂಗ್ ಅಧಿಕಾರಿಗಳಿಗೆ ಸೂಚಿಸಿ, ಅಗತ್ಯ ಸಲಹೆಗಳನ್ನು ನೀಡಿದರು.

ಮೌಂಟ್ ಅಬೂ ಪರ್ವತಕ್ಕೆ ಆಹ್ವಾನ: ಒತ್ತಡ ಮುಕ್ತ ಆಡಳಿತಕ್ಕಾಗಿ ಆಧ್ಯಾತ್ಮಿಕ ಸಬಲೀಕರಣ

ಚಾಮರಾಜನಗರ, ಜೂ.2– ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯಾಲಯ ಮೌಂಟ್ ಅಬು ರಾಜಸ್ಥಾನದಲ್ಲಿರುವ ಆನಂದ ಸರೋವರದ ಸಮುಚ್ಚಯಗಳಲ್ಲಿ ಸೆಪ್ಟೆಂಬರ್ 13 ರಿಂದ 16 ರವರೆಗೆ ಒತ್ತಡಮುಕ್ತ ಆಡಳಿತಕ್ಕಾಗಿ ಆಧ್ಯಾತ್ಮಿಕ ಸಬಲೀಕರಣಕ್ಕಾಗಿ ರಾಷ್ಟ್ರೀಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಾಗಾರದಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ವಡೋದರದಲ್ಲಿರುವ ಏಕತಾಮೂರ್ತಿ, ಅಹಮದಾಬಾದ್, ಅಬುದರ್ಶನ್ ಮಾಡಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ.ನಂ.: 9141837082, 7899820430 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಸಾಧಕರಾಗಬೇಕು

ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಾ. ವಿಜಯಲಕ್ಷ್ಮಿ

ಕೊಳ್ಳೇಗಾಲ, ಜೂ.2– ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಹೊಂದುವ ಮೂಲಕ ಸಾಧಕರಾಗಬೇಕು, ಬಣ್ಣ ಬಣ್ಣದ ಚಿಟ್ಟೆಗಳಂತೆ ನಿಮ್ಮ ಬದುಕನ್ನು ಸಾಧನೆ ಎಂಬ ಮೈಲುಗಲ್ಲು ದಾಟುವ ಮೂಲಕ ನಿಮ್ಮ ಜೀವನ ಸಾರ್ಥಕ ಪಡಿಸಿಕೊಳ್ಳಿ, ಹೊಸ ಹೊಸ ವಿಚಾರಗಳನ್ನು ಅರ್ಥೈಸಿಕೊಂಡು ನಾನು ಸಾಧಿಸಬಲ್ಲೆ ಎಂಬ ಛಲ ನಿಮ್ಮಲ್ಲಿ ಹೊಮ್ಮಲಿ, ಹಾಗಾದಾಗ ಮಾತ್ರ ವಿದ್ಯಾರ್ಥಿಗಳು ಉನ್ನತ ಸಾಧನೆಗೆ ಪ್ರೇರಣೆಯಾಗಲಿದೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರಾದ ಶ್ರೀಮತಿ ಡಾ. ವಿಜಯಲಕ್ಷ್ಮಿ ಹೇಳಿದರು.

ಇಲ್ಲಿನ ಮಹದೇಶ್ವರ ಕಾಲೇಜಿನಲ್ಲಿ ಅಯೋಜಿಸಲಾಗಿದ್ದ ವಿವಿಧ ಘಟಕಗಳ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಇದು ಪೈಪೋಟಿಯುಗ ಎಂಬುದನ್ನು ಅರಿಯಬೇಕು, ಈ ಪೈಪೋಟಿ ಯುಗದಲ್ಲಿ ನೀವು ಹೆಚ್ಚಿನ ಜ್ಞಾನಾರ್ಜನೆ ಹೊಂದಲು ಸಜ್ಜಾಗಿ, ಹೆಚ್ಚಿನ ಕೌಶಲಾಭಿವೃದ್ಧಿ ಹೊಂದಿ, ಸಿಕ್ಕ ಅವಕಾಶಗಳನ್ನು ಬಳಕೆ ಮಾಡಿಕೊಳ್ಳಿ, ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿ ಜೀವನ ವಿಕಸನಕ್ಕೆ, ಮಾನಸಿಕ, ದೈಹಿಕ ಬಲವರ್ಧನೆಗೂ ಸಹಕಾರಿಯಾಗಲಿದೆ, ವಿದ್ಯಾರ್ಥಿಗಳು ಸುಂದರವಾದ ಬಣ್ಣಗಳನ್ನು ಹೊಂದಿರುವ ಚಿಟ್ಟೆಗಳಂತೆ ಸಾಧನೆ ಜೊತೆಗೆ ನಿಮ್ಮ ಭವಿಷ್ಯವನ್ನು ಸುಂದರಗೊಳಿಸಿಕೊಳ್ಳಿ ಎಂದು ಸಲಹೆ ನೀಡಿದರು.



ಕೊಳ್ಳೇಗಾಲ ಪಟ್ಟಣದ ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ವಿವಿಧ ವಿಭಾಗ ಮಟ್ಟದಲ್ಲಿ ಸಾಧನೆಗೈದ ಸಾಧಕ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಡಾ. ವಿಜಯಲಕ್ಷ್ಮಿ ಅವರು ಬಹುಮಾನ ವಿತರಿಸಿದರು. ನಾಗೇಂದ್ರಪ್ರಸಾದ್, ಪ್ರೊ. ಜಯಲಕ್ಷ್ಮಿ, ಪ್ರೊ. ಸುಂದರಮೂರ್ತಿ, ಡಾ. ವೇಣುಗೋಪಾಲ್, ಪ್ರೇಮಕುಮಾರಿ, ಜಯಶಂಕರ್ ಇನ್ನಿತರರಿದ್ದರು.

ಕಾಲೇಜು ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ನಾಗೇಂದ್ರಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳು ಅವಶ್ಯಕ್ಕೆ ತಕ್ಕಂತೆ ಮೊಬೈಲ್ ಬಳಸಿಕೊಳ್ಳಿ, ಮೊಬೈಲ್ ಗೀಳಿನಿಂದ ದೂರವಿದ್ದು ಹೆಚ್ಚಿನ ಜ್ಞಾನಾರ್ಜನೆ ಸಂಪಾದಿಸುವ ಪುಸ್ತಕಗಳು ಹಾಗೂ ಜಾಲತಾಣದ ಮೂಲಕ ಹಲವು ಮಾಹಿತಿಗಳನ್ನು ಅರಿಯಿರಿ ಎಂದು ಸಲಹೆ ನೀಡಿದರು. ಮಹದೇಶ್ವರ ಕಾಲೇಜು ಅನೇಕ ಐತಿಹ್ಯ ಹೊಂದಿರುವ ಕಾಲೇಜು, ಇಲ್ಲಿ ಕಲಿತವರು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದಾರೆ. ಅವರಂತೆ ನೀವು ಸಹಾ ವಿವಿಧ ರಂಗಗಳಲ್ಲಿ ಸಾಧನೆಗೈಯಿರಿ ಎಂದರು.

ಇದೆ ವೇಳೆ ಕಾಲೇಜು ಸಮಾರಂಭದಲ್ಲಿ ಜಂಗಮ ವಾರ್ಷಿಕ ಸಂಚಿಕೆ ಬಿಡುಗಡೆಗೊಳಿಸಲಾಯಿತು. ವಿವಿಧ ಆಟೋಟಗಳಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ನೀಡಲಾಯಿತು.

ಪ್ರಾಂಶುಪಾಲೆ ಶ್ರೀಮತಿ ಪ್ರೊ.ಜಯಲಕ್ಷ್ಮಿ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ನಾಗೇಂದ್ರಪ್ರಸಾದ್, ಡಾ. ಹೇಮಕುಮಾರ್, ಅರುಣ್ ಕುಮಾರ್, ಡಾ. ಸುಧಾ, ಪ್ರೊ ಎಸ್.ಸುಂದರಮೂರ್ತಿ, ಪ್ರೊ ಪ್ರೇಮಕುಮಾರಿ, ಜಯಶಂಕರ್, ಡಾ. ವೇಣುಗೋಪಾಲ್. ಸಿದ್ದರಾಜು ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 3 ಜೂನ್ 2024

ಮೂರನೇ ಪುಟದಿಂದ

ಇಂದು ಮತದಾನ

ನೇರ ಸ್ಪರ್ಧೆ ಏರ್ಪಟ್ಟಿದ್ದರೆ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜು, ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಸೇರಿ 11 ಮಂದಿ ಕಣದಲ್ಲಿದ್ದಾರೆ. ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಎಸ್.ಎಲ್.ಭೋಜೇಗೌಡ, ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆ.ಕೆ.ಮಂಜುನಾಥ್ ಸೇರಿ 8 ಮಂದಿ ಸ್ಪರ್ಧಿಸಿದ್ದಾರೆ. ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಧನಂಜಯ್ ಸರ್ಜಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಸ್ಪರ್ಧಿಸಿದ್ದಾರೆ. ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿಗೆ ಬಂಡಾಯವಾಗಿ ಮಾಜಿ ಶಾಸಕ ಕೆ.ರಘುಪತಿ ಭಟ್ ಹಾಗೂ ಕಾಂಗ್ರೆಸ್‌ಗೆ ಬಂಡಾಯವಾಗಿ ಎಸ್.ಪಿ.ದಿನೇಶ್ ಕಣದಲ್ಲಿ ಉಳಿದಿದ್ದಾರೆ.

11 ಅಭ್ಯರ್ಥಿಗಳು ಕಣದಲ್ಲಿ

ಕ್ಷೇತ್ರವು ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಯನ್ನು ಒಳಗೊಂಡಿದೆ. ನಾಳೆ ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 20, ಚಾಮರಾಜನಗರದಲ್ಲಿ 5, ಮಂಡ್ಯದಲ್ಲಿ 9, ಹಾಸನದಲ್ಲಿ 10 ಮತಗಟ್ಟೆ ಸೇರಿದಂತೆ ಕ್ಷೇತ್ರದಲ್ಲಿ 44 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 194 ಸಿಬ್ಬಂದಿಗಳನ್ನು ಮತದಾನ ಪ್ರಕ್ರಿಯೆಗೆ ನಿಯೋಜಿಸಲಾಗಿದೆ.

ಮೈಸೂರು ಜಿಲ್ಲೆಗೆ ಸಿಂಹಪಾಲು: ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ನಾಲ್ಕು ಜಿಲ್ಲೆ ಒಳಗೊಂಡಂತೆ 11,998 ಪುರುಷ ಮತದಾರರು,9,550 ಮಹಿಳಾ ಮತದಾರರು ಹಾಗೂ ಒಬ್ಬರು ತೃತೀಯ ಲಿಂಗಿ ಮತದಾರರು ಸೇರಿದಂತೆ 21,549 ಮತದಾರರು ಹೆಸರು ನೋಂದಾಯಿಸಿ ಕೊಂಡಿದ್ದಾರೆ. ಅವರಲ್ಲಿ ಶೇ.50ರಷ್ಟು ಮತದಾರರು ಮೈಸೂರು ಜಿಲ್ಲೆಯಲ್ಲಿಯೇ ಇರುವುದು ವಿಶೇಷ. ಮೈಸೂರಲ್ಲಿ 5338 ಪುರುಷ, 5100 ಮಹಿಳೆ ಹಾಗೂ ಒಬ್ಬರು ತೃತೀಯಲಿಂಗಿ ಮತದಾರರು ಒಳಗೊಂಡಂತೆ 10,439 ಮತದಾರರಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 1,448 ಪುರುಷ, 733 ಮಹಿಳಾ ಮತದಾರರು ಸೇರಿದಂತೆ 2,181 ಮತದಾರರು ಹಕ್ಕು ಚಲಾಯಿಸಲು ಹೆಸರು ನೋಂದಾಯಿಸಿದ್ದಾರೆ. ಮಂಡ್ಯದಲ್ಲಿ 3,127 ಪುರುಷ ಮತದಾರರು, 2,276 ಮಹಿಳಾ ಮತದಾರರು ಸೇರಿ 5,403 ಮತದಾರರಿದ್ದಾರೆ. ಹಾಸನ ಜಿಲ್ಲೆಯಲ್ಲಿ 2,085 ಪುರುಷ, 1,441 ಮಹಿಳಾ ಮತದಾರರು ಸೇರಿ 3,526 ಮತದಾರರು ಹಕ್ಕು ಚಲಾಯಿಸುವ ಹಕ್ಕು ಹೊಂದಿದ್ದಾರೆ.

ಕಣದಲ್ಲಿರುವ ಹುರಿಯಾಳುಗಳು: ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಮೇಲ್ಮನೆ ಪ್ರವೇಶಿಸಲು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ, ಜೆಡಿಎಸ್(ಮೈತ್ರಿ) ಅಭ್ಯರ್ಥಿ ಕೆ.ವಿವೇಕಾನಂದ, ಕರ್ನಾಟಕ ಜನತಾ ಪಕ್ಷದಿಂದ ಎಂ.ನಾಗೇಂದ್ರಬಾಬು, ಕನ್ನಡ ಚಳವಳಿ ವಾಟಾಳ್ ಪಕ್ಷದಿಂದ ವಾಟಾಳ್ ನಾಗರಾಜ್, ಪಕ್ಷೇತರ ಅಭ್ಯರ್ಥಿಗಳಾಗಿ ಡಾ.ಎಸ್.ಅನಿಲ್‌ಕುಮಾರ್, ಕದಂಬ ನಾ ಅಂಬರೀಷ್, ನಾಗಮಲ್ಲೇಶ್, ನಿಂಗರಾಜು ಎಸ್ ಶಂಕನಪುರ, ಕೆ.ಸಿ.ಪುಟ್ಟಸಿದ್ದಶೆಟ್ಟಿ, ಡಾ.ಹ.ರಾ.ಮಹೇಶ್, ರಾಜು ಕೆ.ಸಿದ್ದಯ್ಯನಪುರ ಚುನಾವಣಾ ಕಣದಲ್ಲಿದ್ದಾರೆ. 11 ಅಭ್ಯರ್ಥಿಗಳಲ್ಲಿ ಕಾಂಗ್ರೆಸ್ ಮತ್ತು ಮೈತ್ರಿ ಅಭ್ಯರ್ಥಿಗಳು ನಾಲ್ಕು ಜಿಲ್ಲೆಗಳಲ್ಲೂ ಬೆಂಬಲಿಗರು ಹಾಗೂ ಪಕ್ಷದ ಕಾರ್ಯಕರ್ತರೊಂದಿಗೆ ಬಿರುಸಿನ ಪ್ರಚಾರ ನಡೆಸಿ, ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

ಕವಿತಾ ರಾಜಾರಾಮ್ ಮನವಿ

ಮತದಾನ ನಡೆಯಲಿದ್ದು, ಮತದಾನದ ನಂತರ ಪ್ರತೀ ಮತಗಟ್ಟೆಗಳಿಂದ ಬ್ಯಾಲೆಟ್ ಬಾಕ್ಸ್ ಹಾಗೂ ಇತರೆ ದಾಖಲಾತಿಗಳನ್ನು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಸಂಗ್ರಹಿಸಿ, ಮತ ಎಣಿಕೆ ಕೇಂದ್ರವಾದ ಮಹಾರಾಣಿ ವಿಜ್ಞಾನ ಕಾಲೇಜಿನ ಸ್ಟ್ರಾಂಗ್ ರೂಂಗಳಲ್ಲಿ ಇರಿಸಲಾಗುವುದು. ಸ್ಟ್ರಾಂಗ್ ರೂಂನಲ್ಲಿ ಈಗಾಗಲೇ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪ್ರತೀ ಸ್ಟ್ರಾಂಗ್ ರೂಂಗೆ ಒಬ್ಬರು ಇನ್ಸ್‌ಪೆಕ್ಟರ್, ಐವರು ಪಿಎಸ್‌ಐ, ಎಎಸ್‌ಐ 7 ಹಾಗೂ 30 ಮಂದಿ ಕಾನ್ಸ್‌ಟೆಬಲ್ ನೇಮಿಸಲಾಗಿದೆ. ಹಾಗೆಯೇ ಮತದಾನಕ್ಕೆ ಇಬ್ಬರು ಎಸಿಪಿ, ಐವರು ಇನ್ಸ್‌ಪೆಕ್ಟರ್, ಪಿಎಸ್‌ಐ 9, ಎಎಸ್‌ಐ 13 ಹಾಗೂ 60 ಮಂದಿ ಕಾನ್ಸ್‌ಟೆಬಲ್‌ಗಳು ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಸಿಎಆರ್ 2, ಕೆಎಸ್‌ಆರ್‌ಪಿ 2, ಕಮಾಂಡೋ 4 ತುಕಡಿಗಳನ್ನೂ ನಿಯೋಜಿಸಲಾಗಿದೆ ಎಂದರು.

ಜೂ.6 ರಂದು ಬೆಳಗ್ಗೆ 8 ಗಂಟೆಗೆ ಚುನಾವಣಾ ವೀಕ್ಷಕರು, ಅಭ್ಯರ್ಥಿ ಹಾಗೂ ಚುನಾವಣಾ ಏಜೆಂಟರುಗಳ ಸಮಕ್ಷಮದಲ್ಲಿ ಭದ್ರತಾ ಕೊಠಡಿಯನ್ನು ತೆರೆದು ಮತ ಎಣಿಕೆ ಕಾರ್ಯವನ್ನು ಆರಂಭಿಸಲಾಗುವುದು. ಮತ ಎಣಿಕೆ ಕಾರ್ಯಕ್ಕೆ ಪ್ರತೀ ಕ್ಷೇತ್ರಗಳಿಗೆ ಮತ ಎಣಿಕೆ ಮಾಡಲು 14 ಟೇಬಲ್‌ಗಳು ಮತ್ತು ಒಬ್ಬರು ಚುನಾವಣಾಧಿಕಾರಿಗಳನ್ನು ನಿಯೋಜಿಸಲಾಗಿದೆ. ಪ್ರತೀ ಮತ ಎಣಿಕೆ ಟೇಬಲ್‌ಗಳಿಗೆ ಒಬ್ಬರಂತೆ ಅಭ್ಯರ್ಥಿಗಳ ಪರವಾಗಿ ಮತ ಎಣಿಕೆ ಏಜೆಂಟ್‌ಗಳನ್ನು ನೇಮಕ ಮಾಡಿ ಗುರುತಿನ ಚೀಟಿ ನೀಡುವ ಬಗ್ಗೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು. ಪ್ರಾದೇಶಿಕ ಆಯುಕ್ತರ ಕಚೇರಿ ತಹಸಿಲ್ದಾರರಾದ ವೈ.ಎಸ್.ಸುಬ್ರಹ್ಮಣ್ಯ, ಶಕುಂತಲಾ ಉಪಸ್ಥಿತರಿದ್ದರು.

ಬಿಜೆಪಿ 3 ಅಭ್ಯರ್ಥಿಗಳ ಪ್ರಕಟ

ಜೆಡಿಎಸ್ ಅಭ್ಯರ್ಥಿ ಪ್ರಕಟವಾಗಲಿದೆ. ಅಲ್ಲದೇ ಕಾಂಗ್ರೆಸ್ ಮತ್ತು ಬಿಜೆಪಿಯ ಎಲ್ಲಾ ಅಭ್ಯರ್ಥಿಗಳು ನಾಳೆ ನಾಮಪತ್ರ ಸಲ್ಲಿಸಲಿದ್ದಾರೆ. 11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಈ ಮೂರೂ ಪಕ್ಷಗಳ 11 ಅಭ್ಯರ್ಥಿಗಳು ಮಾತ್ರ ನಾಮಪತ್ರ ಸಲ್ಲಿಸಿದ್ದಲ್ಲಿ ಅವರೆಲ್ಲರೂ ಅವಿರೋಧವಾಗಿ ಆಯ್ಕೆಯಾಗಲಿದ್ದು, ಚುನಾವಣೆಗೆ ಆಸ್ಪದವಿರುವುದಿಲ್ಲ. ಒಂದು ವೇಳೆ ಪಕ್ಷೇತರವಾಗಿ ಯಾರಾದರೂ ನಾಮಪತ್ರ ಸಲ್ಲಿಸಿದ್ದೇ ಆದಲ್ಲಿ ಜೂ.13ರಂದು ಚುನಾವಣೆ ನಡೆಯಲಿದೆ. ಆದರೆ ನಾಮಪತ್ರ ಸಲ್ಲಿಸುವ ಪಕ್ಷೇತರ ಅಭ್ಯರ್ಥಿಗೆ ಮತದಾರರಾಗಿರುವ ಶಾಸಕರುಗಳೇ ಸೂಚಕರಾಗಬೇಕಾಗುತ್ತದೆ. ಹೀಗಾಗಿ ಪಕ್ಷೇತರರಾಗಿ ಯಾರೊಬ್ಬರೂ ನಾಮಪತ್ರ ಸಲ್ಲಿಸುವ ಸಾಧ್ಯತೆ ಕ್ಷೀಣವಾಗಿದ್ದು, ಎಲ್ಲಾ 11 ಮಂದಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಸುತ್ತ ಅರೆ ಸೇನಾಪಡೆ ನಿಯೋಜಿಸಿ

ಹೆಚ್ಚುವರಿ ಭದ್ರತಾ ಪಡೆಗಳ ನಿಯೋಜನೆ ಮಾಡಬೇಕು. ಎಣಿಕೆ ಕೇಂದ್ರದ ಸುತ್ತಲೂ ಹೆಚ್ಚುವರಿ ಪೊಲೀಸ್ ಮತ್ತು ಅರೆಸೇನಾ ಪಡೆಗಳ ನಿಯೋಜನೆ ಮಾಡಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕು. ಯಾವುದೇ ವ್ಯಕ್ತಿಯ ಅನಧಿಕೃತ ಪ್ರವೇಶ ಅಥವಾ ಉಲ್ಲಂಘನೆಯ ಪ್ರಯತ್ನಗಳನ್ನು ತಡೆಗಟ್ಟಲು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು. ಪಕ್ಷದ ಏಜೆಂಟ್‌ಗಳು ಸೇರಿದಂತೆ ಮತ ಎಣಿಕೆ ಪ್ರದೇಶವನ್ನು ಪ್ರವೇಶಿಸುವ ಎಲ್ಲಾ ವ್ಯಕ್ತಿಗಳನ್ನು ಸಂಪೂರ್ಣವಾಗಿ ತಪಾಸಣೆ ಮಾಡಬೇಕು. ಅಧಿಕಾರಿಗಳು ಮತ್ತು ಮಾಧ್ಯಮ ಸಿಬ್ಬಂದಿ ಅವರ ಉಪಸ್ಥಿತಿಯು ಅತ್ಯಗತ್ಯವಾಗಿದ್ದು, ಅವರ ಪೂರ್ವ ಅನುಮತಿ ಪಡೆದ ವ್ಯಕ್ತಿಗಳಿಗೆ ಮಾತ್ರ ಅವಕಾಶ ಮಾಡಿಕೊಡಬೇಕು. ಇನ್ನು ಈ ಹಿಂದೆ ಏಪ್ರಿಲ್ 26ರಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಮತದಾನ ನಡೆಯುವ ಮೊದಲು ಬಿಜೆಪಿ ಅಭ್ಯರ್ಥಿ ಡಾ ಸಿಎನ್ ಮಂಜುನಾಥ್ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, ಸಿಆರ್‌ಪಿಎಫ್ ಭದ್ರತೆ ಒದಗಿಸುವಂತೆ ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್!

ಇದಕ್ಕೂ ಮೊದಲು ಆಮ್ ಆದ್ಮಿ ಪಕ್ಷದ ಕಚೇರಿಯಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಈ ವೇಳೆ, "ನಾನು ಮತ್ತೆ ಜೈಲಿಗೆ ಹೋಗುತ್ತಿರುವುದು ಭ್ರಷ್ಟಾಚಾರದಲ್ಲಿ ತೊಡಗಿದ್ದಕ್ಕಾಗಿ ಅಲ್ಲ, ನಾನು ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತಿದ್ದರಿಂದ ಜೈಲಿಗೆ ಹೋಗುತ್ತಿದ್ದೇನೆ. ನನಗೆ ಸುಪ್ರೀಂ ಕೋರ್ಟ್ 21 ದಿನಗಳ (ಪರಿಹಾರ) ಅವಕಾಶ ನೀಡಿತು. ಈ 21 ದಿನಗಳು ಅವಿಸ್ಮರಣೀಯ. ನಾನು ಒಂದು ನಿಮಿಷವೂ ವ್ಯರ್ಥ ಮಾಡಲಿಲ್ಲ. ನಾನು ದೇಶವನ್ನು ಉಳಿಸಲು ಪ್ರಚಾರ ಮಾಡಿದ್ದೇನೆ. ಎಎಪಿಗಿಂತ ಮೊದಲು ನನಗೆ ನನ್ನ ದೇಶ ಮುಖ್ಯ ಎಂದು ಕೇಜ್ರಿವಾಲ್ ಹೇಳಿದರು. ಅಂತೆಯೇ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮೂರನೇ ಬಾರಿಗೆ ಅಧಿಕಾರಿದ ಗದ್ದುಗೆ ಏರಲಿದೆ ಎಂಬ ಭವಿಷ್ಯ ನುಡಿಯುವ ಎಲ್ಲಾ ಎಕ್ಸಿಟ್ ಪೋಲ್‌ಗಳು "ನಕಲಿ" ಎಂದು ಕೇಜ್ರಿವಾಲ್ ಪ್ರತಿಪಾದಿಸಿದರು.

ಹ್ಯಾಟ್ರಿಕ್ ಗೆಲುವು ಸಾಧಿಸಿದ ಬಿಜೆಪಿ

ಜನತೆ, ಬಿಜೆಪಿ ಕಾರ್ಯಕರ್ತರು ಹಾಗೂ ನಾಯಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಧನ್ಯವಾದ ಅರುಣಾಚಲ ಪ್ರದೇಶ, ಅದ್ಭುತ ರಾಜ್ಯದ ಜನರು ಮತ್ತೆ ಬಿಜೆಪಿ ಮೇಲೆ ವಿಶ್ವಾಸವನ್ನಿಟ್ಟು ಮತ ನೀಡಿದ್ದೀರಿ. ಬಿಜೆಪಿಗೆ ನೀವು ಅಭೂತಪೂರ್ವ ಗೆಲುವು ನೀಡಿದ್ದೀರಿ. ನಮ್ಮ ಪಕ್ಷ ಮತ್ತಷ್ಟು ಅಭಿವೃದ್ಧಿಯೊಂದಿಗೆ ಹಾಗೂ ಅರುಣಾಚಲ ಪ್ರದೇಶದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಉತ್ತಮ ಆಡಳಿತ ನೀಡಲಿದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

ಸಿಕ್ಕಿಂನಲ್ಲಿ ಎಸ್‌ಕೆಎಂ ಮತ್ತೇ ಅಧಿಕಾರಕ್ಕೆ: ಸಿಕ್ಕಿಂನಲ್ಲಿ ಸಹ ಆಡಳಿತ ಪಕ್ಷಕ್ಕೇ ಮತದಾರರು ಮನ್ನಣೆ ನೀಡಿದ್ದಾರೆ. ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ ಮರಳಿ ಗದ್ದುಗೆ ಹಿಡಿದಿದೆ. 32 ಸೀಟುಗಳ ಪೈಕಿ 31 ಸ್ಥಾನಗಳಲ್ಲಿ ಎಸ್‌ಕೆಎಂ ಗೆದ್ದಿರುವುದು ಅದರ ಪ್ರಾಬಲ್ಯಕ್ಕೆ ಸಾಕ್ಷಿ. ವಿರೋಧ ಪಕ್ಷ ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ ಕೇವಲ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಏಪ್ರಿಲ್ 19ರಂದು ನಡೆದ ಚುನಾವಣೆಯಲ್ಲಿ, ಶೇ 79.88ರಷ್ಟು ಮತದಾನ ದಾಖಲಾಗಿತ್ತು. ಎಸ್‌ಕೆಎಂ ಹಾಗೂ ಪವನ್ ಕುಮಾರ್ ಚಾಮ್ಲಿಂಗ್ ಅವರ ಎಸ್‌ಡಿಎಫ್ ನಡುವೆ ನೇರ ಹಣಾಹಣಿ ನಿರೀಕ್ಷಿಸಲಾಗಿತ್ತು. ಬಿಜೆಪಿ ಮತ್ತು ಕಾಂಗ್ರೆಸ್ ಕೂಡ ಇಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು.

ಚಿನ್ನ ಗೆದ್ದ ಕನ್ನಡಿಗ ಡಿ.ಪಿ. ಮನು

91.36 ಮೀಟರ್ ಜಾವೆಲಿನ್ ಥ್ರೋ ಎಸೆಯುವ ಮೂಲಕ ಏಷ್ಯನ್ ದಾಖಲೆಯನ್ನು ಹೊಂದಿರುವ ತೈವಾನ್‌ನ ಚೆಂಗ್ ಚಾವೊ–ತ್ಸುನ್ ಅವರು, ಈ ಸ್ಪರ್ಧೆಯಲ್ಲಿ 76.21 ಮೀಟರ್ ಎಸೆದು ಬೆಳ್ಳಿ ಗೆದ್ದಿದ್ದಾರೆ. ಮತ್ತೊಬ್ಬ ತೈವಾನ್ ಆಟಗಾರ ಹುವಾಂಗ್ ಚಾವೊ–ಹಂಗ್ 71.24 ಮೀಟರ್ ಜಾವೆಲಿನ್ ಥ್ರೋ ಹಾಕುವುದರೊಂದಿಗೆ ಕಂಚಿನ ಪದಕಕ್ಕೆ ತೃಪ್ತಿಪಟ್ಟರು. ಈ ಹಿಂದೆ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ವಿಜೇತರಾಗಿದ್ದ ಡಿಪಿ ಮನು ಕೂದಲೆಳೆ ಅಂತರದಲ್ಲಿ ಭಾರತದ ನೀರಜ್ ಚೋಪ್ರಾ ವಿರುದ್ಧ ಸೋತು ಬೆಳ್ಳಿ ಪದಕಕ್ಕೆ ತೃಪ್ತಿ ಪಟ್ಟುಕೊಂಡಿದ್ದರು. ಏಪ್ರಿಲ್‌ನಲ್ಲಿ ಇಂಡಿಯನ್ ಗ್ರ್ಯಾಂಡ್ ಪ್ರಿಕ್ಸ್–1 ಅನ್ನು ಗೆದ್ದಿದ್ದರು.

ಶ್ರೀಮನ್ ನ್ಯಾಯಸುಧಾ ಮಂಗಳ ಮಹೋತ್ಸವಕ್ಕೆ ಚಾಲನೆ

●ಮಂತ್ರಾಲಯ ಮತ್ತು ಸೋಸಲೆ ಶ್ರೀಗಳ ಸಾನ್ನಿಧ್ಯ ●ವಿದ್ವತ್ ಸಭೆಯಲ್ಲಿ ಪಂಡಿತರ ಪ್ರಶ್ನೆಗಳಿಗೆ ಸಮರ್ಥ ಉತ್ತರ ನೀಡಿದ ವಿದ್ಯಾರ್ಥಿಗಳು

ಮೈಸೂರು,ಜೂ.2(ಪಿಎಂ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀವ್ಯಾಸತೀರ್ಥ ವಿದ್ಯಾಪೀಠದಲ್ಲಿ ಶ್ರೀವ್ಯಾಸರಾಜ ಮಠ (ಸೋಸಲೆ) ಹಾಗೂ ಶ್ರೀವ್ಯಾಸತೀರ್ಥ ವಿದ್ಯಾಪೀಠದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಶ್ರೀಮನ್ ನ್ಯಾಯ ಸುಧಾ ಮಂಗಳ ಮಹೋತ್ಸವ (ಶ್ರೀಮನ್ನ್ಯಾಯ ಸುಧಾ ಪರೀಕ್ಷೆ) ಭಾನುವಾರ ಉದ್ಘಾಟನೆಗೊಂಡಿತು.

ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಗುರುಕುಲ ಪದ್ಧತಿಯಡಿ ಅಧ್ಯಯನ ಮಾಡಿದ ಹಿರಿಯ ವಿದ್ಯಾರ್ಥಿಗಳಾದ ಸೌಮಿತ್ರಿ ಸುಘೋಷಾ, ಪ್ರಣವಾ ಮತ್ತು ಶ್ರೀಶಾ ಅವರ ಶ್ರೀಮನ್ ನ್ಯಾಯಸುಧಾ ಪರೀಕ್ಷೆ ಪ್ರಕ್ರಿಯೆಗೆ ವಿಧ್ಯುಕ್ತ ಚಾಲನೆ ದೊರೆಯಿತು. ನ್ಯಾಯಸುಧಾ ಗ್ರಂಥಕ್ಕೆ ವಿದ್ವಾಂಸರ ಮೌಖಿಕ ವ್ಯಾಖ್ಯಾನ, ಅರ್ಥ, ವಿವರ ನೀಡುವ ಪ್ರಕ್ರಿಯೆ ಇದಾಗಿದ್ದು, ಮೊದಲ ದಿನವಾದ ಇಂದು ಸುಘೋಷಾ ಹಾಗೂ ಪ್ರಣವಾ ಪರೀಕ್ಷೆ ಎದುರಿಸಿದರು.

ಶ್ರೀವ್ಯಾಸತೀರ್ಥ ವಿದ್ಯಾಪೀಠದ ಪ್ರಥಮ ಸುಧಾ ಮಂಗಳ ಮಹೋತ್ಸವ ಇದಾಗಿದ್ದು, ಸುಘೋಷ ಎಂಬ ವಿದ್ಯಾರ್ಥಿಯು ತಾತ್ಪರ್ಯಚಂದ್ರಿಕಾ ಗ್ರಂಥದ ಪರೀಕ್ಷೆಯಲ್ಲಿ ಎಲ್ಲಾ ವಿದ್ವಾಂಸರ ಪ್ರಶ್ನೆಗಳಿಗೆ ಉತ್ತರಿಸಿ ಮೆಚ್ಚುಗೆಗೆ ಪಾತ್ರನಾದನು. ಅಂತೆಯೇ ಪ್ರಣವ ಎಂಬ ವಿದ್ಯಾರ್ಥಿಯು ಶ್ರೀಮನ್ ನ್ಯಾಯ ಸುಧಾ ಗ್ರಂಥದ ನವಿಲಕ್ಷಣತ್ವಾಧಿಕರಣದ ಪರೀಕ್ಷೆಯಲ್ಲಿ ವಿದ್ವಾಂಸರ ಪ್ರಶ್ನೆಗಳಿಗೆ ಉತ್ತರಿಸಿ ಮೆಚ್ಚುಗೆಗೆ ಭಾಜನನಾದನು. ಉಳಿದ ಇನ್ನಿಬ್ಬರು ವಿದ್ಯಾರ್ಥಿಗಳ ಪರೀಕ್ಷೆ ನಾಳೆ ನಡೆಯಲಿದೆ.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀವ್ಯಾಸತೀರ್ಥ ವಿದ್ಯಾಪೀಠದಲ್ಲಿ ಶ್ರೀಮನ್ ನ್ಯಾಯಸುಧಾ ಮಂಗಳ ಮಹೋತ್ಸವಕ್ಕೆ ಭಾನುವಾರ ಚಾಲನೆ ದೊರೆಯಿತು. ಮಂತ್ರಾಲಯದ ಶ್ರೀಸುಬುಧೇಂದ್ರತೀರ್ಥ ಶ್ರೀಪಾದ ಸ್ವಾಮೀಜಿ ಹಾಗೂ ಸೋಸಲೆ ಶ್ರೀವ್ಯಾಸರಾಜ ಮಠದ ಶ್ರೀವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಮತ್ತು ಶ್ರೀಮನ್ ನ್ಯಾಯಸುಧಾ ಪರೀಕ್ಷೆಯ ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು.

ಸಾನ್ನಿಧ್ಯ ವಹಿಸಿದ್ದ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಶ್ರೀಸುಬುಧೇಂದ್ರತೀರ್ಥ ಶ್ರೀಪಾದ ಸ್ವಾಮೀಜಿಯವರು ಪರೀಕ್ಷೆ ವೇಳೆ ತಮ್ಮ ದಿವ್ಯ ಸಂದೇಶ ನೀಡಿದರು. ಜ್ಞಾನಕ್ಕೆ ವಿಶ್ವದ ಎಲ್ಲೆಡೆ ಮಾನ್ಯತೆ ಇದೆ. ಸೋಸಲೆ ವಿದ್ಯಾಪೀಠದ ವಿದ್ಯಾರ್ಥಿಗಳು ಸಮರ್ಥವಾಗಿ ಅಧ್ಯಯನ ನಡೆಸಿದ್ದಾರೆ. ಸೋಸಲೆಯ ಶ್ರೀವಿದ್ಯಾಶ್ರೀಶ ತೀರ್ಥರು ಕಳೆದ ಒಂದು ದಶಕದಿಂದ ಈ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಶ್ರಮಿಸಿದ್ದಾರೆ. ಇದು ಯತಿಗಳು ಮಾಡುವ ಮಾದರಿ ಕಾರ್ಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪುಸ್ತಕ ನಿರಪೇಕ್ಷವಾಗಿ ವಿದ್ಯಾರ್ಥಿಗಳು ಮುಕ್ತ ಸಭೆಯಲ್ಲಿ ಉತ್ತರಗಳನ್ನು ನೀಡಿದ್ದಾರೆ. ಇದು ಇವರ ಉತ್ತಮ ಗುಣಮಟ್ಟದ ಅಧ್ಯಯನಕ್ಕೆ ಕನ್ನಡಿ ಹಿಡಿದಂತೆ ಇದೆ. ವಿದ್ಯಾರ್ಥಿಗಳು ನಿರ್ಭೀತಿಯಿಂದ, ಸಂಸ್ಕೃತದಲ್ಲಿ ಸುಲಲಿತವಾಗಿ ವಿಷಯದ ಅನುವಾದ, ವ್ಯಾಖ್ಯಾನ ಮತ್ತು ಮಂಡನೆ ಮಾಡುವ ಶೈಲಿಯನ್ನು ಕರಗತ ಮಾಡಿಕೊಂಡರೆ ವಿದ್ವಾಂಸರಾಗಬಹುದು. ಇಂದು ನ್ಯಾಯಸುಧಾ ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಸಾಧನಾ ಮಾರ್ಗದಲ್ಲಿದ್ದಾರೆ. ಅವರ ಉತ್ಸಾಹ, ಕಲಿಕೆಯ ಆಸಕ್ತಿ ಜೀವನಪೂರ್ಣ ಹಸಿರಾಗಿಯೇ ಇರಲಿ ಎಂದು ಶುಭ ಹಾರೈಸಿದರು.

ಪಂಡಿತರು, ವಿದ್ವಾಂಸರ ಉಪಸ್ಥಿತಿ: ಮಂತ್ರಾಲಯದ ಹಿರಿಯ ವಿದ್ವಾಂಸರಾದ ಮಹಾಮಹೋಪಾಧ್ಯಾಯ ರಾಜಾ ಎಸ್.ಗಿರಿ ಆಚಾರ್ಯ, ಗುರು ಸಾರ್ವಭೌಮ ವಿದ್ಯಾಪೀಠದ ಪ್ರಾಚಾರ್ಯ ವಾದಿರಾಜ ಆಚಾರ್ಯ, ಶ್ರೀನಿವಾಸಮೂರ್ತಿ ಆಚಾರ್ಯ, ಬೆಂಗಳೂರಿನ ಪೇಜಾವರ ವಿದ್ಯಾಪೀಠದ ಪ್ರಾಧ್ಯಾಪಕ ಪಂಡಿತ ಮಾತರಿಶ್ವಾಚಾರ್ಯ, ವ್ಯಾಸತೀರ್ಥ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ.ಡಿ.ಪಿ.ಮಧುಸೂದನಾಚಾರ್ಯ ಮತ್ತಿತರರು ಪಾಲ್ಗೊಂಡಿದ್ದರು.

ಜೂ.7ರವರೆಗೆ ಶ್ರೀಮನ್ ನ್ಯಾಯಸುಧಾ ಪರೀಕ್ಷಾ ಪ್ರಕ್ರಿಯೆ ನಡೆಯಲಿದೆ. ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿಯವರ ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವ ಜೂ.7ರಿಂದ 9ರವರೆಗೆ ಮೈಸೂರಿನ ಜೆಪಿ ನಗರದ ವಿಟ್ಠಲಧಾಮದಲ್ಲಿ ನಡೆಯಲಿದೆ. ಜೊತೆಗೆ ವಿವಿಧ ಕಾರ್ಯಕ್ರಮಗಳು ಜೂ.10ರವರೆಗೆ ನಡೆಯಲಿವೆ.

ಸೋಸಲೆ ಶ್ರೀವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ 1008 ಶ್ರೀವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹಿರಿಯ ವಿದ್ವಾಂಸ ಶೇಷಗಿರಿ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ವ್ಯಾಸತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಶ್ರೀನಿಧಿ ಆಚಾರ್ಯ ಪ್ಯಾಟಿ ನಿರೂಪಿಸಿದರು. ಇದಕ್ಕೂ ಮುನ್ನ ಸಮಾರಂಭಕ್ಕೆ ಆಗಮಿಸಿದ್ದ ಮಂತ್ರಾಲಯದ ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರನ್ನು ಮಠದ ವಿದ್ವಾಂಸರು ವೇದಘೋಷದೊಂದಿಗೆ ಸ್ವಾಗತಿಸಿದರು.

12ನೇ ಶತಮಾನದ ಅನುಭವ ಮಂಟಪದ ಚರ್ಚೆಗಳು ಸ್ತ್ರೀಯರಿಗೆ ಸ್ವಾತಂತ್ರ್ಯ ಕಲ್ಪಿಸಿವೆ

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಅಕ್ಕ ಮಹಾದೇವಿ ಜಯಂತಿ ಅಂಗವಾಗಿ ಶಿಕ್ಷಣ ಕ್ಷೇತ್ರದಿಂದ ಮಂಗಳಾ ಮುದ್ದುಮಾದಪ್ಪ, ಶರಣತತ್ವ ಪ್ರಚಾರ ಹಾಗೂ ಸಂಘಟನಾ ಕ್ಷೇತ್ರದ ಶಾರದ ಶಿವಲಿಂಗಸ್ವಾಮಿ, ಪ್ರಕಾಶನ ಕ್ಷೇತ್ರದ ಎಸ್.ವಿ.ಪವಿತ್ರ ಅವರಿಗೆ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು, ಜೂ.2(ಎಸ್‌ಪಿಎನ್)– ಹನ್ನೆರಡನೇ ಶತಮಾನದ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಶರಣರ ಚರ್ಚೆಗಳು ಸ್ತ್ರೀಕುಲಕ್ಕೆ ಸ್ವಾತಂತ್ರ್ಯ ಒದಗಿಸಿವೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಅಕ್ಕ ಮಹಾದೇವಿ ಜಯಂತಿ ಹಾಗೂ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

12ನೇ ಶತಮಾನದ ವಚನಗಾರ್ತಿಯರಲ್ಲಿ ಅಕ್ಕ ಮಹಾದೇವಿಯ ವ್ಯಕ್ತಿತ್ವವೇ ರೋಮಾಂಚನಕಾರಿ. ಈ ಕಾಲಘಟ್ಟದಲ್ಲಿ ಅಕ್ಕನ ನಿಲುವಿನಿಂದ ಅವಹೇಳನಕ್ಕೆ ಗುರಿಯಾಗಿದ್ದ ಸ್ತ್ರೀ ಕುಲಕ್ಕೆ ಸ್ವಾತಂತ್ರ್ಯ ಬಿತ್ತಿದ ಕೀರ್ತಿ ಅಕ್ಕನಿಗೆ ಸಲ್ಲುತ್ತದೆ. ಅಂತೆಯೇ ಅನುಭವ ಮಂಟಪದಲ್ಲಿ ಅಲ್ಲಮಪ್ರಭು ಎತ್ತಿದ ಎಲ್ಲಾ ಪ್ರಶ್ನೆಗಳಿಗೂ ಅಕ್ಕ ಮಹಾದೇವಿ ಸಮಂಜಸ ಉತ್ತರಗಳನ್ನು ನೀಡಿ, ಅಲ್ಲಮರಿಂದಲೇ 'ಅಕ್ಕಮಹಾದೇವಿ' ಎಂದು ಕರೆಸಿಕೊಂಡು ಶ್ರೀಶೈಲದ ಕದಳಿ ವನದಲ್ಲಿ ಚನ್ನಮಲ್ಲಿಕಾರ್ಜುನನಲ್ಲಿ ಐಕ್ಯವಾಗಿರುವುದು ಐತಿಹಾಸಿಕ ಸಂಗತಿ ಎಂದರು.

ಅಕ್ಕಮಹಾದೇವಿ ವಚನ ಚಳವಳಿಯಲ್ಲಿ ಎತ್ತರದ ಚೇತನ. ಅಕ್ಕನ ಕಾಲದ ಹರಿಹರ ಮಹಾಕವಿಯು ರಚಿಸಿರುವ 'ಮಹಾದೇವಿಯಕ್ಕ ರಗಳೆ'ಗಳಲ್ಲಿ ಅಕ್ಕನ ವ್ಯಕ್ತಿತ್ವವನ್ನು ಕಟ್ಟಿ ಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ವಚನ ಚಳುವಳಿಯ ಸಮಯದಲ್ಲಿ, ಸಾಹಿತ್ಯದ ದೃಷ್ಟಿಯಿಂದ ಗಮನಿಸುವುದಾದರೆ, ಅಲ್ಲಮ ಪ್ರಭು ಮತ್ತು ಅಕ್ಕಮಹಾದೇವಿ ಅಂದಿನ ಅತ್ಯಂತ ವಿಶಿಷ್ಟ ಸಂವೇದನೆಯ ವ್ಯಕ್ತಿತ್ವದವರಾಗಿ ಗಮನ ಸೆಳೆದಿದ್ದಾರೆ ಎಂದರು.

ವಿಪ್ರ ಮುಖಂಡ ಬಿ.ಆರ್.ನಟರಾಜ್ ಜೋಯಿಸ್ ಮಾತನಾಡಿ, ಬಸವಣ್ಣ, ಅಕ್ಕ ಮಹಾದೇವಿ ಅವರ ವಚನಗಳ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿ ಸಿಕೊಂಡು ಸಮಾಜದಲ್ಲಿ ಶಾಂತಿಯುತ ಬದುಕಿಗೆ ಸಾಕ್ಷಿಯಾಗಬೇಕಿದೆ. ಅಲ್ಲದೆ, ಶರಣರಲ್ಲಿ ಬಸವಣ್ಣ ಪ್ರಮುಖರಾದಂತೆ, ಶರಣೆಯರಿಗೆ ಅಕ್ಕ ಮಹಾದೇವಿ ಆದರ್ಶರಾಗಿದ್ದಾರೆ. ಹಾಗೆಯೇ ಅಕ್ಕ ಮಹಾದೇವಿ ಸ್ತ್ರೀ ಚಳವಳಿಯ ಸ್ವಾಭಿಮಾನದ ಪ್ರತೀಕ ಎಂದರೆ ತಪ್ಪಾಗಲಾರದು ಎಂದು ಅಕ್ಕ ಮಹಾದೇವಿಯ ಸದ್ಭಾವನೆ ಪ್ರಶಸ್ತಿಯನ್ನು ಶಿಕ್ಷಣ ಕ್ಷೇತ್ರದಿಂದ ಮಂಗಳಾ ಮುದ್ದುಮಾದಪ್ಪ, ಶರಣತತ್ವ ಪ್ರಚಾರ ಹಾಗೂ ಸಂಘಟನಾ ಕ್ಷೇತ್ರದ ಶಾರದ ಶಿವಲಿಂಗಸ್ವಾಮಿ, ಪ್ರಕಾಶನ ಕ್ಷೇತ್ರದ ಎಸ್.ವಿ. ಪವಿತ್ರ ಅವರಿಗೆ ಪ್ರದಾನ ಮಾಡಲಾಯಿತು. ಈ ವೇಳೆ ರಂಗಾಯಣ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಸಮಾಜ ಸೇವಕಿ ವಿದ್ಯಾ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವ ರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ವಿವೇಕಾನಂದರ ಪರ ಮತಯಾಚನೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಗ್ರಾಮಾಂತರ ಮಂಡಲದ ವತಿಯಿಂದ ಶುಕ್ರವಾರ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ವಿವೇಕಾನಂದರ ಪರವಾಗಿ ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಶಾಲಾ ಕಾಲೇಜುಗಳಲ್ಲಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರ ಅಧ್ಯಕ್ಷ ಪೈಲ್ವಾನ್ ಟಿ.ರವಿ, ಎಸ್.ಆರ್.ಗೋಪಾಲರಾವ್, ಎನ್.ರಾಜಕುಮಾರ್, ಗೋಪಾಲಗೌಡ ಶ್ರೀನಿವಾಸ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಚಿಕ್ಕಣ್ಣ, ಮಧು, ಬ್ಯಾತಳ್ಳಿ ರೇವಣ್ಣ, ಅನಿತಾ, ಶಾಲಿನಿ ಕುಮಾರ್, ಕಿಟ್ಟಿ ಮತ್ತಿತರರು ಹಾಜರಿದ್ದರು.

ಮನೆಯವರೊಂದಿಗೆ ಮನಸ್ತಾಪ
ಗದಗದಿಂದ ಮೈಸೂರಿಗೆ ಬಂದಿದ್ದ ವೃದ್ಧ ಸುರಕ್ಷಿತವಾಗಿ ಮರಳಿಗೂಡಿಗೆ



ಮೈಸೂರು ಅರವಿಂದನಗರದಲ್ಲಿರುವ ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ಗದಗನ ಈರಪ್ಪ ಶಂಕರಪ್ಪ ನಯನಾಪುರ ಅವರನ್ನು ಕುಟುಂಬದ ಸದಸ್ಯರೊಂದಿಗೆ ಕಾಣಬಹುದು.

ಮೈಸೂರು, ಜೂ.2(ಎಸ್‌ಪಿಎನ್)– ಸಣ್ಣಪುಟ್ಟ ವಿಚಾರಗಳಿಗೆ ಮನೆಯವರೊಂದಿಗೆ ಮುನಿಸಿಕೊಂಡು ಗದಗದಿಂದ ಮೈಸೂರಿಗೆ ಬಂದಿದ್ದ ವೃದ್ಧನನ್ನು ಮನೆಯವರೊಂದಿಗೆ ರಾಜೀ ಪಂಚಾಯ್ತಿ ಮಾಡಿ ಕಳುಹಿಸಿಕೊಡಲಾಗಿದೆ. ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ಶನಿವಾರ ಈ ಪ್ರಕರಣ ಸುಖಾಂತ್ಯವಾಯಿತು.

ಗದಗ ಜಿಲ್ಲೆಯ ರೋಣ ತಾಲೂಕಿನ ಮೂಡಲಗೆರೆಯ ಈರಪ್ಪ ಶಂಕರಪ್ಪ ನಯನಾಪುರ ಅವರು, ಮೈಸೂರು ರೈಲ್ವೆ ನಿಲ್ದಾಣದಲ್ಲಿ ಮೇ 30ರಂದು ರೈಲ್ವೆ ಪೊಲೀಸರ ಕಣ್ಣಿಗೆ ಬಿದ್ದಿದ್ದರು. ಇವರನ್ನು ರೈಲ್ವೆ ಪೊಲೀಸ್ ಠಾಣೆಗೆ ಕರೆತಂದು ಪೂರ್ವ ಪರ ವಿಚಾರಿಸಿದಾಗ ಈರಪ್ಪ, ಕುಟುಂಬದವರೊಂದಿಗೆ ಜಗಳವಾಡಿಕೊಂಡು ಬಂದಿರುವುದು ಬೆಳಕಿಗೆ ಬಂದಿದೆ.

ತಕ್ಷಣ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಿಬ್ಬಂದಿ ಹಾಗೂ ಜನಸಂಗ್ರಾಮ ಪರಿಷತ್ ರಾಜ್ಯ ಉಪಾಧ್ಯಕ್ಷ ಪಾಲಹಳ್ಳಿ ಪ್ರಸನ್ನ ನೇತೃತ್ವದಲ್ಲಿ ಮೈಸೂರಿನ ಅರವಿಂದ ನಗರದಲ್ಲಿರುವ ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ಈರಪ್ಪನವರಿಗೆ ಉಳಿದುಕೊಳ್ಳಲು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದರು. ಶುಕ್ರವಾರ ಗದಗ ಜಿಲ್ಲಾಡಳಿತದ ನೆರವು ಪಡೆದು, ಈರಪ್ಪ ಮನೆಯವರನ್ನು ಸಂಪರ್ಕಿಸಿ, ಮೈಸೂರಿಗೆ ಬಂದಿರುವ ವಿಷಯ ಮುಟ್ಟಿಸಿದ್ದರು.

ಅದರಂತೆ ಶನಿವಾರ ಈರಪ್ಪ ಅವರಿಗೆ ಕೌನ್ಸೆಲಿಂಗ್ ನೀಡಿ, ಮನೆಯವರೊಂದಿಗೆ ಜಗಳವಾಡಿಕೊಂಡು ಮನೆ ಬಿಟ್ಟು ಬರದಂತೆ ಅವರಿಗೆ ಮನವರಿಕೆ ಮಾಡಿಕೊಟ್ಟು, ಕುಟುಂಬ ಸದಸ್ಯರೊಂದಿಗೆ ಜೆಎಸ್‌ಎಸ್ ವೃದ್ಧಾಶ್ರಮ ಸಿಬ್ಬಂದಿಗಳು ಮಾತುಕತೆ ನಡೆಸಿ ಸುರಕ್ಷಿತವಾಗಿ ಕಳುಹಿಸಿಕೊಟ್ಟಿದ್ದಾರೆ.

ಮರಿತಿಬ್ಬೇಗೌಡ ಪರ ಶಾಸಕ ಕೆ.ಹರೀಶ್‌ಗೌಡ ಮತಯಾಚನೆ

ಮೈಸೂರು, ಜೂ.2(ಎಸ್‌ಬಿಡಿ)– ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು ವಿವಿಧ ಶಾಲೆಗಳಿಗೆ ಭೇಟಿ ನೀಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಪರ ಮತಯಾಚಿಸಿದರು.

ನಗರದ ಸರಸ್ವತಿಪುರಂನಲ್ಲಿನ ವಿಜಯ ವಿಠಲ ಶಾಲೆ ಹಾಗೂ ರೋಟರಿ ಪಶ್ಚಿಮ ಶಾಲೆಗೆ ಭೇಟಿ ನೀಡಿದ ಅವರು, ಕಾಂಗ್ರೆಸ್ ಸರ್ಕಾರ ಶಿಕ್ಷಣದ ಪ್ರಗತಿಗೆ ಆದ್ಯತೆ ನೀಡಿ, ಕಟ್ಟಡ ಸೇರಿದಂತೆ ಶಾಲಾ–ಕಾಲೇಜುಗಳಿಗೆ ಎಲ್ಲಾ ಮೂಲ ಸೌಕರ್ಯಗಳನ್ನು ಕಲ್ಪಿಸಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸುವುದರ ಜೊತೆಗೆ ಶಿಕ್ಷಕರ ಬಗ್ಗೆಯೂ ಕಾಳಜಿ ಹೊಂದಿದೆ. ಹಾಗಾಗಿ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಿರುವ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ, ಗೆಲ್ಲಿಸುವಂತೆ ಮನವಿ ಮಾಡಿದರು.



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಶಾಸಕ ಕೆ.ಹರೀಶ್ ಗೌಡ ಹಾಗೂ ಪಕ್ಷದ ಮುಖಂಡರು ಮತಯಾಚಿಸಿದರು.

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ನಗರ ಪ್ರಧಾನ ಕಾರ್ಯದರ್ಶಿಗಳಾದ ಎಂ.ಶಿವಣ್ಣ, ಭಾಸ್ಕರ್ ಎಲ್.ಗೌಡ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಮೇಯರ್‌ಗಳಾದ ಮೋದಾಮಣಿ, ಬಿ.ಕೆ.ಪ್ರಕಾಶ್, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ರವಿ, ರಾಯಪ್ಪ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವಕ್ತಾರ ಕೆಮಹೇಶ್ ಮತ್ತಿತರರು ಪ್ರಚಾರದಲ್ಲಿ ಭಾಗಿಯಾಗಿದ್ದರು.

ಮೈಸೂರು ಪೊಲೀಸ್ ಪ್ರೀಮಿಯರ್ ಲೀಗ್ ಕ್ರಿಕೆಟ್
ಸಿಎಆರ್ ಕಿಂಗ್ಸ್ ಇಲೆವೆನ್ ಚಾಂಪಿಯನ್



ಚಾಮುಂಡಿಬೆಟ್ಟದ ತಪ್ಪಲಿನ ಫೈರಿಂಗ್ ರೇಂಜ್ ಮೈದಾನದಲ್ಲಿ ನಡೆದ ಎಂಪಿಪಿಎಲ್–4 ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ವಿಜೇತ ಹಾಗೂ ರನ್ನರ್ ಅಪ್ ಪ್ರಶಸ್ತಿ ಪಡೆದ ತಂಡಗಳು.

ಮೈಸೂರು, ಜೂ.2(ಎಂಟಿವೈ)– ಕಾನೂನು ಸುವ್ಯವಸ್ಥೆ ಕಾಪಾಡುವುದರೊಂದಿಗೆ ಬಂದೋಬಸ್ತ್ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರು ಭಾನುವಾರ ಕ್ರಿಕೆಟ್ ಆಡುವ ಮೂಲಕ ಗಮನ ಸೆಳೆದರಲ್ಲದೆ, ಪಂದ್ಯಾವಳಿಯಲ್ಲಿ ಫೈನಲ್ ಪಂದ್ಯದಲ್ಲಿ ಸಿಎಆರ್ ಕಿಂಗ್ಸ್ ಇಲೆವೆನ್ ತಂಡ, ಲಕ್ಷ್ಮೀಪುರಂ ಪೊಲೀಸ್ ಠಾಣೆಯ ಫೀನಿಕ್ಸ್ ತಂಡವನ್ನು ಮಣಿಸುವ ಮೂಲಕ ಎಂಪಿಪಿಎಲ್–4 ಚಾಂಪಿಯನ್ ಆಗಿ ಹೊರಹೊಮ್ಮಿತು.

ನಗರ ಪೊಲೀಸರ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ವಿವಿಧ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳಲಾಗಿದ್ದು, ಅದರ ಭಾಗವಾಗಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಎಂ.ಮುತ್ತುರಾಜ್, ಸಿಎಆರ್ ಡಿಸಿಪಿ ಮಾರುತಿ ಅವರ ನೇತೃತ್ವದಲ್ಲಿ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಫೈರಿಂಗ್ ರೇಂಜ್ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಮೈಸೂರು ಪೊಲೀಸ್ ಪ್ರೀಮಿಯರ್ ಲೀಗ್–4 ಕ್ರಿಕೆಟ್ ಪಂದ್ಯಾವಳಿ ಫೆಬ್ರವರಿಯಲ್ಲಿ ಆರಂಭವಾಗಿತ್ತು. ವಿವಿಧ ವಿಭಾಗಗಳ 12 ತಂಡಗಳು ಪಾಲ್ಗೊಂಡಿದ್ದ ಈ ಪಂದ್ಯಾವಳಿಯಲ್ಲಿ ನಿಗದಿತ ದಿನದಂದು ಬೆಳಗ್ಗೆ 6 ಗಂಟೆಯಿಂದ 9 ಗಂಟೆವರೆಗೆ ಕ್ರಿಕೆಟ್ ಪಂದ್ಯದಲ್ಲಿ ಪಾಲ್ಗೊಳ್ಳುತ್ತಿದ್ದ ಪೊಲೀಸರು, ಬಳಿಕ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗುತ್ತಿದ್ದರು.

ಪಂದ್ಯಾವಳಿಯಲ್ಲಿ ಒಟ್ಟು 72 ಪಂದ್ಯ ನಡೆದಿದ್ದು, ಫೈನಲ್ ಪ್ರವೇಶಿಸಿದ್ದ ಸಿಎಆರ್‌ನ ಕಿಂಗ್ಸ್ ಇಲೆವೆನ್ ತಂಡ ಹಾಗೂ ಲಕ್ಷ್ಮೀಪುರಂ ಠಾಣೆಯ ಫೀನಿಕ್ಸ್ ತಂಡದ ನಡುವೆ ನಡೆದ ಫೈನಲ್ ಪಂದ್ಯ ರೋಚಕವಾಗಿತ್ತು. ಅಂತಿಮವಾಗಿ ಸಿಎಆರ್ ಕಿಂಗ್ಸ್ ಇಲೆವೆನ್ ತಂಡ ಗೆಲುವು ಸಾಧಿಸುವ ಎಂಪಿಪಿಎಲ್–4 ಟ್ರೋಫಿ ತನ್ನದಾಗಿಸಿಕೊಂಡರೆ, ಲಕ್ಷ್ಮೀಪುರಂ ಪೊಲೀಸ್ ಠಾಣೆಯ ಫೀನಿಕ್ಸ್ ತಂಡ ರನ್ನರ್ ಅಪ್ ಆಗಿ ಹೊರಹೊಮ್ಮಿತು.

ಫೈನಲ್ ಪಂದ್ಯದ ಮ್ಯಾನ್ ಆಫ್ ದ ಮ್ಯಾಚ್ ಆಗಿ ವಿಷ್ಣು ಮಿಂಚಿದರೆ, ಬೆಸ್ಟ್ ಬ್ಯಾಟ್ಸ್‌ಮನ್ ಆಗಿ ರವೀಶ, ಬೆಸ್ಟ್ ಬೌಲರ್ ಆಗಿ ದುರ್ಗ, ಸರಣಿ ಶ್ರೇಷ್ಠರಾಗಿ ರಾಜೇಶ್ ಆಯ್ಕೆಯಾದರು. ಡಿಸಿಪಿ ಎಂ.ಮುತ್ತುರಾಜ್, ಸಶಸ್ತ್ರ ಮೀಸಲು ಪಡೆ ಡಿಸಿಪಿ ಮಾರುತಿ ಹಾಗೂ ಕಿರಣ್ ರಾಜ್ ಅವರು ಫೈನಲ್ ಪಂದ್ಯ ವೀಕ್ಷಿಸಿದರು.

ಮೈಸೂರು ಮಿತ್ರ

ಮನುಷ್ಯನಿಗೆ ಧಾರ್ಮಿಕ ಶ್ರದ್ಧೆ, ನಿಷ್ಠೆ ಬಹುಮುಖ್ಯ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ

ತಿ.ನರಸೀಪುರ, ಜೂ.2– ಮನುಷ್ಯನಿಗೆ ಧಾರ್ಮಿಕ ಶ್ರದ್ಧೆ, ನಿಷ್ಠೆ ಹಾಗೂ ಆಚರಣೆ ಬಹುಮುಖ್ಯ ಎಂದು ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠದ ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀಪಟ್ಟದ ಮಠದ ನೂತನ ಉತ್ತರಾಧಿಕಾರಿ ಹೇಮಂತ್‌ಕುಮಾರ್ ಪಟ್ಟಾಧಿಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು. ಧರ್ಮೋ ರಕ್ಷತಿ ರಕ್ಷಿತಃ ಎನ್ನುವಂತೆ ಯಾರು ಧರ್ಮವನ್ನು ಪಾಲಿಸುತ್ತಾರೋ ಅವರನ್ನು ಧರ್ಮ ಕೈ ಹಿಡಿಯುತ್ತದೆ. ಹಾಗಾಗಿ ಮನುಷ್ಯ ಧಾರ್ಮಿಕ ಮಾರ್ಗದಲ್ಲಿ ನಡೆಯಬೇಕು. ತನ್ನಲ್ಲಿರುವ ಅರಿಷಡ್ವರ್ಗ, ಮದ, ಮೋಹ ಇತ್ಯಾದಿಗಳನ್ನು ತೊರೆದು ಸನ್ಮಾರ್ಗದಲ್ಲಿ ನಡೆಯಬೇಕು ಎಂದರು.

ಮನುಷ್ಯ ಬದುಕಿನಲ್ಲಿ ಧಾರ್ಮಿಕ ಆಚರಣೆಗಳನ್ನು ಅಳವಡಿಸಿಕೊಂಡರೆ ಸಂತೋಷದಿಂದ ಇರಲು ಸಾಧ್ಯ. ಧಾರ್ಮಿಕ ಆಚರಣೆಯಿಂದ ಜನರ ಮನಸ್ಸಿನಲ್ಲಿ ಆತನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುತ್ತದೆ ಎಂದರು.

ವಿಭೂತಿ ಧರಿಸುವವರ ಬಗ್ಗೆ ಉದಾಹರಣೆ ಸಹಿತ ವಿವರಣೆ ನೀಡಿದ ಶ್ರೀಗಳು ಜನರಲ್ಲಿ ಧಾರ್ಮಿಕ ಪ್ರಜ್ಞೆ ಉಂಟು ಮಾಡುವ ಕರ್ತವ್ಯ ಮಠಗಳು, ಧಾರ್ಮಿಕ ಸಂಸ್ಥೆಗಳು ಹಾಗೂ ಸಂಘಟನೆಗಳದ್ದಾಗಿದೆ. ಜನರಿಗೆ ಶಿಕ್ಷಣ ನೀಡಿ ಅವರ ಮನಸ್ಸನ್ನು ವಿಕಾಸಗೊಳಿಸುವುದು ಹಾಗೂ ಅವರ ಮನಸ್ಸಿನ ದುಃಖ ನಿವಾರಣೆ ಮಾಡುವ ಜವಾಬ್ದಾರಿ ಮಠಗಳದ್ದಾಗಿದೆ ಎಂದರು.

ರಾಜ್ಯದಲ್ಲಿ ವೀರಶೈವ, ಒಕ್ಕಲಿಗ ಸೇರಿದಂತೆ ಇತರೆ ಸಮಾಜದ ಸಾವಿರಾರು ಮಠಗಳಿವೆ. ಅವೆಲ್ಲವೂ ಜನರ ಕಲ್ಯಾಣ ದೃಷ್ಟಿಯಿಂದ ಸೇವೆಯಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದಾಗಿದೆ. ಅಂತಹ ಮಠಗಳಲ್ಲಿ ಬೆನಕನಹಳ್ಳಿ ಮಠವೂ ಒಂದಾಗಿದೆ ಎಂದರು.

ಸನ್ಯಾಸತ್ವ ಸುಲಭದ ಸಂಗತಿಯಲ್ಲ: ಸನ್ಯಾಸತ್ವ ಸ್ವೀಕರಿಸುವುದು ಸುಲಭದ ಸಂಗತಿಯಲ್ಲ. ಸನ್ಯಾಸಿಯಾದವನು ಎಲ್ಲವನ್ನು ತ್ಯಾಗ ಮಾಡಿ ಸಮಾಜಕ್ಕೋಸ್ಕರ ತನ್ನನ್ನು ಸಮರ್ಪಣೆ ಮಾಡಿಕೊಳ್ಳಬೇಕು. ಆ ಕೆಲಸ ಎಲ್ಲರಿಗೂ ಸಾಧ್ಯವಾಗದು. ಜಗತ್ತಿನಲ್ಲಿ ಸಂತರಾಗಿರುವವರೆಲ್ಲಾ ಕುಟುಂಬದಿಂದ ಹೊರಬಂದವರಾಗಿದ್ದಾರೆ. ಬೆನಕನಹಳ್ಳಿ ಮಠಕ್ಕೆ ಕೊಳ್ಳೇಗಾಲ ತಾಲೂಕು ಲಕ್ಕರಸಪಾಳ್ಯದ ಪ್ರಭುಸ್ವಾಮಿ ಮತ್ತು ಸರ್ವಮಂಗಳ ಅವರು ತಮ್ಮ ಪುತ್ರ ಹೇಮಂತ್ ಕುಮಾರ್ ಅವರನ್ನು ವಟುವಾಗಿ ದೀಕ್ಷೆ ಕೊಡಿಸಲು ಮುಂದಾಗಿದ್ದಾರೆ. ಮುಂದೆ ಇವರು ಇಮ್ಮಡಿ ಬಸವಲಿಂಗಸ್ವಾಮಿಗಳಾಗಿ ಮುಂದುವರೆಯಲಿದ್ದಾರೆ. ಗ್ರಾಮಸ್ಥರು ನೂತನ ಸ್ವಾಮಿಗಳನ್ನು ತಮ್ಮ ಗ್ರಾಮದ ಮಗನಂತೆ ನೋಡಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರಿನ ಸುತ್ತೂರು ಶಾಖಾ ಮಠದ ಶಿವರಾತ್ರೀಶ್ವರ ಗುರುಕುಲದಲ್ಲಿ ವ್ಯಾಸಂಗ ಮಾಡುತ್ತಿರುವ ಕೊಳ್ಳೇಗಾಲ ತಾಲೂಕು ಲಕ್ಕರಸನಹಳ್ಳಿಯ ಹೇಮಂತ್‌ಕುಮಾರ್ ಎಂಬ ವಟುವಿಗೆ ವಿಧ್ಯುಕ್ತವಾಗಿ ಷಟ್ಸ್ಥಲ ಬ್ರಹ್ಮೋಪದೇಶದ ಮೂಲಕ ಸುತ್ತೂರು ಶಿವರಾತ್ರಿದೇಶಿಕೇಂದ್ರ ಸ್ವಾಮಿಗಳು ಬೆನಕನಹಳ್ಳಿ ಶ್ರೀಮಠದ ಉತ್ತರಾಧಿಕಾರಿಯಾಗಿ ನೇಮಕ ಮಾಡಿ ಆಶೀರ್ವದಿಸಿದರು. ಇದೇ ವೇಳೆ ಮಠದಲ್ಲಿ ನಿರ್ಮಿಸಲಾದ ಬಸವಮೂರ್ತಿ ಅನಾವರಣ ಹಾಗೂ ಸಭಾಭವನ ಉದ್ಘಾಟಿಸಲಾಯಿತು.

ವಾಟಾಳು ಮಠದ ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣಸ್ವಾಮಿ, ಮಲೆ ಮಹದೇಶ್ವರಬೆಟ್ಟದ ಸಾಲೂರು ಬೃಹನ್ಮಠದ ಮಹದೇವಸ್ವಾಮಿ, ದೇವನೂರು ಮಠದ ಮಹಾಂತ ಸ್ವಾಮಿ, ನೀಲಕಂಠಸ್ವಾಮಿ ಮಠದ ಸಿದ್ದಮಲ್ಲಸ್ವಾಮಿ, ಮಲ್ಲನಮೂಲೆ ಮಠದ ಚನ್ನ ಬಸವಸ್ವಾಮಿ, ಆದಿ ಚುಂಚನಗಿರಿ ಶಾಖಾಮಠದ ಸೌಮ್ಯನಾಥ ಸ್ವಾಮಿ, ಕುಂದೂರು ಮಠದ ಡಾ.ಶರತ್‌ಚಂದ್ರ ಸ್ವಾಮಿ, ಸೋಮನಹಳ್ಳಿ ಸಿದ್ದಮಲ್ಲಸ್ವಾಮಿ, ಮಾದ್ರಹಳ್ಳಿ ಮಠದ ಶಾಂತಮಲ್ಲಿಕಾರ್ಜುನಸ್ವಾಮಿ, ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮಿ, ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮಿ, ಪಡಗೂರಿನ ಶಿವಲಿಂಗೇಂದ್ರ ಸ್ವಾಮಿ, ಕುದೇರು ಮಠದ ಗುರು ಶಾಂತಸ್ವಾಮಿ, ಕಾರಾಪುರ ಮಠದ ಬಸವರಾಜ ಸ್ವಾಮಿ, ಬರಡನಪುರದ ಪರಶಿವಮೂರ್ತಿಸ್ವಾಮಿ, ಬೆಟ್ಟದಪುರದ ಚೆನ್ನಬಸವ ದೇಶಿಕೇಂದ್ರ ಸ್ವಾಮಿ, ಮುಡಿಗುಂಡದ ಶ್ರೀಕಂಠಸ್ವಾಮಿ, ನಿಲಸೋಗೆ ದಾಸೋಹ ಮಠದ ಮಲ್ಲಪ್ಪಸ್ವಾಮಿ, ಹೊಸೂರುಂಡಿ ಮಠದ ರಾಜಶೇಖರಸ್ವಾಮಿ, ಸೇತುವೆ ಮಠದ ಸಹಜಾನಂದಸ್ವಾಮಿ, ವೀರಪ್ಪ ಒಡೆಯರ ಹುಂಡಿಯ ರೇಣುಕಾ ಶಿವಾಚಾರ್ಯಸ್ವಾಮಿ, ಚಿಕ್ಕತುಪ್ಪೂರು ಮಠದ ಚನ್ನ ವೀರಸ್ವಾಮಿ, ಬಿ.ಜಿ.ಪುರ ಹೊರಮಠದ ಚಂದ್ರಶೇಖರ ಸ್ವಾಮಿ, ಹುಲ್ಲಹಳ್ಳಿ ವಿರಕ್ತ ಮಠದ ಚನ್ನ ಮಲ್ಲ ದೇಶಿಕೇಂದ್ರಸ್ವಾಮಿ ಸೇರಿದಂತೆ ಇನ್ನಿತರರಿದ್ದರು.



ಬೆನಕನಹಳ್ಳಿಯಲ್ಲಿ ನಡೆದ ಪಟ್ಟಾಧಿಕಾರ ಮಹೋತ್ಸವ, ಬಸವಮೂರ್ತಿ ಅನಾವರಣ ಹಾಗೂ ಸಭಾ ಭವನವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

> ಗ್ರಾಮಸ್ಥರ ಇಚ್ಛೆ ಮೇರೆಗೆ ಸುತ್ತೂರುಶ್ರೀಗಳು ಗ್ರಾಮಕ್ಕೆ ವಟುವನ್ನು ಹುಡುಕಿ ಉತ್ತರಾಧಿಕಾರಿಯಾಗಿ ನೇಮಕ ಮಾಡಿದ್ದಾರೆ. ಜಗತ್ತಿನ ಯಾವುದೇ ಭಾಗಗಳಿಗೆ ಹೋದರೂ ಸುತ್ತೂರು ಮಠ ಎಂದರೆ ಪೂಜ್ಯ ಭಾವನೆ ಇದೆ. ಸುತ್ತೂರು ಶಾಖಾ ಮಠವೇ ಬೆನಕನಹಳ್ಳಿ ಗ್ರಾಮದಲ್ಲಿದೆ ಎಂದರೆ ಅದು ಗ್ರಾಮದ ಸೌಭಾಗ್ಯ. ಜಗದ್ಗುರುಗಳ ಆಶೀರ್ವಾದ ಯಾವಾಗಲೂ ಗ್ರಾಮಕ್ಕೆ ಇದ್ದೇ ಇರುತ್ತದೆ.
>
> – ಶ್ರೀಗೌರಿಶಂಕರಸ್ವಾಮೀಜಿ, ಎಂ.ಎಲ್.ಹುಂಡಿ ಬೆಟ್ಟದ ಮಠ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ
ಸ್ಕ್ರೀನ್ 3	ಛೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೊನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಳಗೆರೆಯಲ್ಲಿ ಅದ್ಧೂರಿ ಬಸವ ಜಯಂತಿ



ಮಲ್ಲುಂಡಿ, ಜೂ.2– ನಂಜನಗೂಡು ತಾಲೂಕಿನ ವಳಗೆರೆ ಗ್ರಾಮದಲ್ಲಿ ಭಾನುವಾರ ಬಸವ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಬಸವ ಜಯಂತಿ ಅಂಗವಾಗಿ ಗ್ರಾಮದ ಬೀದಿಗಳನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಬಳಿಕ ನಂದಿ ಕಂಬ, ವೀರಗಾಸೆ ಕುಣಿತದೊಂದಿಗೆ ಬಸವಣ್ಣನವರ ಪುತ್ಥಳಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ಕುರಹಟ್ಟಿ ಮಠದ ಮಾದಪ್ಪ ಸ್ವಾಮೀಜಿ ಹಾಗೂ ನವಿಲೂರು ಮಠದ ಚನ್ನಬಸವ ಸ್ವಾಮೀಜಿ ಮಾತನಾಡಿ, ಬಸವಣ್ಣ ಹಾಗೂ ಶರಣ ಸಮಾಜ ಹೇಳುವ ಕಾಯಕ ಕರ್ಮಕ್ಕಿಂತಲೂ ಮಿಗಿಲಾದುದು. ಕಾಯಕದ ಜೊತೆಗೆ ನಿಸ್ವಾರ್ಥ ದಾಸೋಹವು ಇರಬೇಕು. ದಾಸೋಹ ಇಲ್ಲವಾದರೆ ಕಾಯಕವೆಂಬುದು ಪೂರ್ಣವಾಗುವುದಿಲ್ಲ. ನಾನು ಎಂಬ ಭಾವನೆ ದಾಸೋಹದಲ್ಲಿ ಬರಬಾರದು. ಶಿವ ಎಂದರೆ ಮಂಗಳ ಹಾಗೂ ಕಲ್ಯಾಣಕಾರಕ. ಮಂಗಳ ಹಾಗೂ ಕಲ್ಯಾಣಕರವಾದ ಕಾಯಕ ಶಿವನಿಗೆ ಅರ್ಪಿತ ಎಂಬುದನ್ನು ವಚನಕಾರ ನುಲಿಯ ಚಂದಯ್ಯರು ಹೇಳುತ್ತಾರೆ. ದುರಾಸೆ ಹೋಗಲಾಡಿಸಬೇಕೆನ್ನುವ ಕಾಯಕ ಸಿದ್ಧಾಂತ ಕೊಡುವ ಆರ್ಥಿಕ ನೀತಿ ಬಹಳ ವಿಶೇಷವಾಗಿದೆ ಎಂದರು. ಇದೇ ವೇಳೆ ಬಸವ ಬಳಗದ ಯುವಕರು, ಗ್ರಾಮಸ್ಥರು ಹಾಜರಿದ್ದರು.

ಡಾ.ಅಂಬೇಡ್ಕರ್ ಮಂಟಪಕ್ಕೆ ಜಾಮೀಯಾ ಮಸೀದಿಯಿಂದ ನೆರವು



ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಗೋಪುರ ಮಂಟಪ ನಿರ್ಮಾಣಕ್ಕೆ ಕಟ್ಟೆ ಮಳಲವಾಡಿ ಜಾಮಿಯಾ ಮಸೀದಿ ಕಮಿಟಿಯಿಂದ 50,000 ರೂ.ಗಳ ಸಹಾಯ ಧನದ ಚೆಕ್ ಅನ್ನು ಪುತ್ಥಳಿ ನಿರ್ಮಾಣದ ಕಮಿಟಿ ಅಧ್ಯಕ್ಷರಿಗೆ ನೀಡಲಾಯಿತು.

ಜಾಮಿಯಾ ಮಸೀದಿ ಕಮಿಟಿ ಅಧ್ಯಕ್ಷ ಸಹ ಬಾಷ್ ಮಾತನಾಡಿ, ದೇಶಕ್ಕೆ ಸಂವಿಧಾನ ನೀಡಿದ ಮಹಾನ್ ಪುರುಷರ ಪುತ್ಥಳಿ ಗೋಪುರ ನಮ್ಮ ಗ್ರಾಮದಲ್ಲಿ ಜಾತ್ಯತೀತವಾಗಿ ನಿರ್ಮಾಣವಾಗುತ್ತಿದೆ. ಸೌಹಾರ್ದಯುತವಾಗಿ ಬದುಕಿರುವ ನಾವು ಜಾತಿ ಧರ್ಮ ಮೀರಿ ಬದುಕುತ್ತಿದ್ದೇವೆ. ನಮ್ಮ ಗ್ರಾಮದಲ್ಲಿ ಇಂತಹ ಒಳ್ಳೆಯ ಕೆಲಸಕ್ಕೆ ನಮ್ಮ ಸಮುದಾಯ ಸದಾ ಸಹಾಯ ಮಾಡಲಿದೆ ಎಂದರು. ಗೋಪುರ ನಿರ್ಮಾಣದ ಕಮಿಟಿ ಅಧ್ಯಕ್ಷ ನಾಗರಾಜ್ ಮಲ್ಲಾಡಿ ಮಾತನಾಡಿ, ಎಲ್ಲಾ ವರ್ಗದ ಜನರು ಹಾಗೂ ಉದ್ಯಮಿಗಳು ಜನ ಪ್ರತಿನಿಧಿಗಳು ಸಹಾಯ ಮಾಡುತ್ತಿದ್ದು ನಿರ್ಮಾಣ ಕಾರ್ಯ ಅಂತಿಮ ಘಟ್ಟ ತಲುಪಿದ್ದು ಶೀಘ್ರದಲ್ಲೇ ಉದ್ಘಾಟನೆಗೊಳ್ಳಲಿದೆ ಎಂದರು.

ಈ ವೇಳೆ ಜಾಮಿಯಾ ಮಸೀದಿ ಕಮಿಟಿ ಉಪಾಧ್ಯಕ್ಷ ಕಾರ್ಯದರ್ಶಿ ಇಬ್ರಾನ್ ಅಹಮದ್, ಖಜಾಂಚಿ ಅಲ್ತಾಫ್ ಪಾಷಾ, ನಿರ್ದೇಶಕ ಅನ್ಸಾರ್ ಅಹಮದ್, ಗೋಪುರ ಕಮಿಟಿಯ ಸಹ ಕಾರ್ಯದರ್ಶಿ ಪುಟ್ಟರಾಜ, ಗ್ರಾಪಂ ಉಪಾಧ್ಯಕ್ಷ ದಿಲೀಪ್, ರೈತ ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಶ್ರೀಧರ್, ನಿರ್ದೇಶಕ ಶಿವರಾಜ್ ಸೇರಿದಂತೆ ಹಲವರಿದ್ದರು.

ಭಾರಿ ಮಳೆ: ಕೊಚ್ಚಿ ಹೋದ ಬೆಳೆ, ಅಪಾರ ನಷ್ಟ

ಹನಗೋಡು, ಜೂ.2– ಶನಿವಾರ ಸಂಜೆ ಸುರಿದ ಜೋರು ಮಳೆಗೆ ಅಪಾರ ಪ್ರಮಾಣದ ಬೆಳೆ ಕೊಚ್ಚಿ ಹೋಗಿ ಭಾರಿ ನಷ್ಟ ಸಂಭವಿಸಿದೆ.

ಕಳೆದ ನಾಲ್ಕೈದು ದಿನಗಳಿಂದ ಬಿಡುವು ನೀಡಿದ್ದ ಮಳೆ ಶನಿವಾರ ಸಂಜೆ ಭಾರಿ ಪ್ರಮಾಣದಲ್ಲಿ ಸುರಿದಿದ್ದರಿಂದ ಪೆಂಜಹಳ್ಳಿ, ಹರಳಹಳ್ಳಿ, ಕಿರಂಗೂರು, ಹಿಂಡಗೂಡ್ಲು ಸುತ್ತಮುತ್ತಲ ಜಮೀನಿನಲ್ಲಿ ಮಳೆ ನೀರು ನಿಂತು ಬೆಳೆ ಹಾನಿಯಾಗಿದೆ.

ಈ ಭಾಗದ ನೂರಾರು ಮಂದಿ ತಮ್ಮ ಜಮೀನುಗಳಲ್ಲಿ ತಂಬಾಕು ಸಸಿ ನಾಟಿ ಮಾಡಿ ಗೊಬ್ಬರ ಹಾಕಿದ್ದರು. ಆದರೆ ಶನಿವಾರ ಸಂಜೆ ಸುರಿದ ಮಳೆಯಿಂದಾಗಿ ನೂರಾರು ಎಕರೆ ಪ್ರದೇಶದಲ್ಲಿ ನಾಟಿ ಮಾಡಿದ್ದ ತಂಬಾಕು ಸಸಿ ನಾಶವಾಗಿದೆ. ಅಲ್ಲಲ್ಲಿ ಶುಂಠಿ ಬೆಳೆಗೂ ಹಾನಿಯಾಗಿದೆ. ಶುಂಠಿ ಕೃಷಿಗಾಗಿ ಅಳವಡಿಸಿದ್ದ ತುಂತುರು ನೀರಾವರಿ ಪರಿಕರಗಳಿಗೂ ಹಾನಿಯಾಗಿವೆ. ಕಿರಂಗೂರು ಗ್ರಾಮದ ಶಿವು, ರಾಜೇಗೌಡ, ಬಸವೇಗೌಡ, ಶಿವರಾಜೇಗೌಡ ಸೇರಿದಂತೆ ಇತರ ರೈತರ ತಂಬಾಕು, ಶುಂಠಿ ಬೆಳೆಗೆ ಹಾನಿಯಾಗಿದೆ.


ಹರಳಹಳ್ಳಿ ಮಾದಳ್ಳಿಕಟ್ಟೆ, ಹುಲಿಕೆರೆ, ಆದ್ವಾಳಕೆರೆ ಸೇರಿದಂತೆ ಬಹುತೇಕ ಕೆರೆಕಟ್ಟೆಗಳು ಭರ್ತಿಯಾಗಿವೆ. ದೊಡ್ಡ ಕೆರೆಗಳಿಗೂ ಸಾಕಷ್ಟು ನೀರು ಹರಿದು ಬಂದಿದೆ. ಕಿರಂಗೂರಿನ ಶಿವು ಅವರ ತೋಟದಲ್ಲಿ ಅಪಾರ ಪ್ರಮಾಣದ ನೀರು ಹರಿದು ಬಂದು ಕಟ್ಟೆಯನ್ನೇ ಒಡೆದು ಹಾಕಿದೆ. ಶುಂಠಿ ಸಂಪೂರ್ಣ ಕೊಚ್ಚಿ ಹಾಕಿದೆ.



ಶನಿವಾರ ಸಂಜೆ ಬಿದ್ದ ಭಾರಿ ಮಳೆಗೆ ಬೆಳೆ ಹಾನಿಯಾಗಿರುವುದು

ಆಸೆ, ಆಮಿಷ ಬಿಟ್ಟು ಶರಣರ ಆದರ್ಶ ಮೈಗೂಡಿಸಿಕೊಳ್ಳಿ

ಆಧ್ಯಾತ್ಮ ಚಿಂತಕ ಶಂಕರ್ ದೇವನೂರು



ಅಕ್ಕ, ಅಲ್ಲಮ, ಬಸವಣ್ಣ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಮಾತನಾಡಿದರು.

ನಂಜನಗೂಡು, ಜೂ.2– ಜಾತಿ, ಕುಲ, ಭಿನ್ನತೆ ಮೀರಿದ ಜೀವನ ನಮ್ಮದಾಗಿಸಿಕೊಂಡಾಗ ಮಾತ್ರ ಬಸವಾದಿ ಶರಣರ ತತ್ವಗಳು ನಮ್ಮ ಒಳಹೊಕ್ಕಲು ಸಾಧ್ಯ ಎಂದು ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ತಿಳಿಸಿದರು.

ನಗರದ ವಿದ್ಯಾನಗರ ಬಡಾವಣೆಯಲ್ಲಿ ಕದಲಿ ಮಹಿಳಾ ವೇದಿಕೆ ಹಾಗೂ ಗಂಗಾಂಬಿಕೆ ಮಹಿಳಾ ಬಳಗದಿಂದ ಭಾನುವಾರ ಸಂಜೆ ನಡೆದ ಅಕ್ಕ ಅಲ್ಲಮ, ಬಸವ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ, ಕುಲ, ಭಿನ್ನತೆ ಮೀರಿದ ಬದುಕು ನಮ್ಮದಾದಾಗ ಮಾತ್ರ ಬಸವಾದಿ ಶರಣರ ಚಿಂತನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ 12ನೇ ಶತಮಾನದಲ್ಲಿ ವೈಜ್ಞಾನಿಕ, ಆಧ್ಯಾತ್ಮಿಕ, ಸೃಜನಶೀಲತೆ, ನೈತಿಕತೆ ಬಲವಾಗಿತ್ತು. ಪ್ರಸ್ತುತ ಅವೆಲ್ಲವೂ ಕುಸಿಯುತ್ತಿವೆ. ಮಾತಿನ ಮಂಟಪದಿಂದ ಶರಣ ಧರ್ಮ ಉಳಿಸಲು ಸಾಧ್ಯವಿಲ್ಲ. ನಮ್ಮ ನಡೆ ನುಡಿಯಲ್ಲಿ ಶರಣ ಚಿಂತನೆಗಳು ಹಾಸುಹೊಕ್ಕಬೇಕು. ನೋಡುವ ನೋಟ, ಆಡುವ ಮಾತು, ಕಾಣುವ ಭಾವ ಶುದ್ಧವಾಗಿರಬೇಕು. ಮಾತು ಕಾಯಬೇಕೇ ಹೊರತು ಕೊಲ್ಲಬಾರದು. ಆಸೆ, ಆಮಿಷಗಳಿಗೆ ಬಲಿಯಾಗುವುದನ್ನು ಬಿಟ್ಟರೆ ಶರಣರ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯ ಎಂದರು.

12ನೇ ಶತಮಾನ ಜಾತಿ, ಲಿಂಗ, ವರ್ಗ, ಕಾಯಕ ಭೇದವಿಲ್ಲದ ಕಲ್ಯಾಣ ರಾಜ್ಯವಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಟ್ಟಿದ್ದರು. ಪ್ರಜಾಪ್ರಭುತ್ವದಲ್ಲಿ ಪ್ರಭುಗಳು ಪ್ರಜೆಗಳಂತೆ ಬಾಳ್ವಿಕೆ ಮಾಡಬೇಕೆ ಹೊರತು ಆಳ್ವಿಕೆ ಮಾಡಬಾರದು ಎಂಬ ನೈತಿಕ ಪ್ರಜ್ಞೆಯನ್ನು ಶರಣರು ಮೂಡಿಸಿದ್ದರು. ಇಂಗ್ಲೆಂಡಿನ ಸಂಸತ್ ಸಭಾಪತಿಯಾಗಿದ್ದ ಜಾನ್ ಬಾರ್ಕೆ ಬಸವಣ್ಣ ಅವರ ಮಾನವೀಯ ಮೌಲ್ಯಗಳ ಬಗ್ಗೆ ಮಾತನಾಡಿದ್ದಾರೆ. ಭಾರತೀಯ ಸಂವಿಧಾನದ ಆಶಯಗಳೂ ಕೂಡ ಶರಣರ ವಚನಗಳ ಆಶಯಗಳೇ ಆಗಿವೆ ಎಂದರು.


ಇಡೀ ಜಗತ್ತು ಕಾಯಕ ತತ್ವದ ಮೇಲೆಯೇ ನಿಂತಿದೆ. ಕಾಯಕವನ್ನೇ ಮೂಲದ್ರವ್ಯವಾಗಿಸಿಕೊಂಡು ತತ್ವಾದರ್ಶಗಳನ್ನು ಜಗತ್ತಿಗೆ ಸಾರಿದವರು ಬಸವಣ್ಣ. ಜನಸಾಮಾನ್ಯರು ಆಡುವ ನುಡಿಗಳಲ್ಲೇ ತತ್ವಗಳನ್ನು ಸಾರಿ ಸಾಮಾನ್ಯರಲ್ಲಿ ಅಸಾಮಾನ್ಯರಾಗಿ ಭಾಷೆಯನ್ನು ಸಾಕ್ಷಾತ್ಕಾರಗೊಳಿಸಿದ ಬಸವಣ್ಣ ಈ ನೆಲದ ಅಸ್ಮಿತೆ. ಗುಡಿಸಲಿನಲ್ಲಿ ಹುಟ್ಟಿ ಬಂಗಲೆಯಲ್ಲಿ ಸಾಯುವುದು ಜೀವನವಲ್ಲ. ಗುಡಿಸಲಿನಲ್ಲಿ ಹುಟ್ಟಿ ಚರಿತ್ರೆ ಸೃಷ್ಟಿಸುವುದು ಜೀವನ. ಅದರಂತೆ ಆಸೆ, ಆಮಿಷಗಳಿಗೆ ಬಲಿಯಾಗದೇ ಸಮ ಸಮಾಜ ನಿರ್ಮಾಣ ಮಾಡುವ ಕನಸು ಹೊತ್ತಿದ್ದ ಶರಣರು ಸರ್ವಕಾಲಕ್ಕೂ ಜೀವಂತವಾಗಿದ್ದಾರೆ ಎಂದರು ಹೇಳಿದರು.

ಕದಳಿ ಮಹಿಳಾ ವೇದಿಕೆ ಸಂಸ್ಥಾಪಕ ಕಲ್ಮಹಳ್ಳಿ ನಟರಾಜು ಮಾತನಾಡಿ, ಕಾಯಕ, ದಾಸೋಹ, ಆಧ್ಯಾತ್ಮಿಕ ಶರಣರನ್ನು ನಾಡಿಗೆ ನೀಡಿದ ಕೀರ್ತಿ ಮೈಸೂರು ಜಿಲ್ಲೆಗೆ ಸಲ್ಲುತ್ತದೆ. ತ್ರಿವಿಧ ದಾಸೋಹ, ಕಾಯಕ ಕಲ್ಪನೆ ಅನುಸರಿಸಿಕೊಂಡು ಬರುತ್ತಿರುವ ದೇವನೂರು ಮಠ, ಸುತ್ತೂರು ಮಠ, ಗುರುಕಂಬಳೀಶ್ವರ ಮಠಗಳ ಸೇವೆ ಅನನ್ಯ ಈ ಮಠಗಳಲ್ಲಿ ಶತಮಾನಗಳಿಂದ ಹಚ್ಚಿದ ಜ್ಞಾನ, ದಾಸೋಹ ದೀವಿಗೆ ಪಸರಿಸುತ್ತಲೇ ಇದೆ ಎಂದರು.

ಕಾರ್ಯಕ್ರಮದಲ್ಲಿ ಚೂಡಾಮಣಿ ಅವರು ವಚನ ಗಾಯನ ನಡೆಸಿಕೊಟ್ಟರು. ಇದೇ ಸಂದರ್ಭ ಬಸವ ಭೂಷಣ ಪ್ರಶಸ್ತಿಗೆ ಭಾಜನರಾದ ಕಲ್ಮಹಳ್ಳಿ ನಟರಾಜು ಅವರನ್ನು ಸನ್ಮಾನಿಸಲಾಯಿತು.

ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಮೀನಾಕ್ಷಿ ನಂದಿನಿ, ಕಾರ್ಯದರ್ಶಿ ಸುಮಾವತಿ, ಸದಸ್ಯರಾದ ಗೀತಾ, ಬೇಬಿ, ಪವಿತ್ರ, ಮಂಜುಳ, ಶೋಭಾ, ಸುಜಾತ, ಅನುರಾಗ ಮಕ್ಕಳ ಮನೆ ಸಂಸ್ಥಾಪಕ ಡಿ.ಜಿ.ಸೋಮಶೇಖರಮೂರ್ತಿ, ಮಶಿವಲಿಂಗಪ್ಪ, ಗುರುಮಲ್ಲಪ್ಪ ಸೇರಿದಂತೆ ಇತರರಿದ್ದರು.

ಶಿವಕುಮಾರ್ ನಿಧನ



ಸುತ್ತೂರು, ಜೂ.2– ನಂಜನಗೂಡು ತಾಲೂಕಿನ ಕುಪ್ಪರವಳ್ಳಿ ಗ್ರಾಮದ ನಿವಾಸಿ ಶಿವಕುಮಾರ್(55) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಟ್ಟದಪುರದಲ್ಲಿ ಕೆ.ವಿವೇಕಾನಂದ ಪರ ಮತಯಾಚನೆ



ವಿಧಾನಪರಿಷತ್ ದಕ್ಷಿಣ ಪದವೀಧರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಬೆಟ್ಟದಪುರದ ಸರ್ಕಾರಿ ಪ್ರೌಢಶಾಲೆ, ಎಸ್‌ಎಂಎಸ್ ಪ್ರೌಢಶಾಲೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರು ಮತ್ತು ಶಿಕ್ಷಕರನ್ನು ಭೇಟಿ ಮಾಡಿ ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ ಅವರ ನೇತೃತ್ವದಲ್ಲಿ ಮತಯಾಚಿಸಲಾಯಿತು. ಈ ವೇಳೆ ಮುಖಂಡರಾದ ಆರ್.ಟಿ.ಸತೀಶ್, ಸುನೀಲ್ ಕುಮಾರ್, ಲೋಕಪಾಲಯ್ಯ, ಕಿರಣ್, ಜೈರಾಮೇಗೌಡ, ಚಂದ್ರು, ಎಸ್.ಮಲ್ಲೇಶ್, ಮಹಮ್ಮದ್ ರಿಯಾಜ್ ಸೇರಿದಂತೆ ಇನ್ನಿತರರಿದ್ದರು.

ಚಿದಾನಂದ ಸಾಧನೆ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆ

ಅಭಿನಂದನಾ ಸಮಾರಂಭದಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅಭಿಪ್ರಾಯ



ಯುಪಿಎಸ್‌ಸಿಯಲ್ಲಿ 120ನೇ ರ್‍ಯಾಂಕ್ ಪಡೆದ ಚಿದಾನಂದ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಜೂ.2– ಚಿದಾನಂದ ಸಾಧನೆ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅಭಿಪ್ರಾಯಪಟ್ಟರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕು ನಾಯಕ ಸಮಾಜದ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಯುಪಿಎಸ್‌ಸಿ ಪರೀಕ್ಷೆಯಲ್ಲಿ 120ನೇ ರ್‍ಯಾಂಕ್ ಪಡೆದ ಹೆಚ್.ಎಸ್.ಚಿದಾನಂದ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಚಿದಾನಂದ ಅವರು ಭಾರತೀಯ ಲೋಕಸೇವಾ ಆಯೋಗ ಪರೀಕ್ಷೆಯಲ್ಲಿ ಐಎಫ್‌ಎಸ್ (ಇಂಡಿಯನ್ ಫಾರೆಸ್ಟ್ ಸರ್ವಿಸ್) 120ನೇ ರ್‍ಯಾಂಕ್ ಪಡೆದಿರುವುದು ತಾಲೂಕಿಗೆ ಹಾಗೂ ನಾಯಕ ಸಮುದಾಯಕ್ಕೆ ಕೀರ್ತಿ ಬಂದಂತಾಗಿದೆ ಎಂದರು.

ಗ್ರಾಮೀಣ ಮಕ್ಕಳಲ್ಲೂ ಕೂಡ ಉತ್ತಮ ಪ್ರತಿಭೆ ಇದೆ ಎನ್ನುವುದಕ್ಕೆ ಚಿದಾನಂದ ಅವರ ಸಾಧನೆಯೇ ಸಾಕ್ಷಿ. ಹೀಗಾಗಿ ಅದನ್ನು ಹೊರತರುವ ಕೆಲಸವನ್ನು ಪೋಷಕರು ಮತ್ತು ಶಿಕ್ಷಕರು ಮಾಡಬೇಕು ಎಂದ ಅವರು, ಸಾಧನೆ ಮಾಡಿರುವ ಚಿದಾನಂದ ಅವರ ತಂದೆ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವೆಂಕಟ ಸುಬ್ಬನಾಯಕ ಅವರ ಪುತ್ರ ಎನ್ನುವುದು ಕೂಡ ಹೆಮ್ಮೆ ಎಂದರು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ತಾಲೂಕಿನಲ್ಲಿ ಪದವೀಧರರ ಸಂಖ್ಯೆ ಹೆಚ್ಚುತ್ತಿರುವುದು ಸಂತಸದ ವಿಚಾರ. ವಿದ್ಯಾರ್ಥಿಗಳು ಪದವಿ ಮುಗಿಸಿದರೆ ಸಾಲದು, ಕೌಶಲ್ಯಾಧಾರಿತ ತರಬೇತಿಗಳನ್ನು ಪಡೆಯಬೇಕು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹೆಚ್.ಎಸ್.ಚಿದಾನಂದ್ ತಮ್ಮ ಬಾಲ್ಯ ಜೀವನವನ್ನು ಮೆಲಕು ಹಾಕುವ ಮೂಲಕ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಸಾಕಷ್ಟು ಶ್ರಮ ಪಟ್ಟಿದ್ದೇನೆ. ವಿದ್ಯಾಭ್ಯಾಸದ ವೇಳೆ ಶ್ರಮಪಟ್ಟರೆ ಮುಂದಿನ ದಿನಗಳಲ್ಲಿ ನಮಗೆ ಉತ್ತಮ ಭವಿಷ್ಯ ಸಿಗಲಿದೆ ಎಂದರು.

ಇದೇ ವೇಳೆ ಯುಪಿಎಸ್‌ಸಿಯಲ್ಲಿ 120ನೇ ರ್‍ಯಾಂಕ್ ಪಡೆದ ಹೆಚ್.ಎಸ್. ಚಿದಾನಂದ, ತಂದೆ ವೆಂಕಟಸುಬ್ಬನಾಯಕ ಹಾಗೂ ತಾಯಿ ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ತಾಲೂಕು ನಾಯಕ ಸಂಘದ ಅಧ್ಯಕ್ಷ ದೊಡ್ಡನಾಯಕ, ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ, ಸಹ ಕಾರ್ಯದರ್ಶಿ ಜಿಯಾರ ನಾಗನಾಯ್ಕ, ಸರಗೂರು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನೌಕರರ ಸಂಘದ ಅಧ್ಯಕ್ಷ ಸಿದ್ದರಾಜು, ಉದ್ಯಮಿ ಲಿಂಗರಾಜು, ಚಿಕ್ಕನಾಯಕ, ಆರ್‌ಎಫ್‌ಓ ಪುಟ್ಟರಾಜು, ಪುರಸಭಾ ಸದಸ್ಯ ಮಿಲ್ ನಾಗರಾಜು, ವಕೀಲರಾದ ಹನುಮೇಶ್, ನಾಗೇಶ್, ಮುಖಂಡರಾದ ನರಸಿಂಹೇಗೌಡ, ವೆಂಕಟಾಚಲ, ಶಿವಪ್ಪ, ನಿಂಗನಾಯಕ, ರವಿಕುಮಾರ್, ಕಾಂತನಾಯಕ, ಸಿದ್ದನಾಯ್ಕ, ಚನ್ನಪ್ಪ, ಸೋಮ ನಾಯಕ, ಶ್ರೀನಿವಾಸ್, ವೆಂಕಟರಂಗ ಸೇರಿದಂತೆ ಇನ್ನಿತರರಿದ್ದರು.

ಪಂ.ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ



ಮೈಸೂರು, ಜೂ2(ಎಂಕೆ)– ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ತಬಲ ವಾದಕ ಪಂಡಿತ್ ಬಿ.ಎಸ್.ವೇಣು ಗೋಪಾಲ ರಾಜು ಅವರಿಗೆ 2024ನೇ ಸಾಲಿನ 'ಪಂ.ಕೆ.ಎಸ್.ಹಡಪದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತೀ ರಮಾಗೋವಿಂದ್ ಕಲಾ ವೇದಿಕೆಯಲ್ಲಿ ದಿವಂಗತ ಪಂ.ಕೆ.ಎಸ್.ಹಡಪದ ಅವರ 18ನೇ ಪುಣ್ಯ ಸ್ಮರಣಾರ್ಥ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಸಂಗೀತ ಕಾರ್ಯಕ್ರಮದಲ್ಲಿ ಹಿರಿಯ ತಬಲಾ ಕಲಾವಿದ ಶಿವಪುತ್ರಪ್ಪ ಹೂಗಾರ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಕಾರ್ಯಕ್ರಮವನ್ನು ಉದ್ಘಾಟಿಸಿದ ರಘುಲೀಲ ಸಂಗೀತ ಮಂದಿರ ನಿರ್ದೇಶಕಿ ಸುನೀತ ಚಂದ್ರಕುಮಾರ್ ಮಾತನಾಡಿ, ಕಲೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಕಲೆ ಜೊತೆಗೆ ಯಾವುದೇ ಬೆರೆತರೂ ಜೀವಂತಿಕೆ ಪಡೆಯುತ್ತದೆ ಸುಸ್ಕಾರ ರೂಪುಗೊಳ್ಳುತ್ತದೆ ಎಂದರು.

ರಾಷ್ಟ್ರೀಯ ಕುಸ್ತಿಪಟು ಶಂಕರ್ ಎಸ್. ಕಳಿಗೊಣ್ಣವರ್ ಮಾತನಾಡಿ, ಜನ ಸಾಮಾನ್ಯರಿಗೆ ತಬಲಾ ಪರಿಚಯಿಸಿದ ಕೀರ್ತಿ ಹಡಪದ ಅವರಿಗೆ ಸಲ್ಲುತ್ತದೆ. ಹಡಪದ ಅವರಲ್ಲಿ ಸಂಗೀತ ಹಸಿವು ಬಹಳಷ್ಟಿತ್ತು. ಅಂದಿನ ಗಂಭೀರ ಪರಿಸ್ಥಿತಿ ಕಾಲದಲ್ಲಿ ನಿರಂತರ ಅಭ್ಯಾಸ ಮಾಡಿ ತಬಲಾ ಪ್ರಸಿದ್ಧಿ ಗೊಳಿಸಿದ್ದಾರೆ. ಗುರುಗಳು ನಮ್ಮೂರು ಮಲ್ಲಾಪುರದವರು ಎಂಬುದು ಹರ್ಷದ ಸಂಗತಿ. ಅವರನ್ನು ನೋಡಿಲ್ಲ, ಆದರೆ ಅವರ ಬಗ್ಗೆ ಕೇಳಿ ತಿಳಿದುಕೊಂಡಿರುವೆ ಎಂದು ಸ್ಮರಿಸಿದರು.

ತಬಲಾ ಸೋಲೋ...

ಪಂ.ಕೆ.ಎಸ್.ಹಡಪದ ಪ್ರಶಸ್ತಿ ಪುರಸ್ಕೃತ ಪಂ.ಬಿ.ಎಸ್.ವೇಣು ಗೋಪಾಲ ರಾಜು ತಬಲಾ ಸೋಲೋ ಕಾರ್ಯಕ್ರಮ ನೀಡಿದರು. ಪಂ.ರಂಜನ್ ಕುಮಾರ ಬೇವ್ರ ಲೆಹರಾ ಸಹಕಾರ ನೀಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ ನಡೆಯಿತು.

ಪ್ರಶಸ್ತಿ ಪುರಸ್ಕೃತ ಪಂ.ಬಿ.ಎಸ್.ವೇಣು ಗೋಪಾಲ ರಾಜು ಮಾತನಾಡಿ, ಮಹಾನುಭಾವರ ಪ್ರಶಸ್ತಿ ದೊರಕಿರುವುದು ಬಹಳ ದೊಡ್ಡವಿಷಯ ಹಾಗೂ ಖುಷಿ ತಂದಿದೆ. ಇವತ್ತಿನ ಈ ಸಮಾರಂಭ ಗುರು–ಶಿಷ್ಯರ ಬಂಧುತ್ವ ಮೂಡಿಸಿದ್ದು, ನನಗೂ ಮೈಸೂರಿಗೂ ಹಳೆಯ ನಂಟಿದೆ. ಮೈಸೂರಿನಲ್ಲಿ ಅನೇಕ ಸಂಗೀತ ಕಾರ್ಯಕ್ರಮ ಭಾಗವಹಿಸಿದ್ದೇನೆ ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಮ.ವಿ. ರಾಮಪ್ರಸಾದ್, ಅರಿವು ಶಾಲೆ ಮುಖ್ಯ ಶಿಕ್ಷಕಿ ಎಂ.ಜಿ.ಚೇತನಾ, ಆಕಾಶವಾಣಿ ಕಲಾವಿದ ಜಿ.ಎನ್.ಮಂಜುನಾಥ, ಹಾಗೂ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಅಧ್ಯಕ್ಷ ಭೀಮಾ ಶಂಕರ ಬಿಸನೂರ, ಉಪಾಧ್ಯಕ್ಷ ಮೃತ್ಯುಂಜಯ ಹಿರೇಮಠ ಮತ್ತಿತರರಿದ್ದರು.

ಜುಲೈ 21ಕ್ಕೆ ರಂಗಕರ್ಮಿಗಳಿಗೆ ಗುರುವಂದನೆ

ಮೈಸೂರು, ಜೂ.2(ಎಸ್‌ಬಿಡಿ)– ಮೈಸೂರಿನಲ್ಲಿ ಮುಂದಿನ ತಿಂಗಳು ರಂಗಕರ್ಮಿಗಳಿಗೆ ಬೃಹತ್ ಗುರು ವಂದನಾ ಕಾರ್ಯಕ್ರಮ ನಡೆಯಲಿದೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿನ ಮಡಿವಾಳ ಸ್ವಾಮಿ ಮಠದಲ್ಲಿ ಆನೇಕಲ್ಲಿನ ರೇಣುಕಾರಾಧ್ಯ ಕಲಾ ಸಂಘದ ವತಿಯಿಂದ ನಡೆದ ಪೂರ್ವಭಾವಿ ಸಭೆಯಲ್ಲಿ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿ, ಜುಲೈ 21 ರಂದು ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಚನ್ನಪಟ್ಟಣ, ರಾಮನಗರ, ಬೆಂಗಳೂರು ಜಿಲ್ಲೆಗಳ ಹಿರಿಯ ರಂಗಭೂಮಿ ನಿರ್ದೇಶಕರು, ಹಿರಿಯ ಸ್ತ್ರೀ ಪಾತ್ರಧಾರಿಗಳು, ಹಿರಿಯ ಪುರುಷ ಕಲಾವಿದರನ್ನು ಗೌರವಿಸಲು ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಹಿರಿಯ ರಂಗಭೂಮಿ ನಿರ್ದೇಶಕರಾದ ಬೀರಿಹುಂಡಿ ಗೋವಿಂದ ರಾಜು, ಸುತ್ತೂರು ಗುರುಶಾಂತಪ್ಪ, ಆನೇಕಲ್ಲಿನ ರೇಣುಕಾರಾಧ್ಯ ಕಲಾಸಂಘದ ಅಧ್ಯಕ್ಷ ರೇಣುಕಾರಾಧ್ಯ, ಸಂಘದ ಪದಾಧಿಕಾರಿಗಳಾದ ಮಾದೇಶ್ ಗೌಡ, ಕುಪೇಂದ್ರ ಗೌಡ, ಶ್ರೀನಿವಾಸ್, ಹಿರಿಯ ರಂಗಭೂಮಿ ಕಲಾವಿದರಾದ ಚಿಕ್ಕಹಳ್ಳಿ ಪುಟ್ಟಣ್ಣ, ಕೆರೆಹಳ್ಳಿ ಬಿ.ದೊರೆಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿಗಳಾದ ದೊಡ್ಡಹುಂಡಿ ಬಸವಣ್ಣ, ರಿಜ್ವಾನ್ ಕೆ.ಆರ್.ನಗರ, ಗುಂಡ್ಲುಪೇಟೆ ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಮರಿಸ್ವಾಮಿ, ಕೆ.ಜೆ.ಮರಿಸ್ವಾಮಿ ನಾಯಕ್, ವಸಂತ ಕುಮಾರ್, ಕಿರಗಸೂರು ಮಾದಪ್ಪ, ಪುರುಷೋತ್ತಮ್, ಕಾಳಿಸಿದ್ದನ ಹುಂಡಿ ಪರಸಿದ್ದೇಗೌಡ, ಸುತ್ತೂರು ನಾಗೇಶ್, ಚಕ್ರಪಾಣಿ, ಕೆಬ್ಬೆಹುಂಡಿ ಶಿವಕುಮಾರ್, ಬಾಗಳಿ ಮಹೇಶ್, ಕೆರೆಹಳ್ಳಿ ಡಿ.ಲೋಹಿತ್, ಹೂಟಗಳ್ಳಿ ನಾಗರಾಜು, ಪಾಪಣ್ಣ, ಮಂಜುನಾಥ, ಹೊಸಕೋಟೆ ಪ್ರಭುಸ್ವಾಮಿ, ಹೊಸಕೋಟೆ ಶಿವಮಲ್ಲು, ಸುಂದರ, ಸಕ್ಕಳ್ಳಿ ಜಯಣ್ಣ, ಮುಳ್ಳೂರು ಪಾರ್ವತಪ್ಪ, ಪಿಡಿಓ ಸೋಮಶೇಖರ್, ಡಿ.ಎಂ. ಮಹದೇವು, ಬೆಳಗಲಿ ಪವನ್, ಅಭಿ, ಚಂದ್ರು ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನಲ್ಲಿ ರಂಗಕರ್ಮಿಗಳಿಗೆ ಬೃಹತ್ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳುವ ಸಂಬಂಧ ಪೂರ್ವಭಾವಿ ಸಭೆ ನಡೆಸಿ, ರೂಪುರೇಷೆ ಬಗ್ಗೆ ಚರ್ಚಿಸಲಾಯಿತು.